CC-O. In Public Domain. Digitized by eGangotri

ಅರಣ್ಯಾಧಿಕಾರಿಯ ದಿನಚರಿ



Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಅರಣ್ಯಾಧಿಕಾರಿಯ ದಿನಚರಿ

'ಕಾಕೆಮಾನಿ'

ಐಬಿಎಚ್ ಪ್ರಕಾಶನ
ಗಾಂಧಿನಗರ, ಬೆಂಗಳೂರು 560 009

Sri Vidyabharathi Book Centre, Sringeri

CC-O. In Public Domain. Digitized by eGangotri

ARANYADHIKARIYA DINACHARI — Diary of a Forest Officer, written in Kannada by B. D. Subbaiah writing under the Pen name 'Kakemani' and Published by G. K. Ananthram for IBH Prakashana, Gandhinagar Bangalore-560 009.

© ಲೇಖಕರು, 1984

ಬೆಲೆ : ರೂ. 4-00

ಮುಖಪುಟ : ಎಸ್. ಆರ್. ಸ್ವಾಮಿ

ಮೊದಲನೆಯ ಮುದ್ರಣ : 1984. ಪ್ರಕಾಶಕರು : ಐಬಿಎಚ್ ಪ್ರಕಾಶನ ಇವರ ಪರವಾಗಿ ಜಿ. ಕೆ. ಅನಂತರಾಮ್ ಏಜೆನ್ಸಿಯ ಮುಖ್ಯಸ್ಥ ಗಾಂಧಿನಗರ ಬೆಂಗಳೂರು-560 009. ಮುದ್ರಕರು : ಎಚ್. ಎಸ್. ಎನ್. ರಾವ್ ಐಬಿಎಚ್ ಪ್ರಕಾಶನ ಪ್ರಿಂಟರಿ ರಾಮಯ್ಯ ಇಂಡಸ್ಟ್ರಿಯಲ್ ಎಸ್ಟೇಟ್ ಬೆಂಗಳೂರು-560 054.

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಸ್ತಾವನೆ

ಕಾಡು ಉಳಿಯಲಿ–ಬೆಳೆಯಲಿ ಎಂದು ಹೇಳುವ ನಾವು, ಕಾಡಿನ ವಿನಾಶಕ್ಕೆ, ಕಾಡಿನ ವನ್ಯ ಜಂತುಗಳ ನಾಶಕ್ಕೆ ಕಂಕಣಬದ್ಧರಾಗಿದ್ದೇವೆ. ಕಾಡಿನಲ್ಲಿರುವ ಅಪಾರ ಸಂಪತ್ತಿನ ಮೇಲೆ ಕಣ್ಣು ಹಾಯಿಸಿ, ಕಳ್ಳ ಸಾಗಣೆಗಾಗಿ ತಂಡ ತಂಡಗಳೇ ನಿರತವಾಗಿವೆ. ಹಾಗೆಯೇ ದೇಶದ ಸಂಪತ್ತು ಹಾಗೂ ದೇಶದ ಗೌರವ ಪ್ರತೀಕವಾದ ವನ್ಯ ಜಂತುಗಳ ಕಗ್ಗೊಲೆಯೇ ನಡೆಯುತ್ತಿದೆ.

ಇಂದು ಭಾರತದ ವನ್ಯ ಜಂತುಗಳು ಎದುರಿಸುತ್ತಿರುವ ಸಮಸ್ಯೆಗಳಲ್ಲಿ ಎರಡು ಪ್ರಮುಖವಾದವುಗಳು. ಮೊದಲನೆಯದಾಗಿ ಪ್ರಾಣಿಗಳ ಅಸ್ತಿತ್ವಕ್ಕೆ ಆಧಾರವಾಗಿರುವ ಕಾಡುಗಳ ಗಾತ್ರ ಕಡಿಮೆಯಾಗುತ್ತಿರುವುದು. ಎರಡನೆಯದು ಅಪಾರ ಲಾಭ ಗಳಿಸಿಕೊಡುವ ಪ್ರಾಣಿ ಪಕ್ಷಿಗಳ ಕಳ್ಳ ಸಾಗಾಣಿಕೆಯಲ್ಲಿ ನಿರತರಾಗಿರುವ ಅಂತರ ರಾಷ್ಟ್ರೀಯ ಕಳ್ಳರ ಜಾಲ.

ಹಿಂದೂ ದೇಶ, ತನ್ನ ವನ್ಯ ಪ್ರಾಣಿ ಸಂಪತ್ತಿಗೆ ಖ್ಯಾತಿ ಪಡೆದಿದೆ. ಆದರೆ ವಾಸ್ತವಿಕವಾಗಿ ನೋಡಿದರೆ ನಮಗೆ ಕಂಡುಬರುವ 'ವೇದಕಾಲ' ಪ್ರಾಣಿಗಳ ನೆಮ್ಮದಿಯ ಯುಗವೆಂಬುದು. ಅನಂತರ ಮಹಾಯುದ್ಧ ಕಾಲದಲ್ಲಿ ಬಳಕೆಯಾದ ಸಿಡಿಮದ್ದು ಬಂದೂಕು, ಜೀಪಿನ ಕಣ್ಣುಕೋರೈಸುವ ಬೆಳಕು ವನ್ಯ ಮೃಗಗಳ ಅವನತಿಗೆ ನಾಂದಿಯಾಯಿತು. ಇದರ ಜೊತೆಗೆ ಎರಡನೇ ಮಹಾಯುದ್ಧದ "ಗಂಡಾಂತರ ಯುಗ"ದಲ್ಲಿ ವನ್ಯ ಜಂತುಗಳ ಹತ್ಯಾಕಾಂಡವೇ ನಡೆಯಿತು. ಕಳೆದ 2000 ವರ್ಷಗಳಲ್ಲಿ 77 ಜಾತಿಯ ಮೃಗಗಳು ಜಗತ್ತಿನಿಂದ ಇಲ್ಲವಾಗಿವೆ. ಇದರಲ್ಲಿ 47 ಜಾತಿ, ಪ್ರಕೃತಿಯ ಆಯ್ಕೆಯಿಂದ ಆಳಿದರೆ, ಉಳಿದ 30 ಜಾತಿ ಮನುಷ್ಯನ ರಕ್ತದಾಹದಿಂದ ಕಾಣೆಯಾಗಿವೆ.

ಪ್ರಕೃತಿಯ ಸಮತೋಲನದಲ್ಲಿ ಪ್ರತಿಯೊಂದು ಜೀವಕ್ಕೂ ಆದರದೇ ಸ್ಥಾನಮಾನವಿದೆ. ಯಾವ ಒಂದು ಪ್ರಾಣಿಯೂ ಅಗತ್ಯಕ್ಕಿಂತ ಹೆಚ್ಚಾಗದಂತೆ ಪ್ರಕೃತಿಕ್ರಿಯೆ ನಡೆದಿದೆ. ಕಾಡಿಗೆ ಶೋಭೆಯೆನಿಸಿದ ಪ್ರಾಣಿಗಳು ಯಥೇಚ್ಛವಾಗಿ ಬೆಳೆದರೆ, ಮನುಷ್ಯನಿಗೆ ಮಾರಕವಾಗುವುದೆಂಬುದು ಸುಳ್ಳು. ಒಂದು ಹುಲಿಯು ಮರಿ ಹಾಕಿದರೆ, ಅದರಲ್ಲಿ ಉಳಿದುಳಿವ ಮರಿಗಳು ಒಂದೋ ಎರಡೋ. ಆದರೆ, ಕಾಡುಹಂದಿ 10 ರಿಂದ 20ರವರೆಗೂ ಮರಿಯು ಹಾಕು

Sri Vidyabharathi Book Centre, Sringeri

CC-O. In Public Domain. Digitized by eGangotri

ತ್ತವೆ. ಶೀಘ್ರ ಬೆಳೆಯುತ್ತವೆ. ಹಾಗೆಯೇ ದುಷ್ಟ ಜಂತುಗಳ ಆಹಾರವಾಗಿ ಶೀಘ್ರ ಪತನವಾಗುತ್ತವೆ. ಕಾಡಿನ ಸಸ್ಯಾಹಾರಿ ಪ್ರಾಣಿಗಳ ಹೆಚ್ಚಳ ನಿಯಂತ್ರಿಸಲು, ಹಿಂಸ್ರ ಪಶುಗಳಿವೆ. ಪ್ರಕೃತಿಯು, ಹಿಂಸ್ರ ಪಶುಗಳ ನಿಯಂತ್ರಣವನ್ನು ತಾನೇ ತಾನಾಗಿ ಮಾಡುತ್ತದೆ.

ಇದೆಲ್ಲಾ ಏಕೆ ಹೇಳಿದೆನೆಂದರೆ, ಬರೇ ಕಾಡಿದ್ದು, ಅದರಲ್ಲಿ ವನ್ಯ ಮೃಗಗಳಿಲ್ಲದಿದ್ದರೆ ಅದಕ್ಕೆ ಕೋಭೆಯಿಲ್ಲ. ನನ್ನ ಬಂಧುವಿನ ದಿನಚರಿಯಲ್ಲಿ ನಾನು ಕಂಡ ಸತ್ಯವೆಂದರೆ, ವನ್ಯ ಜೀವಿಗಳ ಭರತನಾಟ್ಯ, ಕಾಡು ಕುರುಬರ ಮೇಧಾವಿತನ, ನಿಸರ್ಗದ ಕೀಟಲೆ ಕೋಟಲೆ. ಇದಿಲ್ಲದ ಅಥವಾ ಅನುಭವಿಸದ ನಮ್ಮ ಯಾಂತ್ರಿಕ ಜೀವನ ನೀರಸ, ನಿರುಪಯೋಗ. ಪ್ರಕೃತಿಯಿತ್ತದ್ದನ್ನೆಲ್ಲಾ ನಾವು ಕೈಚಾಚಿ, ಭಸ್ಮಾಸುರನಂತೆ ಬೂದಿ ಮಾಡಿ, ಸ್ವಾರ್ಥಕ್ಕೆ ಉಪಯೋಗಿಸಿರುವುದರಿಂದಲೇ ಇಂದು ದೇಶದಲ್ಲಿ ಶಾಂತಿಯಿಲ್ಲ, ನೆಮ್ಮದಿಯಿಲ್ಲ, ಆನಂದವಿಲ್ಲ. ಪ್ರಕೃತಿಯ ವಿರುದ್ಧ ನಿಂತ ಮನುಷ್ಯ ನಿಜಕ್ಕೂ ತನ್ನ ಅವನತಿಯನ್ನು ತಾನೇ ಕಂಡುಕೊಳ್ಳುತ್ತಾನೆ.

ತಾಜಮಹಲಿನಂತಹ ಒಂದು ದಿವ್ಯ ಕಟ್ಟಡ ನಾಶವಾದರೆ, ಅದನ್ನು ಮರಳಿ ಕಟ್ಟಬಹುದು. ದಿಲ್ಲಿಯ ಕೆಂಪು ಕೋಟೆಯೇ ನೆಲಸಮವಾದರೂ ಮತ್ತೆ ಅಂತಹ ಕೋಟೆಗಳನ್ನು ಹತ್ತುಪಟ್ಟು ಬೃಹತ್ತಾಗಿ ಕಟ್ಟಿಸಬಹುದು. ಆದರೆ, ಸಿಂಹದಂತಹ, ಹುಲಿಯಂತಹ, ಒಂದು ಜೀವಿ ನಿರ್ನಾಮವಾದರೆ ಯಾರಿಂದಲೂ ಅವುಗಳ ಸಂತತಿಯನ್ನು ಬೆಳೆಸಲಾಗುವುದಿಲ್ಲ.

ಆಧುನಿಕತೆಯ ತುಟ್ಟತುದಿಗೇರಿರುವ ನಾವು ಕಾಡುಗಳನ್ನುಳಿಸಬೇಕು, ಬೆಳಸಬೇಕು, ಹಾಗೆಯೇ ಕಾಡಿನ ಸಂಪತ್ತಾದ ವನ್ಯ ಜೀವಿಗಳನ್ನು ಕಾಪಾಡಬೇಕು. ಅಂದರೇನೇ ಪ್ರಕೃತಿಯ ಸಮತೋಲನದಿಂದ ಎಲ್ಲರಿಗೂ ಕ್ಷೇಮ, ಶಾಂತಿ, ಸುಖ ಸಂಪತ್ತಿನ ಹಿಂದೆ ಬಿದ್ದಿರುವ ಮಾನವನೂ ಬದುಕುಳಿದಾನು. ಸರ್ವನಾಶದ ಮೊದಲು ಈ ಎರಡು ಮಾತುಗಳನ್ನು ಒರೆಗಲ್ಲಿಗೆ ಹಚ್ಚಿ ಸತ್ಯಾನ್ವೇಷಣೆ ಮಾಡಲಿ ಎಂಬುದೇ ನನ್ನ ಬಯಕೆ.

ಎ. ಸಿ. ಲಕ್ಷ್ಮಣ್, ಐ.ಎಫ್.ಎಸ್.,

Sri Vidyabharathi Book Centre, Sringeri

CC-O. In Public Domain. Digitized by eGangotri

ಓದುವ ಮುಂಚೆ....

ಈ ಒಂದು ದಿನಚರಿ ನನಗೆ ಆಕಸ್ಮಿಕವಾಗಿ ನನ್ನ ಬಂಧುವಿನ ಮನೆಯಲ್ಲಿ ದೊರಕಿತು. ನಾನು ಕಾರ್ಯಾರ್ಥವಾಗಿ ಅವರಲ್ಲಿಗೆ ಹೋಗಿದ್ದಾಗ, ಹಳೆಯ ಕಡತಗಳ ಮೇಲೆ ಕೈಯಾಡಿಸಿದೆ. ಅದರಲ್ಲಿ ಹಲವಾರು ಮನರಂಜನೀಯವಾದ ಅಂಶಗಳನ್ನು ಕಂಡೆ. ಪ್ರತಿ ದಿನ ದಿನಚರಿಯನ್ನು ಬರೆದ ನನ್ನ ಬಂಧುಗಳ ಡೈರಿಯಿಂದ ಸ್ವಾರಸ್ಯವಿರುವುದನ್ನು ಕತೆಯಂತೆ ಹೆಣೆದ ಜವಾಬ್ದಾರಿ ಮಾತ್ರ ನನ್ನದು.

ಅವರು ಅರಣ್ಯ ಇಲಾಖೆಯಲ್ಲಿ ನೌಕರಿಗೆ ಸೇರಿದ್ದು 1864ರಲ್ಲಿ. ಅಂದಿನ ಕಾಲದ ನೌಕರಿಯ ವೈಖರಿ, ಕಾಡು, ಕಾಡಿನ ಜೀವನ, ಕಾಡು ಪ್ರಾಣಿಗಳ ಉಪಟಳ, ಕಾಡಾಡಿ ಕುರುಬರಲ್ಲಿ ಇದ್ದ ಮಂತ್ರ ತಂತ್ರದ ವಿದ್ಯೆ ದಂಗು ಬಡಿಸುವಂತಾದ್ದು. ಸುಮಾರು ಹದಿನೆಂಟು ವರ್ಷಗಳ ಅರಣ್ಯ ಜೀವನವನ್ನು ಅನುಭವಿಸಿ, ತನ್ನ ದಿನಚರಿಯಲ್ಲಿ ಚಾಚೂ ತಪ್ಪದೆ ಬರೆದ ಅವರ ಮುಂದೃಷ್ಟಿ ನಿಜಕ್ಕೂ ಶ್ಲಾಘನೀಯವಾದದ್ದು.

ಅಂದಿನ ಕಾಡಿನ ಪರಿಸರ ಇಂದಿಲ್ಲ. ಇಂದಿನವರಿಗೆ ಅದು ಅರ್ಥವೂ ಕೂಡ ಆಗದು. ತನ್ನ ದಿನಚರಿಯಿಂದ ಮುಂದಿನ ಪೀಳಿಗೆಗೆ ಒಂದಿಷ್ಟಾದರೂ ಅದರ ಚಿತ್ರ ಮನಗಾಣಲೆಂದು ಅವರು ದಿನಚರಿಯನ್ನು ಬರೆದಿರಬೇಕು.

ಈ ದಿನಚರಿಯಿಂದ ಆರಿಸಿದ ಕೆಲವು ಕತೆಗಳನ್ನು ಸುಧಾ, ಕಸ್ತೂರಿ, ಇಂಚರ, ಪ್ರಜಾಮತಗಳಲ್ಲಿ ಪ್ರಕಟಿಸಿದ್ದೇನೆ. ಆ ಕತೆಗಳಿಗೆ ಸಿಕ್ಕಿದ ಮನ್ನಣೆಯಿಂದ ಈ ಪುಸ್ತಕದ ಸಾಹಸಕ್ಕೆ ಕೈಯಿಕ್ಕಿದ್ದೇನೆ.

ಓದುಗರಿಗೆ ಈ ಕೃತಿ ರಂಜಿತವಾದರೆ ನನ್ನ ಪ್ರಯತ್ನಕ್ಕೆ ಬೆಲೆ ಬಂತೆಂದು ತಿಳಿದುಕೊಳ್ಳುತ್ತೇನೆ.

'ಶ್ರೀನಿಕೇತನ್' 'ಕಾಕೆಮಾನಿ'

ಬ್ರಾಹ್ಮಣರ ಬೀದಿ, ಮಡಿಕೇರಿ

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಅರಣ್ಯಾಧಿಕಾರಿಯ ದಿನಚರಿಯಿಂದ

ನಾನು ಎಸ್. ಎಸ್. ಎಲ್. ಸಿ. ನಾಪಾಸಾದಾಗ ನಮ್ಮ ಮನೆಯಲ್ಲಿ ಎಲ್ಲರೂ ಛೇಡಿಸುವವರೇ ! ಯಾರಿಗೂ ನನ್ನ ಮೇಲೆ ಕನಿಕರವಿರಲಿಲ್ಲ. ನನಗಿದ್ದ ಹವ್ಯಾಸ ಬೇಟೆ, ಕಾಡು ಸುತ್ತುವಿಕೆ, ಕಾಡು ಪ್ರಾಣಿಗಳನ್ನು ನೋಡಿ, ಅವುಗಳ ಗುಣವಿಶೇಷಗಳನ್ನು ತಿಳಿಯುವುದು. ಈ ಗೀಳು ಹಿಡಿದ ಸ್ವತಂತ್ರ ಮನೋಭಾವದ ನನಗೆ, ವಿದ್ಯೆಯಾದರೂ ತಲೆಗೆ ಹತ್ತುವುದು ಹೇಗೆ ? ಈಗ ನಾಪಾಸಾದಾಗ ಬೆಂಕಿಗೆ ಎಣ್ಣೆ ಹೊಯ್ದಂತಾಗಿ, ನಾನು ಮನೆಯಲ್ಲಿರುವುದೇ ದುಸ್ತರವಾಯಿತು. ರೋಸಿಹೋದ ನಾನು ತಾಯಿಯ ಕೈಕಾಲು ಹಿಡಿದು ಮನೆಗೆ ಶರಣೆಂದು ನನ್ನ ದಾರಿ ಹಿಡಿದೆ.

ಮನೆಯಿಂದ ಹೊರಬಂದಾಗ, ನನಗೆ ಪ್ರಪಂಚ ಜ್ಞಾನವೇ ಇರಲಿಲ್ಲ. ಭವಿಷ್ಯದ ರೂಪರೇಖೆಗಳನ್ನು ಚಿಂತಿಸಿರಲಿಲ್ಲ. ಮನೆ ಬಿಟ್ಟಾಯಿತು, ಹೊಟ್ಟೆ ಪಾಡಿಗಾಗಿ ಏನಾದರೊಂದು ಕೆಲಸ ಹುಡುಕಲೇ ಬೇಕಾಗಿತ್ತು.

ಆಗ ಬ್ರಿಟಿಪರ ಕಾಲ ನಡೆಯುತ್ತಿತ್ತು. ನಾನು ಪ್ರಯಾಸದಿಂದ ನಡೆದು ಪಟ್ಟಣ ಸೇರಿದಾಗ, ನೀರಿಂದೆತ್ತಿ ಬಿಟ್ಟ ಮೀನಿನಂತೆ, ನನ್ನ ಸ್ಥಿತಿಯಿದ್ದಿತು. ಯಾರೋ ಒಬ್ಬ ಪ್ರಣ್ಯಾತ್ಮರು ನನ್ನನ್ನು ಫಾರೆಸ್ಟ್ ಗಾರ್ಡ್ (ಅರಣ್ಯ ರಕ್ಷಕ) ಕೆಲಸಕ್ಕೆ ಆಯ್ಕೆಮಾಡುತ್ತಿರುವ ಸ್ಥಳ ತೋರಿಸಿದರು. ಒಬ್ಬ ಆಂಗ್ಲ ಅಧಿಕಾರಿಯು ಆಯ್ಕೆ ಮಾಡುತ್ತಿದ್ದ.

ದೇವರು ಒಳ್ಳೆಯ ದೇಹದಾರ್ಢ್ಯ ಮತ್ತು ಸುಂದರ ಮುಖವನ್ನು ಕೊಟ್ಟಿದ್ದರಿಂದ, ಅಧಿಕಾರಿಯು ನನ್ನ ಮುಖವನ್ನು ನೋಡಿ, 'ಎಸ್' ಎಂದು ಮುಂದೆ ನಡೆಯಲು ಹೇಳಿದ. ಮತ್ತೊಬ್ಬ ನನ್ನ ಹೆಸರನ್ನು ಕೇಳಿ ಬರೆದುಕೊಂಡ. ಇಷ್ಟು ಸುಲಭದಲ್ಲಿ ನಾನು ಆರಿಸಲ್ಪಡುತ್ತೇನೆಂದು ಕನಸು ಮನಸ್ಸಿನಲ್ಲೂ ತಿಳಿದಿರಲಿಲ್ಲ. ಬ್ರಿಟಿಪರಿಗೆ ದೇಹದಾರ್ಢ್ಯ ಮಾತ್ರ ಬೇಕಿತ್ತು. ತಲೆಯೊಳಗೆ ಏನಾದರಿದೆಯೇ ? ಎಂದು ಪರೀಕ್ಷಿಸುವ ಗೋಜಿಗೆ ಅವರು ಹೋಗಲಿಲ್ಲ. ಇದರಿಂದ ಒಂದು ಚಕ್ರಾಧಿಪತ್ಯವನ್ನೇ ಗೆದ್ದಷ್ಟು ಸಂತೋಷಗೊಂಡೆನು.

Sri Vidyabharathi Book Centre, Sringeri

CC-O. In Public Domain. Digitized by eGangotri

ಮರುದಿನ ನನ್ನ ಕೈಗೊಂದು ಪತ್ರಕೊಟ್ಟು 'ಮೂರ್ಕಲ್' ಎಂಬ ರೇಂಜಿಗೆ ಹೋಗಿ, ಅಧಿಕಾರಿಯನ್ನು ಕಾಣುವಂತೆ ಹೇಳಲಾಯಿತು.

ಆಗ ಬಸ್ಸು ಸೌಕರ್ಯಗಳಿರಲಿಲ್ಲ. ನಡೆದು ನಡೆದು ಸಾಕಾಗಿ ಮರು ದಿನ ಮೂರ್ಕಲ್ ರೇಂಜನ್ನು ತಲುಪಿದಾಗ ಸಾಯಂಕಾಲವಾಗಿತ್ತು. ಇಡೀ ಪ್ರಯಾಣದಿಂದ ನಾನು ಬಳಲಿದ್ದೆ. ಅಲ್ಲಿಯ ರೇಂಜ್ ಆಫೀಸರು ಬ್ರಿಟಿಷ ನಾಗಿದ್ದು, ಪ್ರೀತಿಯಿಂದಲೇ ಸ್ವಾಗತಿಸಿದನು. ಕಚೇರಿಯ ಮುಂದಿನ ಕೋಣೆ ಯನ್ನು ನನಗೆ ಕೊಡಲಾಯಿತು.

ರೇಂಜರಿಗೆ ಅಲ್ಲಿಯ ಗಾರ್ಡೇ ಅಡಿಗೆಯಿಂದ ಹಿಡಿದು ಎಲ್ಲ ಕೆಲಸ ಗಳನ್ನು ಮಾಡುತ್ತಿದ್ದ. ಹೊಸಬನಾಗಿ ಹೋದದ್ದು ಹಳೇ ಗಾರ್ಡಿಗೆ ಸಂತೋಷವಾಗಿರಬೇಕು. ಆತನ ಅರ್ಧ ಕೆಲಸ ನನ್ನ ಮೇಲೆ ಬಿದ್ದಿತು. ರೇಂಜರರ ಅಧಿಕಾರ ಹಳೇ ಗಾರ್ಡಿನ ಮೇಲಾದರೆ, ಹಳೆ ಗಾರ್ಡು ನನ್ನ ಮೇಲೆ ಅಧಿಕಾರ ಚಲಾಯಿಸತೊಡಗಿದ.

ಜೀವಮಾನದಲ್ಲಿ, ಅಡಿಗೆ ಮಾಡುವುದಿರಲಿ, ಒಲೆ ಹತ್ತಿಸಲೂ ಸಹ ಬಾರದ ನನ್ನನ್ನು ಹಳೇ ಗಾರ್ಡು ತನ್ನ ಅಧಿಕಾರದಿಂದ ಕಾಡಿಸುತ್ತಿದ್ದಾಗ, ನನಗೆ ನಾನೇ ಮರುಕಪಟ್ಟು "ನಾನಿಷ್ಟು ಸಣ್ಣವನಾದೆನಲ್ಲಾ" ಎಂದನಿಸು ತ್ತಿತ್ತು. ಮನೆಬಿಟ್ಟು ಏನೋ ಸಾಮ್ರಾಜ್ಯ ಗೆಲ್ಲುವವನಂತೆ ಹೊರಬಿದ್ದ ನನಗೆ ಈ ನೌಕರಿಯಲ್ಲದೆ ಬೇರೆ ಗತಿಯಿರಲಿಲ್ಲ. ರೇಂಜರರ ಹಳೇ ಗಾರ್ಡಿನ ದರ್ಪ-ದೌಲತ್ತು, ಸಿಕ್ಕುತ್ತಿದ್ದ ಅವಮಾನಕರ ಅವಾಚ್ಯಶಬ್ದಗಳು ನನ್ನನ್ನು ರೇಗಿಸುತ್ತಿದ್ದರೂ, ದಿಕ್ಕುದೆಸೆಯಿಲ್ಲದ ನನ್ನನ್ನು ಆ ಕಾಡಿನಲ್ಲಿ ಕೇಳುವವರಾರು ?

ದಿನಕಳೆದಂತೆ ಆ ವಿಪರೀತ ವಾತಾವರಣ ಒಗ್ಗತೊಡಗಿತು. ಮೈಗೂ ಡಿಸಿಕೊಳ್ಳದಿದ್ದರೆ ಬೇರೆ ಗತಿಬೇಕಲ್ಲಾ ! ನೌಕರಿಗಾಗಿ ಆಸೆಪಟ್ಟು ಹೊಂಡಕ್ಕೆ ಹಾರಿದವನಲ್ಲವೇ ?

ಒಂದು ದಿವಸ ರೇಂಜರು ಮತ್ತು ಹಳೇ ಗಾರ್ಡು ರೇಂಜಾಫೀಸಿನಿಂದ ಸುಮಾರು ಹನ್ನೆರಡು ಮೈಲು ದೂರವಿರುವ ಗಡಿ ಕಚೇರಿಗೆ ಕಾರ್ಯಾರ್ಥವಾಗಿ ಹೋಗಿದ್ದರು. ರಾತ್ರಿ ಬರುವ ಆಥವಾ ಬರದಿರುವ ವಿಚಾರವನ್ನು ನನಗೆ ಹೇಳದೆ, ನನ್ನೊಬ್ಬನನ್ನೇ ಆ ಗೊಂಡಾರಣ್ಯದಲ್ಲಿ ಬಿಟ್ಟು ಹೋಗಿದ್ದರು. ಬಂಗ್ಲೆಯೋ ಬಿಕೋ ಎನ್ನುತ್ತಿತ್ತು. ಹಗಲು ಹೊತ್ತಿನಲ್ಲೇ ನನಗೆ ಗಾಬರಿ ಯಾಗಿತ್ತು.

CC-O. In Public Domain. Digitized by eGangotri

ನಮ್ಮ ರೇಂಜಾಫೀಸಿಗೆ ಹತ್ತಿರದಲ್ಲಿ ನೀರು ದೊರಕುತ್ತಿರಲಿಲ್ಲವಾದುದ ರಿಂದ ನೀರು ಹೊರಲು ನಮಗೊಂದು ಕತ್ತೆಯಿತ್ತು. ಅದರ ಬೆನ್ನಿನ ಎರಡು ಪಾರ್ಶ್ವಗಳಲ್ಲಿ ಟಿನ್ನುಗಳನ್ನು ಕಟ್ಟಿ, ಒಂದು ಫರ್ಲಾಂಗಿನಷ್ಟು ದೂರದಲ್ಲಿದ್ದ ಕೆರೆಯಿಂದ ನೀರು ತರಬೇಕಿತ್ತು. ಕತ್ತೆಯನ್ನು ಸರಕಾರವು ದಯಪಾಲಿಸಿದ್ದ ರಿಂದ ಅದನ್ನು ಹಿಂಸ್ರಪಶುಗಳಿಂದ ತಪ್ಪಿಸಿ, ಅತೀ ಜಾಗ್ರತೆಯಿಂದ ನೋಡು ತ್ತಿದ್ದೆವು.

ರಾತ್ರಿಯಾಗುತ್ತಾ ನನಗೆ ಆ ಕಟ್ಟಡದಲ್ಲಿರಲು ಹೆದರಿಕೆಯಾಗುತ್ತಿತ್ತು. ಆದರೆ, ಬೇರೆ ಗತ್ಯಂತರವೇ ಇರಲಿಲ್ಲ. ಆಜುಬಾಜಿನಲ್ಲಿ ಒಂದು ನರಜಂತು ವನ್ನೂ ಕಾಣದ ಆ ಪರಿಸರವು ನನ್ನನ್ನು ಅಂಜುವಂತೆ ಮಾಡಿತ್ತು.

ನಾನು ಊಟ ಮಾಡಿ, ಮಲಗುವ ಸಿದ್ಧತೆ ನಡೆಸಿದಾಗ ಸುಮಾರು ಎಂಟು ಗಂಟೆಯಾಗಿರಬಹುದು. ಆ ಅಪರಾತ್ರಿಯಲ್ಲಿ ರೇಂಜರು ಮತ್ತು ಗಾರ್ಡು ಬರುವುದಿಲ್ಲವೆಂದು ಮನವರಿಕೆ ಮಾಡಿಕೊಂಡು, ಬಾಗಿಲನ್ನು ಭದ್ರ ವಾಗಿ ಮುಚ್ಚಿದೆನು. ಬಾಗಿಲು ಮುಚ್ಚಿ, ಕಂದೀಲನ್ನು ಹತ್ತಿರ ಇಟ್ಟುಕೊಂಡು, ಹಾಸಿಗೆ ಹಾಸುತ್ತಿದ್ದಾಗ, ನನಗೆ ನಮ್ಮ ಕತ್ತೆಯ ಯೋಚನೆಯಾಯಿತು. ಅದನ್ನು ಯಾವಾಗಲೂ ತಂದು ಕಚೇರಿ ಕಟ್ಟಡದ ಹೊರಗಿನ ಕೋಣೆಯಲ್ಲಿ ಕಟ್ಟಿ, ಬಾಗಿಲು ಮುಚ್ಚಿ ಜೋಪಾನ ಮಾಡುತ್ತಿದ್ದೆವು. ಇಲ್ಲದಿದ್ದರೆ, ಹೆದ ರಿಕೆಯಿಲ್ಲದೆ ತಿರುಗುವ, ಹುಲಿ, ಚಿರತೆ, ಕೆನ್ನಾಯಿಗಳು ಅದನ್ನು ಉಳಿಸು ಯಾವೇ ? ಈಗ ಕತ್ತೆಯನ್ನು ಕಟ್ಟಲು ಮರೆತಿದ್ದೆ. ಅದನ್ನು ಹುಡುಕಲು ಆ ಗಾಢಾಂಧಕಾರದಲ್ಲಿ ಹೊರಗಿಳಿಯಲು ನನಗೆ ಧೈರ್ಯವಿಲ್ಲ. ದೇವರ ಮೇಲೆ ಭಾರಹಾಕಿ, ರೇಂಜರು ಮತ್ತು ಗಾರ್ಡು ಬರಬಹುದೆಂಬ ಕಳ್ಳನಂಬಿಕೆ ಯಿಂದ ಕಂಬಳಿಹೊದ್ದು ಮುದುಡಿಕೊಂಡೆ.

ಎಷ್ಟು ಹೊತ್ತಾದರೂ ನಿದ್ರೆಯೇ ಬರಲಿಲ್ಲ. ರೇಂಜರನ ಮತ್ತು ಹಳೇ ಗಾರ್ಡಿನ ಸುಳಿವಿಲ್ಲ. ಬಂಗ್ಲೆಯ ಸುತ್ತು ಕಾಡುಪ್ರಾಣಿಗಳು ತಿರುಗುತ್ತಿ ರುವುದು ಕೇಳುತ್ತಿತ್ತು. ಮಧ್ಯರಾತ್ರಿಯಲ್ಲಿ ನಮ್ಮ ಕಚೇರಿಯ ಹಿಂಬದಿಯ ಲ್ಲಿದ್ದ ತಾತ್ಕಾಲಿಕ ಮಿಾಯುವ ಮತ್ತು ಸೌದೆ ಒಟ್ಟುವ ಕಟ್ಟಡ ತನ್ನಿಂದ ತಾನೇ ದಡಾರನೆ ಉರುಳಿಬಿತ್ತು. ಆದರೆ, ನನಗೆ ಏಳುವುದಿರಲಿ, ಉಸಿರಾ ಡಲೂ ಧೈರ್ಯವಿರಲಿಲ್ಲ.

ಹೇಗೋ ರಾತ್ರಿ ಕಳೆಯಿತು. ಬೆಳಿಗ್ಗೆ ಅಂಜುತ್ತಾ, ಅಳುಕುತ್ತಾ ಬಾಗಿಲು ತೆರೆದಾಗ, ಕಚೇರಿಯ ಮುಂಭಾಗದಲ್ಲಿದ್ದ ಹತ್ತಾರು ಬಾಳೆಯ ಗಿಡ

Sri Vidyabharathi Book Centre, Sringeri

CC-O. In Public Domain. Digitized by eGangotri

ಗಳೆಲ್ಲಾ ನಾಶವಾಗಿದ್ದವು. ಕಾಡಾನೆಯೊಂದು ಬಂದು ನಾಶಮಾಡಿ, ವಿಶಾಯುವ ಕಟ್ಟಡವನ್ನು ಉರುಳಿಸಿತ್ತು. ಆ ಕಟ್ಟಡವನ್ನು ಕಂಡಾಗ ಅದರ ಮೈತುರಿಸಿರಬೇಕು, ಅಲ್ಲದಿದ್ದರೆ, ಆ ಕಟ್ಟಡವನ್ನೇಕೆ ಬೀಳಿಸಬೇಕು ? ರೇಂಜರು ಮತ್ತು ಹಳೆಯ ಗಾರ್ಡಿಲ್ಲದ ಸಮಯವನ್ನೇ ಕಾಯುತ್ತಿತ್ತೆ ? ನನ್ನ ದುರಾದೃಷ್ಟವನ್ನು ಹಳಿಯುತ್ತಾ ಕತ್ತೆ ಕಟ್ಟುವ ಕೋಣೆಗೆ ಬಂದೆ. ಅಲ್ಲಿ ಕತ್ತೆಯಿರಲಿಲ್ಲ, ಬದಲು ಸುಮಾರು ಇಪ್ಪತ್ತು ಗಜಗಳ ದೂರದಲ್ಲಿ ಅದರ ಕುತ್ತಿಗೆಗೆ ಕಟ್ಟಿದ ಹಗ್ಗವು ಸಣ್ಣ ಒಂದು ಮರಕ್ಕೆ ಸಿಕ್ಕಿಕೊಂಡು, ಕಾಡಿನೊಳಕ್ಕೆ ಎಳೆಯಲ್ಪಟ್ಟಿತ್ತು. ಏನೇ ಆಗಲಿ ಕತ್ತೆ ಮೇಯುತ್ತಿದೆಯೆಂದು ಹತ್ತಿರ ಹೋಗಿ ನೋಡಿದರೆ, ಕತ್ತೆಯನ್ನು ಬಿದಿರ ಮೆಳೆಯಡಿಯಲ್ಲಿ ಕೊಂದು, ಹುಲಿಯೋ ಚಿರತೆಯೋ ಅರ್ಧ ಭಾಗ ತಿಂದುಹಾಕಿತ್ತು. ನನ್ನ ಜಂಘಾಬಲವೇ ಉಡುಗಿಹೋಯಿತು. ಈ ದುರಾದೃಷ್ಟವನ್ನು ಯಾರೊಡನೆ ಹೇಳುವುದು ? ಇಷ್ಟೆಲ್ಲಾ ಅವಘಡಗಳು ನಾನಿರುವಾಗಲೇ ಆಗಬೇಕೆ ? ನನ್ನ ಕಷ್ಟವನ್ನು ಹೇಳಿಕೊಳ್ಳೋಣವೆಂದರೆ ಹತ್ತಿರದಲ್ಲಿ ನರಪಿಳ್ಳೆಯಾದರೂ ಬೇಡವೇ ?

ಬಂಗ್ಲೆಯಲ್ಲೊಂದು ಕೋವಿಯಿತ್ತು. ಅದನ್ನಾದರೂ ರೇಂಜರು ಕೊಟ್ಟು ಹೋಗಿದ್ದರೆ, ಅದನ್ನು ತನ್ನ ಕೋಣೆಯಲ್ಲಿಟ್ಟು ಭದ್ರಪಡಿಸಿ ಹೋಗಿದ್ದರು. ರಾತ್ರಿ ನಾನು ಒಬ್ಬನೇ ಇರುವುದೆಂದು ತಿಳಿದೂ, ಅವರು ಕೋವಿಯನ್ನು ಕೊಡದೆ ಹೋದರಲ್ಲಾ ಎಂದು ಯಾವುದೋ ಮೂರು ಲೋಕವನ್ನು ಜಯಿಸುವವನಂತೆ ನನಗೆ ನಾನೇ ಗೊಣಗಿಕೊಂಡೆ.

ರೇಂಜರನ ಒಂದೇ ದಿವಸದ ಗೈರುಹಾಜರಿನಲ್ಲಿ ಸರ್ವನಾಶವಾಗಿತ್ತು. ನನ್ನಲ್ಲಿದ್ದ ಅಳಿದುಳಿದ ಧೈರ್ಯವೂ ಉಡುಗಿತ್ತು. ರಾತ್ರಿಯಿಡೀ ಕಾಡು ಪ್ರಾಣಿಗಳು ಧಾಳಿ ನಡೆಸುತ್ತಿದ್ದುದನ್ನು ತಿಳಿದೂ ಮುದುಡಿಕೊಂಡು ಮೂಲೆಯಲ್ಲಿ ಕೂತ ನನ್ನ ಧೈರ್ಯ ಎಂತಹದ್ದೆಂದು ಅವರಿಗೆ ತಿಳಿಯುವಂತಾಯಿತಲ್ಲಾ ಎಂದು ಬೇಸರ ಪಟ್ಟೆ. ಆಂಜನೂರಕನೆಂದು ಹೇಳಿಸಿಕೊಳ್ಳುವುದು ಬೇಕಿರಲಿಲ್ಲ. ಆದರೆ, ಕಾರ್ಯ ಮಿಂಚಿ ಹೋಗಿತ್ತು.

ದಿನವಿಡೀ ಇದೇ ಚಿಂತನೆಯಲ್ಲಿ ಕಳೆದೆ. ರಾತ್ರಿಯಾಗುತ್ತಿತ್ತು, ರೇಂಜರು ಮತ್ತು ಗಾರ್ಡು ತಮ್ಮ ಕೈಗಳಲ್ಲಿ ಏನನ್ನೋ ಹಿಡಿದುಕೊಂಡು ಬರುತ್ತಿದ್ದುದನ್ನು ನೋಡಿದೆ. ಬಂಗ್ಲೆಗೆ ಅವರು ತಲಪಿದಾಗ ಅಡಿಗೆ ಮನೆಯಲ್ಲಿ

CC-O. In Public Domain. Digitized by eGangotri

ಅದೇನೋ ಬಹಳ ಕೆಲಸ ಮಾಡುವವನಂತೆ ನಟಿಸುತ್ತಿದ್ದೆ. ಅವರನ್ನು ಮುಖಾಮುಖಿ ಎದುರಿಸುವ ಸ್ಥೈರ್ಯ ನನ್ನಲ್ಲಿರಲಿಲ್ಲ.

ಬಾಳೆಯ ಗಿಡಗಳು ಹಾಳಾಗಿರುವುದನ್ನು ಕಂಡ ರೇಂಜರು ಹಾರಾಡ ತೊಡಗಿದರು. ಸೌದೆಕೊಟ್ಟಿಗೆ ಅಂಗಾತ ಬಿದ್ದಿರುವುದನ್ನು ಕಂಡು, ಗಾರ್ಡು ಬಂದು ಹೇಳಿದಾಗ ಬೆಂಕಿಗೆ ತುಪ್ಪ ಹೊಯ್ದಂತಾಯಿತು. ಇದನ್ನೆಲ್ಲಾ ಕೇಳಿ ಕೊಂಡು ತೆಪ್ಪಗಿದ್ದರೂ ಕತ್ತೆಯ ಕತೆ ಹೊರಬರದ್ದರಿಂದ ಹಾಗೆಯೇ ತೆಪ್ಪಗಾದೆ.

ರಾತ್ರಿಯಾಯಿತು, ರೇಂಜರರು ಇದ್ದಕ್ಕಿದ್ದಂತೆ ಸ್ನಾನ ಮಾಡಬೇಕೆಂದು ಹೇಳಿದರು. ಕೆರೆಯಿಂದ ನೀರು ತರುವುದಾದರೂ ಹೇಗೆ ? ಕೈಯಲ್ಲಿ ಟಿನ್ನು ಗಳನ್ನು ಹಿಡಿದು ಅಪ್ಪಣೆಯಂತೆ ನೀರು ತರಲು ಆಣಿಯಾದೆ. ಅಂಧಕಾರ ಕವಿದಿತ್ತು ನನಗೆ ದಿಕ್ಕೇ ತೋಚದಂತಾಯಿತು. ಎರಡು ಫರ್ಲಾಂಗ್‌ನಷ್ಟು ಕತ್ತಲಲ್ಲಿ ನಡೆದು, ನೀರು ತರುವ ಛಾತಿ ನನಲ್ಲಿರಲಿಲ್ಲ. ನಿಶಾಚರಗಳು ತುಂಬಿದ ಆ ಅರಣ್ಯ ಮಧ್ಯದಲ್ಲಿರುವ ಆ ಕೆರೆಯಿಂದ ಎರಡು ಟಿನ್ನು ನೀರು ಹೊತ್ತು ತರುವ ಧೈರ್ಯ ಈ ಅನನುಭವಿಗೆ ಅದು ಹೇಗೆತಾನೆ ಬಂದೀತು ? ನನಗೆ ಹಳೇ ಗಾರ್ಡು ಸಹಾಯ ಮಾಡದ್ದರಿಂದ, ನಾನು ಹೊರಡಲೇ ಬೇಕಾಯಿತು.

ನಕ್ಷತ್ರಗಳ ನಸು ಬೆಳಕಿನಲ್ಲಿ ಕೆರೆ ತಲುಪಿದಾಗ ಕೆರೆಯ ಮತ್ತೊಂದು ಪಾರ್ಶ್ವದಲ್ಲಿ ಆನೆಗಳು ನೀರಾಟವಾಡುತ್ತಿರುವ ಶಬ್ದ ಕೇಳುತ್ತಿತ್ತು. ಹೆದರಿವ ನಾನು, ಅದು ಹೇಗೆ ನೀರು ತುಂಬಿಸಿ ಹೆಗಲ ಮೇಲಿಟ್ಟು ನಡೆದೆನೋ ತಿಳಿಯದು. ಬಂಗ್ಲೆ ತಲಪಿದಾಗ ಅರ್ಧ ನೀರು ಟಿನ್ನಿನಿಂದ ತುಳುಕಿ ನಾನು ಒದ್ದೆಯಾಗಿದ್ದೆ. ಮತ್ತರ್ಧ ನೀರು ಎರಡು ಟಿನ್ನುಗಳಲ್ಲಿದ್ದು, ಬಂಗ್ಲೆಯ ಮೆಟ್ಟಲು ಹತ್ತಿದಾಗ ಎಡವಿ ಮುಗ್ಗರಿಸಿ ಬಿದ್ದೆ. ಬಿದ್ದವನು ಕತ್ತಲಲ್ಲಿ ಮೆಟ್ಟಲಿನಿಂದ ಕೆಳಗುರುಳಿದೆ. ನಾನು ಗಾಬರಿಯಿಂದ ಸ್ಥಿರ ಬುದ್ಧಿಯನ್ನೂ ಕಳೆದುಕೊಂಡಿದ್ದೆ.

ರೇಂಜರರು ಈ ಶಬ್ದ ಕೇಳಿ, ಹೊರ ಬಂದು ಮತ್ತೂ ಎಗರಾಡಿದರು. ನಾನು ತುಟಿಪಿಟಿಕ್ಕೆನ್ನದೆ ಮೂಲೆ ಹಿಡಿದು ಕೂತೆ. ಇಂತಹ ನಿಸ್ಸಹಾಯಕ ಸ್ಥಿತಿಯನ್ನು ನಾನೆಂದೂ ಅನುಭವಿಸಿದವನಲ್ಲ. ಗರಬಡಿದವನಂತೆ ಕೂತ ನನ್ನನ್ನು ಇಬ್ಬರೂ ಬೈದರು. ರೇಂಜರು ಹಿರಿಯ ಗಾರ್ಡಿಗೆ ನೀರು ತರಲು ಹೇಳಿದರು. ಈಗ ಪಾತ್ರ 'ಬೆಕ್ಕು ಚೀಲದಿಂದ ಹೊರಬಂದೀತೆಂದು'

Sri Vidyabharathi Book Centre, Sringeri

CC-O. In Public Domain. Digitized by eGangotri

ತಿಳಿದು, ನನ್ನ ರೂಮಿನತ್ತ ನಡೆದೆ. ಕೊಟ್ಟಿಗೆಯಲ್ಲಿ ಕತ್ತೆಯಿಲ್ಲವೆಂದು ಹಿರಿಯ ಗಾರ್ಡು ಹೇಳಿದ. ನಾನು ಮನಸ್ಸನ್ನು ಗಟ್ಟಿಮಾಡಿ, ಆಗಿ ಹೋದ ವಿಚಾರವನ್ನು ನಿರೂಪಿಸಿದೆ. ರೇಂಜರರು ರೇಗಿ ಕಪಾಳಕ್ಕೊಂದು ಬಿಗಿದು, ಕತ್ತೆಯ ಕ್ರಯ ಐದು ರೂಪಾಯಿಗಳನ್ನು ನನ್ನ ಸಂಬಳದಿಂದ ಹಿಡಿಯುವುದೆಂದು ಹೇಳಿ, ತನ್ನ ಮುಷ್ಠಿಯಿಂದ ಮತ್ತೊಂದು ಮುಖಕ್ಕೆ ಬಾರಿಸಿದನು.

ಆಪರೆಗೆ ಸುಮ್ಮನಿದ್ದ ನಾನು, ಬಿಸಿಯಾದೆ. ಹೆದರಿ ಕೂತಿದ್ದ ನನ್ನ ಆತ್ಮ ಗೌರವ, ಪೆಟ್ಟು ತಿಂದೊಡನೆ ಜಾಗ್ರತವಾಯಿತು. ಕಾಲಿನಿಂದ ತಲೆಯ ವರೆಗೆ ಸಿಟ್ಟು ಬುಗ್ಗನೆದ್ದಿತು. ಸಿಟ್ಟಿನಿಂದ ಮೈ ನಡುಗುತ್ತಿತ್ತು. ಆ ಮೂಲೆಯಲ್ಲಿದ್ದ ಕೊಡಲಿ ಅದು ಹೇಗೆ ನನ್ನ ಕೈ ಸೇರಿತೋ ತಿಳಿಯದು. ಮತ್ತೊಮ್ಮೆ ಹತ್ತಿರ ಸುಳಿದರೆ ಗತಿ ನೆಟ್ಟಗಾಗಲಿಕ್ಕಿಲ್ಲವೆಂದು ಕಿರುಚಿದೆ. 'ನಾನು ಬೇಕೆಂದು ಇದನ್ನೆಲ್ಲಾ ಮಾಡಿಲ್ಲ, ಅನುಭವವಿಲ್ಲದ ನನ್ನೊಬ್ಬನನ್ನೇ ಬಿಟ್ಟು ಹೋದ ನಮ್ಮ ತಪ್ಪಿಗೆ ನನಗೆ ಶಿಕ್ಷೆಯೇ' ಎಂದೆ.

ಅಷ್ಟು ಹೊತ್ತು ಅಧಿಕಾರ, ದರ್ಪ ತೋರಿಸಿದ ರೇಂಜರರು ದಂಗಾಗಿರಬೇಕು. ನನ್ನ ನಿಜಸ್ವರೂಪವನ್ನು ಕಂಡ, ಅವರು ಏನೇನೋ ಗೊಣಗಿಕೊಂಡು ತನ್ನ ಕೋಣೆ ಸೇರಿದರು. ಹಳೇ ಗಾರ್ಡು ನೀರು ತಂದು ಕಾಯಿಸಿಕೊಟ್ಟಾಗ, ನಾನು ನನ್ನ ಕೊಣೆಯಲ್ಲಿ ಮುಂದೇನೆಂದು ಯೋಚಿಸುತ್ತಿದ್ದೆ.

ಬೆಳಗ್ಗೆ ಎದ್ದಾಗ ನಾನೊಂದು ತೀರ್ಮಾನಕ್ಕೆ ಬಂದಿದ್ದೆ. ಇಲ್ಲಿಂದ ಪಾರಾಗಿ ಹೋಗಿ, ಬೇರೆ ಯಾವುದಾದರೊಂದು ಆಸರೆ ಹುಡುಕುವುದೊಂದೇ ನನಗಿದ್ದ ದಾರಿ. ರಾಜೀನಾಮೆ ಬರೆದು ಜೇಬಿನಲ್ಲಿರಿಸಿಕೊಂಡು ರೇಂಜರರ ಹತ್ತಿರ ಹೋದಾಗ, ನನಗೊಂದು ಸಂತಸದ ಸುದ್ದಿ ಕಾದಿತ್ತು. ರೇಂಜರರಿಗೆ ಭಡ್ತಿಯಾಗಿ, ಒಂದು ವಾರದಲ್ಲಿ ಬೇರೊಂದು ಕಡೆಗೆ ವರ್ಗವಾಗುವವರಿದ್ದರು. ಅವರು ನನ್ನನ್ನು ಕಂಡ ಕೂಡಲೇ, ರಾತ್ರಿಯ ಘಟನೆಗಳನ್ನು ಮರೆತು, ಸಂತೋಷದಿಂದ ಈ ವಿಚಾರ ತಿಳಿಸಿದರು. ರಾತ್ರಿ ಯಾವುದೇ ಆಹಿತಕರ ಘಟನೆ ನಡೆಯದಂತೆ, ಮರೆತು ವ್ಯವಹರಿಸಿದರು. ನನಗೂ ಸಂತೋಷವೆನಿಸಿತು. ಹೊಳೆಯಲ್ಲಿ ಮುಳುಗುವವನಿಗೆ ಹುಲ್ಲು ಕಡ್ಡಿಯೂ ಆಸರೆಯಾದಂತೆ ನನ್ನ ನಿಸ್ಸಾಹಯಕ ಸ್ಥಿತಿಗೆ, ಅವರ ವರ್ಗಾವಣೆಯು ಧೈರ್ಯ ನೀಡಿ, ನನ್ನನ್ನು ಅರಣ್ಯಖಾತೆಗೆ ಅಂಟಿಕೊಳ್ಳುವಂತೆ ಮಾಡಿತು.

ರೇಂಜರರು ನಮ್ಮಿಂದ ಬೀಳ್ಕೊಟ್ಟಾಗ ನನಗೆ ದುಃಖವೆನಿಸಿದರೂ, ಅವರ ದರ್ಪ, ಅಧಿಕಾರ ದೌಲತ್ತನ್ನು ನನಸುವಾಗ, ಆಗಿದ್ದೆಲ್ಲಾ ಒಳಿತಿಗೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಎಂದು ನಿಟ್ಟುಸಿರುಬಿಟ್ಟೆ. ಆದರೆ ಹೊಸದಾಗಿ ಬರುವವನು ಯಮನಂತಿದ್ದರೆ ? ಎಂಬ ಭಯ ಕಾಡದಿರಲಿಲ್ಲ.

ಹೊಸ ರೇಂಜರು ಬಂದಾಗ ನಾನು ಮತ್ತು ಹಳೇ ಗಾರ್ಡು ಸ್ನೇಹಿತರಾಗಿದ್ದೆವು. ಕಾರಣ, ಆತನಿಗೆ ಹೊಸ ರೇಂಜರಿನ ಹೆದರಿಕೆಯಿತ್ತು. ಹೊಸ ವೈದ್ಯನಿಗಿಂತ ಹಳೇ ರೋಗಿಯೇ ವಾಸಿಯೆಂದು ಇಬ್ಬರೂ ಅನ್ಯೋನ್ಯವಾಗಿದ್ದೆವು.

ನನ್ನಂತೆ ಯುವಕನಾಗಿ, ಒಂದೆರಡು ವರ್ಷಗಳ ಹಿರಿಯನಾಗಿರಬಹುದಾದ ತರುಣ ರೇಂಜರರು ಕಚೇರಿಗೆ ಬಂದಾಗ ಆತನ ವ್ಯಕ್ತಿತ್ವ ನನಗೆ ಹಿಡಿಸಿತು. ಹೊಸ ರೇಂಜರಿಗೂ ನಾನು ಹಿಡಿಸಿರಬೇಕು. ಅಧಿಕಾರ ವಹಿಸಿಕೊಂಡ ದಿವಸವೇ ನಮ್ಮಿಬ್ಬರ ಹೃದಯಗಳನ್ನು ಗೆದ್ದಿದ್ದರಿಂದ ನನ್ನ ದಿನಚರಿ ಸುಗಮವಾಗ ತೊಡಗಿತು. ಅಡಿಗೆ ಮಾಡುವ ಕೆಲಸ, ಏನೂ ವಿದ್ಯೆಯಿಲ್ಲದ ಹಳೇ ಗಾರ್ಡಿಗೆ ಮಿಸಾಲಾಯಿತು. ನಾನು ರೇಂಜರಿನೊಡನೆ ಅತ್ತಿತ್ತ ಸುತ್ತುವ ಮತ್ತು ಆಫೀಸು ವ್ಯವಹಾರಗಳನ್ನು ನೋಡಿಕೊಳ್ಳುವವನಾದೆ. ಎಷ್ಟಾದರೂ ಎಸ್ಸೆಸ್ಸೆಲ್ಸಿ ನಾಪಾಸಾದ ವಿದ್ಯಾವಂತನಲ್ಲವೇ ?

ಒಮ್ಮೆ ನನ್ನ ಮತ್ತು ರೇಂಜರಿನ ಸ್ನೇಹ ಇನ್ನೂ ಗಾಢವಾಗುವಂತಹ ಘಟನೆ ನಡೆಯಿತು. ಅರಣ್ಯದಿಂದ ಬಿದಿರುಗಳನ್ನು ಕಳ್ಳತನದಿಂದ ಕಡಿದು ಗಾಡಿಯಲ್ಲಿ ಯಾರೋ ಸಾಗಿಸುತ್ತಿದ್ದಾರೆನ್ನುವ ಸುದ್ದಿ ಬಂತು. ಅದನ್ನು ಹಿಡಿಯಲು ನಾವಿಬ್ಬರೂ ಸಂಜೆಯ ಸಮಯಕ್ಕೆ ನಮ್ಮ ಸರಹದ್ದಿಗೆ ಹೋದವು. ಒಂದು ಕೈಯಲ್ಲಿ ಬಂದೂಕು, ಮತ್ತೊಂದು ಕೈಯಲ್ಲಿ ಕಂದೀಲು ಹಿಡಿದು ನಾನು ರೇಂಜರಿನ ಮುಂದೆ ನಡೆಯುತ್ತಿದ್ದೆ. ನಮ್ಮ ಸರಹದ್ದಿಗೆ ಬಂದಾಗ, ಯಾವುದೇ ಕಳ್ಳತನದ ಚಟುವಟಿಕೆ ಕಂಡುಬರಲಿಲ್ಲ. ಕಂಟ್ರಾಕ್ಟರರು ಅಪ್ಪಣೆಯಂತೆ ಕಡಿದು ಒಟ್ಟುಗೂಡಿಸಿದ್ದ ಮರದ ದಿಮ್ಮಿಗಳು ಅಲ್ಲಲ್ಲಿ ಬಿದ್ದಿದ್ದವು. ಆದರೆ ಸುತ್ತಮುತ್ತು ಯಾವುದೇ ನರಪ್ರಾಣಿಯ ಸುಳಿವಿರಲಿಲ್ಲ. ಅಲ್ಲಿ ಯಾರೂ ಓಗೊಡದ್ದರಿಂದ ಬಂದ ದಾರಿಯಲ್ಲೇ ಹಿಂದಿರುಗಿದೆವು. ಈಗ ನಾನು ರೇಂಜರಿನ ಹಿಂದಿದ್ದೆ. ರಾತ್ರಿಯಾಗಿತ್ತು, ಕಂದೀಲಿನ ಬೆಳಕಿನಲ್ಲಿ ನಡೆಯುತ್ತಿದ್ದೆವು.

ಸುಮಾರು ಒಂದು ಫರ್ಲಾಂಗ್ ನಡೆದಿರಬೇಕು. ಕಂದೀಲು ಬೆಳಕು ನಮಗೆ ದಾರಿ ತೋರಿಸುತ್ತಿತ್ತು. (ಆಗ ಈಗಿನಂತೆ ಟಾರ್ಚ್ ಲೈಟುಗಳಿದ್ದಿಲ್ಲ). ಮಾರ್ಗದ ಎರಡು ಪಾರ್ಶ್ವಗಳಲ್ಲೂ ದಟ್ಟವಾದ ಕಾಡು ಬೆಳೆದಿತ್ತು. ಒಂದು

Sri Vidyabharathi Book Centre, Sringeri

CC-O. In Public Domain. Digitized by eGangotri

ಕವಲುದಾರಿಗೆ ತಲುಪಿದಾಗ, ನಮಗಿದಿರಾಗಿ ಒಂದು ಕಾಡೆಮ್ಮೆ ಬುಸು ಗುಟ್ಟುತ್ತಾ ಮೇಲೇರಿ ಬಂತು. ಅದರ ಜತೆಯಲ್ಲಿ ಒಂದು ಸಣ್ಣ ಮರಿಯಿದ್ದಿತು. ನಾನು ಕೋವಿಯನ್ನೂ ಕಂದೀಲನ್ನೂ ಹಿಡಿದಿದ್ದುದರಿಂದ ಒಮ್ಮೆಗೇ ಗುಂಡಿಕ್ಕಲು ತೊಡಕೆನಿಸಿತು. ಬುಸುಗುಟ್ಟುತ್ತಿದ್ದ ಕಾಡೆಮ್ಮೆ ಒಮ್ಮೆಗೇ ರೇಂಜರರ ಮೇಲೆ ನುಗ್ಗಿತು. ನಾನು ಕೈಯಲ್ಲಿದ್ದ ಕಂದೀಲನ್ನು ನೆಲದಲ್ಲಿ ಇಟ್ಟು ಗುಂಡು ಹಾರಿಸುವುದರೊಳಗೆ ರೇಂಜರರನ್ನು ಅದು ನೆಲಕ್ಕೆ ಕೆಡವಿತ್ತು. ಈಗ ಇನ್ನೂ ಕಷ್ಟಕ್ಕಿಟ್ಟುಕೊಂಡಿತು. ಕಾಡೆಮ್ಮೆಗೆ ಹೊಡೆದ ಗುಂಡು ರೇಂಜರಿಗೆ ತಗಲಿದರೆ ? ಆ ಕತ್ತಲಲ್ಲಿ ಯಾವುದೇ ಶೌರ್ಯ ಪ್ರದರ್ಶನ ಮಾಡಲಾಗದಿದ್ದರೂ, ಆತುರಾತುರವಾಗಿ ರೇಂಜರಿನ ಜೀಪವುಳಿಸಲು, ಕಾಡೆಮ್ಮೆಯ ದೇಹದತ್ತ ಗುಂಡು ಹಾರಿಸಿದೆ.

ನಿಜಕ್ಕೂ ರೇಂಜರರು ಅದೃಷ್ಟ ಶಾಲಿಯಾಗಿದ್ದರು. ಗುಂಡು ಕಾಡೆಮ್ಮೆಯ ಬಲಗಾಲಿಗೆ ಬಡಿದಿರಬೇಕು. ಅದು ನೋವಿನಿಂದ ವಿಕಾರವಾಗಿ ಅರಚಿ, ಕಾಡಿನೊಳಗೆ ನೆಲ ನಡುಗುವಂತೆ ಓಡಿತು. ರೇಂಜರರು ಅಂಗಾತ ಬಿದ್ದಿದ್ದರು. ಅದರ ಅನಿರೀಕ್ಷಿತ ಧಾಳಿಯಿಂದ ಗಾಬರಿಗೊಂಡಿದ್ದ ರೇಂಜರರ ಎಡಗೈಯಲ್ಲಿ ರಕ್ತ ಸೋರುತ್ತಿತ್ತು. ಈ ಗಲಾಟೆಯಲ್ಲಿ ಕಂದೀಲಿನ ಬೆಳಕು ನಂದಿಹೋಗಿ, ಜೇಬಿನಲ್ಲಿದ್ದ ಚಕಮುಕಿ ಕಡ್ಡಿಯನ್ನು ತೆಗೆದು ಬೆಳಕು ಮಾಡಿದೆ (ಆಗ ಈಗಿನಂತೆ ಬೆಂಕಿಪೊಟ್ಟಣಗಳಿರಲಿಲ್ಲ). ರೇಂಜರು ಅಂಗಾತ ಬಿದ್ದಿದ್ದರು, ಅವರನ್ನು ಎತ್ತಿ ನಿಲ್ಲಿಸಿದೆ. ಅವರು ಗಾಬರಿಯಿಂದ ಬುದ್ಧಿ ಕಳೆದುಕೊಂಡಿದ್ದು ಏನೇನೋ ಒಡಬಡಿಸುತ್ತಿದ್ದರು.

ಅವರ ಕೈ ಹಿಡಿದು ನಡೆಸುವ ಪ್ರಯತ್ನ ವಿಫಲವಾಯಿತು. ಹೆಗಲಲ್ಲಿ ಅವರನ್ನು ಹೊತ್ತು, ಸಾಧ್ಯವಿರುವಷ್ಟು ದೂರ ಸಾಗಿಸಿದೆ. ಅಪಾಯಕರ ಸ್ಥಳವನ್ನು ದಾಟಿ, ಅವರನ್ನು ಒಂದು ಮರದಡಿಯಲ್ಲಿ ಮಲಗಿಸಿದೆ. ದಣಿವಾರಿದ ಬಳಿಕ ಅವರನ್ನು ಮತ್ತೊಮ್ಮೆ ಹೊತ್ತು ಬಂಗ್ಲೆಗೆ ತಲಪಿದಾಗ ನಾನು ಸುಸ್ತು ಹೊಡೆದು ತೇಕುತ್ತಿದ್ದೆ. ನಾನು ಮತ್ತು ಹಳೆಯ ಗಾರ್ಡು, ಅವರ ಬಟ್ಟೆಯನ್ನು ಬದಲಾಯಿಸಿ, ಮುಖಕ್ಕೆ ನೀರು ಸಿಂಪಡಿಸಿ, ಗಾಯಗಳಿಗೆ ಔಷಧಿ ಸಿಂಪಡಿಸಿ, ಮಲಗಿಸಿದೆವು. ಬೆಳಿಗ್ಗೆ ಅವರು ಎದ್ದಾಗ ನನಗೊಂದು ಆಶ್ಚರ್ಯವೇ ಕಾದಿತ್ತು. ನಾನು ಆತುರಾತುರವಾಗಿ ಗುಂಡು ಹೊಡೆದಾಗ, ಅವರ ರಟ್ಟೆಗೆ ಒಂದು 'ಚೂರು' ತಗಲಿದ್ದು, ಕಂಡುಬಂದಿತು. ಎಲ್ಲಿ

CC-O. In Public Domain. Digitized by eGangotri

ಯಾದರೂ ಆದೇ 'ಚೂರು' ಎದೆಯೊಳಗೆ ನುಗ್ಗಿದ್ದರೆ ! ರೇಂಜರು ಎಚ್ಚರ ಗೊಂಡಿದ್ದರು. ಅವರ ಬುದ್ಧಿಯೂ ಸ್ವಾಧೀನಕ್ಕೆ ಬಂದಿತ್ತು.

ಆದರೆ, ಆ ಚೂರನ್ನು ತೆಗೆಯುವ ಬಗೆಯಾದರೂ ಹೇಗೆ ? ಮೂಳೆಗೆ ತಗಲದೆ ಮಾಂಸಖಂಡದಲ್ಲೇ ಚೂರಿರುವುದರಿಂದ ನಮಗೆಲ್ಲಾ ಸಮಾಧಾನ ವಾಯಿತು. ಒಬ್ಬ ಕಂಟ್ರಾಕ್ಟರ ಗಾಡಿಯನ್ನು ನಿಗದಿಮಾಡಿ ಅವರನ್ನು ಆಸ್ಪತ್ರೆಗೆ ಸಾಗಿಸಿದೆವು. ಸುಮಾರು ಒಂದು ತಿಂಗಳನಂತರ ರೇಂಜರರು ಆರೋಗ್ಯವಂತರಾಗಿ ಮರಳಿದರು. ಅಂದಿನಿಂದ ನನ್ನ ಮತ್ತು ಅವರ ಸ್ನೇಹ ಗಾಢವಾಯಿತು.

ಅರಣ್ಯ ಖಾತೆಯೆಂದರೆ ಆಗ ಈಗಿನಂತಿರಲಿಲ್ಲ. ಈಗ ಬೇಕಾದಷ್ಟು ಅನುಕೂಲ, ಸೌಲಭ್ಯಗಳಿದ್ದು, ಅಂದಿನಂತೆ ಕಷ್ಟದಾಯಕವಾಗಿಲ್ಲ. ಹೆಜ್ಜೆ ಹೆಜ್ಜೆಗೂ ಜೀವವನ್ನೇ ಪಣವಾಗಿಟ್ಟು ಹೋರಾಡುವ ಸ್ಥಿತಿ ಅಂದಿತ್ತು. ರೇಂಜರರು ಬಂದು ಒಂದರಡು ವಾರಗಳ ನಂತರ ಮತ್ತೊಂದು ದುರ್ಘಟನೆಗೆ ನಾವೆಲ್ಲಾ ಸಿಲುಕಬೇಕಾಯಿತು. ಎಡವಿದ ಕಾಲಿಗೆ ಎಡವಿ ಪೆಟ್ಟಾಗುವಂತೆ, ರೇಂಜರು ಅಂದೂ ಒಂದು ಅವಘಡಕ್ಕೆ ತುತ್ತಾಗಿದ್ದು, ನನ್ನ ಜೀವಮಾನದಲ್ಲಿ ಅಚ್ಚಳಿಯದೆ ಉಳಿದ ಘಟನೆಯಾಗಿದೆ.

ನಮ್ಮ ಹಳೇ ಗಾರ್ಡ್ ಯಾವುದೋ ಕೆಲಸಕ್ಕೆ ಫಾರೆಸ್ಟ್‌ಗೇಟಿಗೆ ಹೋಗಿ ಮರಳುವಾಗ, ಕೆಲವು ಜನ ಶಿಕಾರಿಗಳು ಕಾಡು ನುಗ್ಗಿ ಬೇಟೆಯಾಡು ತ್ತಿದ್ದುದನ್ನು ಕಂಡು, ಓಡೋಡಿ ಬಂದು ರೇಂಜರರಿಗೆ ತಿಳಿಸಿದರು. ನಾವು ಮೂವರೂ ಆ ಅಕ್ರಮ ಬೇಟೆಗಾರರನ್ನು ಹಿಡಿಯಲು ಸಿದ್ಧರಾದೆವು. ಆ ಕಾಲದಲ್ಲಿಯೂ ಕೂಡ ಪರವಾನಗಿಯಿಲ್ಲದೆ ಸರಕಾರವು ಯಾರನ್ನೂ ಬೇಟೆ ಯಾಡಲು ಅರಣ್ಯದೊಳಗೆ ಬಿಡುತ್ತಿರಲಿಲ್ಲ. ಸರಕಾರಕ್ಕೆ ಇಂತಿಷ್ಟು ಹಣ ಕಟ್ಟಿ ಪರವಾನಗಿ ಪಡೆಯಬೇಕಾಗಿತ್ತು. ಬೇಟೆಗಾರರ ಕೂಗಾಟ ಕೇಳುತ್ತಿತ್ತು. ನಾವು ದಾರಿ ಹುಡುಕುತ್ತಾ ಅವರನ್ನು ಹಿಂಬಾಲಿಸಿದೆವು.

ಶಿಕಾರಿಗಳಿಗೆ ಯಾವುದೇ ಪರಿವೆ ಇರಲಿಲ್ಲ. ರೇಂಜರರು ಆಸ್ಪತ್ರೆಯಿಂದ ಮರಳಿಬಂದ ವಿಚಾರ ಅವರಿಗೆ ತಿಳಿದಿಲ್ಲವಾದ್ದರಿಂದ ಧೈರ್ಯವಾಗಿ ಬೇಟೆಗೆ ಬಂದಿದ್ದರು. ಶಿಕಾರಿಗಳ ಗುಂಪು ಕಾಡಿನಲ್ಲಿ ಕೋಲಾಹಲ ಮಾಡುತ್ತಿದ್ದವು. ನಾಯಿಗಳು ಬೊಗಳುತ್ತಿದ್ದವು.

ಸುಮಾರು ಒಂದು ಫರ್ಲಾಂಗು ದೂರದಲ್ಲಿದ್ದ ನಮಗೆ ಒಂದು ಗುಂಡಿನ ಸದ್ದು ಕೇಳಿತು. ನಾಯಿಗಳು ಮತ್ತೂ ಬೊಗಳತೊಡಗಿದವು.

CC-O. In Public Domain. Digitized by eGangotri

ಯಾರೋ ಚಿರತೆಗೆ ಗುಂಡು ತಾಗಿದೆಯೆಂದು ಎಚ್ಚರಿಸುತ್ತಿದ್ದರು. (ನಮ್ಮ ಕತ್ತೆ ಹಿಡಿದ ಚಿರತೆಯಾಗಿರಬಹುದೇ ಎಂದು ನೆನಸಿಕೊಂಡೆ) ಗುಂಡಿನ ಶಬ್ದವಾದ ಮೇಲೆ ಯಾವುದೇ ಘಟನೆ ನಡೆಯದೆ ಪರಿಸರವೆಲ್ಲಾ ಸ್ತಬ್ಧವಾಯಿತು. ನಾಯಿಗಳು ಬೊಗಳುವುದನ್ನು ನಿಲ್ಲಿಸಿದವು. ಆದ ಮೇಲೆ ಚಿರತೆಯು ಸತ್ತಿರಬಹುದೆಂದು ತರ್ಕಿಸಿ, ನಿಧಾನವಾಗಿ ಮುಂದುವರಿದೆವು. ನನ್ನ ಕೈಯಲ್ಲಿ ಕೋವಿಯಿತ್ತು. ರೇಂಜರರು ಒಂದು ಕತ್ತಿಯನ್ನು ಹಿಡಿದಿದ್ದರು. ಸ್ವಲ್ಪ ದೂರ ಹೋದಾಗ ಒಂದು ದೊಡ್ಡ ಮರವು ಅಡ್ಡಲಾಗಿ ಬಿದ್ದಿದ್ದು, ಅದನ್ನು ದಾಟಲು, ರೇಂಜರು ಅದರ ಮೇಲೆ ಹತ್ತಿದರು. ಅವರು ಮರವನ್ನು ಹತ್ತಿದ ರಭಸಕ್ಕೆ ಮರದ ಒಣಗಿದ ಕೊಂಬೆಯೊಂದು ಲಟಕ್ಕನೆ ಮುರಿದು ಬಿತ್ತು. ನಮ್ಮ ದುರಾದೃಷ್ಟಕ್ಕೆ ಆ ಮುರಿದ ಕೊಂಬೆಯಲ್ಲೇ ಒಂದು ಹಜ್ಜೇನು ಬೀಡುಬಿಟ್ಟಿರಬೇಕೆ ? ಇದನ್ನು ಕಂಡ ನಾವಿಬ್ಬರು ಹತ್ತಿರದ ಮರಗಳ ಆಶ್ರಯ ಪಡೆದವು. ರೊಚ್ಚಿಗೆದ್ದ ಜೇನುನೊಣಗಳು, ಸಾವಿರಗಟ್ಟಲೆ ರೇಂಜರರನ್ನು ಮುತ್ತಿದವು. ರೇಂಜರರು ಮರದ ಕಾಂಡದಿಂದ ಜಿಗಿದು, ಮೇಲೆರಗುವ ಜೇನು ಹುಳುಗಳನ್ನು ಕೈಯಿಂದ ಓಡಿಸುತ್ತಾ, ಬಾಯಿ ಬಡಿದುಕೊಳ್ಳ ಹತ್ತಿದರು. ನಮ್ಮನ್ನು ಕೂಗಿದರು, ಆದರೆ, ನಮ್ಮಿಂದ ಯಾವುದೇ ಸಹಾಯ ಮಾಡುವಂತಿರಲಿಲ್ಲ. ಬೆಂಕಿಗೆ ಬಿದ್ದವನನ್ನು ಉಳಿಸುವಷ್ಟೇ ಕಷ್ಟ ಜೇನಿನ ಧಾಳಿಗೆ ಸಿಕ್ಕಿದವನನ್ನುಳಿಸುವುದು ಎಂದು ನಮಗೆ ತಿಳಿದಿತ್ತು. ನಾವು ಬೇರೇನೂ ಮಾಡಲು ತೋಚದೆ, ರೇಂಜರರಿಗೆ ಅಲ್ಲಿಂದ ಓಡಿ ಪಾರಾಗಲು ಹೇಳಿ, ನಾವೂ ಓಡತೊಡಗಿದೆವು. ರೇಂಜರು ಕಾಡಿನೊಳಗೆ ನುಗ್ಗಿ, ನುಸುಳಿ, ಚಿಗರಿಯಂತೆ ಓಡತೊಡಗಿದರು, ನಾವೂ ಓಡಿದೆವು. ಆದರೂ ಜೇನು ನೊಣಗಳು ಅವರ ಬೆಂಬಿಡದೆ ಹಿಂಬಾಲಿಸುತ್ತಿದ್ದವು. ಸ್ವಲ್ಪದೂರ ಓಡಿದ ಮೇಲೆ ಜೇನುನೊಣಗಳು ನಮ್ಮ ಮೇಲೆಯೂ ಎರಗಿದವು.

ಓಡುತ್ತೋಡುತ್ತಾ ನಾವೆಲ್ಲಾ ನಮ್ಮ ಕಚೇರಿಯ ಹತ್ತಿರವಿರುವ ಕೆರೆ ಮುಟ್ಟಿದೆವು. ರೇಂಜರಿನ ಹಿಂದೆ ಸಾವಿರಗಟ್ಟಲೆ ಜೇನ್ನೊಣಗಳು ಹಿಂಬಾಲಿಸುತ್ತಿದ್ದವು. ಈ ದುರಂತ ನೋಡಿ, ನಾನು ಅವರನ್ನು ಕೆರೆಗೆ ಹಾರಿ ಮುಳುಗಲು ಸಲಹೆಕೊಟ್ಟೆ. ಹಾಗೆಯೇ ಗಾಬರಿಯಾಗಿದ್ದ ರೇಂಜರರು ಕೆರೆಗೆ ಹಾರಿ, ಮುಳುಗಿದರು. ಆದರೆ, ಕೆರೆಯಲ್ಲಿ ಅದೆಷ್ಟು ಹೊತ್ತು ಮುಳುಗಲು ಸಾಧ್ಯ ? ಶ್ವಾಸ ತೆಗೆಯಲಿಕ್ಕಾದರೂ ತಲೆಯನ್ನು

CC-O. In Public Domain. Digitized by eGangotri

ನೀರಿನಿಂದ ಮೇಲೆತ್ತಬೇಕಿತ್ತು. ಆಗ ಅವರ ತಲೆಯನ್ನು ಜೇನ್ನೊಣಗಳು ಸಾವಿರ ಸಂಖ್ಯೆಯಲ್ಲಿ ಮುತ್ತುತ್ತಿದ್ದವು. ನನಗೆ ದಿಕ್ಕೇ ತೋಚದಂತಾಯಿತು. ನನ್ನ ಹಿಂದೆಯಿದ್ದ ನೊಣಗಳಿಂದ ಅಲ್ಲಿ ನಿಲ್ಲಲು ಸಾಧ್ಯವಿರಲಿಲ್ಲ. ಕೆರೆಯಲ್ಲಿ ಬಿದ್ದಿದ್ದ ತಮ್ಮ ಶತ್ರುವಿಗೆ ತಕ್ಕ ಶಾಸ್ತಿ ಮಾಡಲು ಸಾಧ್ಯವಾಗದ್ದರಿಂದ, ಅವುಗಳು ನಮ್ಮ ಹಿಂದೆಯೂ ಬಂದಿದ್ದವು. ನಾನು ಮತ್ತು ಹಳೆಯ ಗಾರ್ಡು ರೇಂಜರರನ್ನು ಕೆರೆಯಲ್ಲಿ ಬಿಟ್ಟು,ಜೀವದಾಸೆಯಿಂದ ಬಂಗ್ಲೆಯತ್ತ ಓಡಿದೆವು. ಹಳೇ ಗಾರ್ಡು ಹುಚ್ಚುನಾಯಿಯಂತೆ ಅದೆತ್ತಲೋ ಓಡಿದ.

ಕೆರೆಯಲ್ಲಿ ಬಿದ್ದ ರೇಂಜರನ್ನು ಉಳಿಸಬೇಡವೇ ? ಯೋಚಿಸದೆ, ಬಂಗ್ಲೆಯಲ್ಲಿದ್ದ ಎರಡು ಕಂಬಳಿಗಳನ್ನು ಮೈ ಮೇಲೆ ಹೊದ್ದು, ಕೆರೆಯತ್ತ ಓಡಿದೆನು. ರೇಂಜರು ಬಳಲಿದ್ದರು. ಕೈಯಲ್ಲಿದ್ದ ಕಂಬಳಿಯನ್ನು ಅವರತ್ತ ಎಸೆದು ತಲೆಗೆ ಸುತ್ತಿಕೊಂಡು, ಶ್ವಾಸ ಬಿಡುವಷ್ಟು ಜಾಗ ಮಾಡಿಕೊಂಡು ಅಲುಗಾಡದೆ ನಿಲ್ಲಲು ಹೇಳಿದೆ. ನಾನು ನನ್ನ ಕಂಬಳಿಯನ್ನು ಮುಖ ಮುಚ್ಚಿ ಹೊದ್ದು, ಮರದಡಿಯಲ್ಲಿ ಕುಕ್ಕರಿಸಿದೆ. ರೇಂಜರು ತನ್ನ ಶರೀರವನ್ನು ನೀರಿನೊಳಗೆ ಅಡಗಿಸಿ, ತಲೆಯನ್ನು ಕಂಬಳಿಯಿಂದ ಮುಚ್ಚಿ ನಿಂತಿದ್ದರು. ಜೇನ್ನೊಣಗಳು ನನ್ನ ಕಂಬಳಿಯ ಮೇಲೆ ಧಾಳಿ ಮಾಡುತ್ತಿದ್ದವು. ಅಲುಗಾಡದೆ ಕೂತ ನಾನು ಮರದಡಿಯಲ್ಲಿ ಜಪಮಾಡುತ್ತಿದ್ದೆ.

ಸಂಜೆಯಾಗುತ್ತಿತ್ತು, ನಮ್ಮ ಹಳೇಗಾರ್ಡು ದೂರದಿಂದ ಕೂಗಿದನು. ನಾವಿಬ್ಬರೂ ಕೆರೆಯಲ್ಲಿ 'ಜಲಸ್ತಂಭನ' ಮಾಡುತ್ತಿದ್ದುದನ್ನು ಕಂಡು, ಹೊರ ಬರುವಂತೆ ಹೇಳಿದನು. ನಾನು ಮರದಡಿಯಲ್ಲಿ ಮುಸುಕಿತ್ತಿ ನೋಡಿದೆ. ನೊಣಗಳು ಸಾವಿರಗಟ್ಟಲೆ ಸತ್ತು ಬಿದ್ದಿದವು. ಕತ್ತಲೆಯಾದ್ದರಿಂದಲೋ ಏನೋ ಧಾಳಿಯನ್ನು ಬಿಟ್ಟು ಯುದ್ಧ ರಂಗದಿಂದ ಹಿಂತಿರುಗಿದ್ದವು. ನಾನು ರೇಂಜರರನ್ನು ಹೊರಬರಲು ಹೇಳಿದೆ. ಹಳೇ ಗಾರ್ಡು ಬಂದು ಸುಸ್ತಾದ ರೇಂಜರನ್ನು ಕೆರೆಯಿಂದ ಹೊರಗೆಳೆದ.

ಇಷ್ಟರಲ್ಲಿ ಮತ್ತೊಂದು ಅವಾಂತರ ನಡೆದು ಹೋಗಿತ್ತು. ಆ ಕೆರೆಯಲ್ಲಿದ್ದ ನೀರು ಜಿಗಣೆ (Leaches)ಗಳು ರೇಂಜರರ ಮೈಯಲ್ಲೆಲ್ಲಾ ಅಂಟಿದ್ದವು ಒಂದೊಂದು ದೊಡ್ಡ ಮೆಣಸಿನಕಾಯಿಯಷ್ಟು ಉದ್ದವಿದ್ದು, ಶರೀರದ ಅರ್ಧ ರಕ್ತವನ್ನು ಕುಡಿದಿದ್ದವು, ಅವನ್ನು ಎಳೆದಾಗ ಕಚ್ಚಿದ ಭಾಗದ ಮಾಂಸವೇ ಕಿತ್ತು ಬರುತ್ತಿತ್ತು. ಧಾರಾಕಾರವಾಗಿ ರಕ್ತ ಹರಿಯತೊಡಗಿತು. ಇನ್ನು ಬಿಡಿಸಲು ಬೇರೆ ಉಪಾಯ ಕಾಣದೆ, ಬೆಂಕಿ ಮಾಡಿ, ಬೆಂಕಿ ಕೆಂಡವನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri

ಅವುಗಳ ಮೇಲೆ ಇಟ್ಟು ಒಂದೊಂದಾಗಿ ಬಿಡಿಸಿದೆವು. ಶರೀರವು ಊದಿ, ರಕ್ತಮಯವಾಗಿದ್ದಿತು. ಕೆಂಪು ತೊಗಲಿನ ರೇಂಜರರು ನಿಜಕ್ಕೂ ಸುಸ್ತಾಗಿದ್ದರು. ಅವರನ್ನು ನಾವಿಬ್ಬರೂ ಹೊತ್ತು ಬಂಗ್ಲೆಗೆ ಮುಟ್ಟಿಸಿ, ನಾವು ಕೂಡ ಸುಸ್ತಾಗಿದ್ದರಿಂದ ಅಲ್ಲಲ್ಲಿ ಮುದುಡಿದೆವು.

ರೇಂಜರರಿಗೆ ಜ್ವರ ಬಂದಿತ್ತು. ಜ್ವರ ಬಂದಿದ್ದರೂ ಸಹಿಸಬಹುದಿತ್ತು, ಆದರೆ, ಅವರ ಮುಖ ಜೇನ್ನೊಣಗಳ ಕಡಿತದಿಂದ ಊದಿ ವಿಕಾರವಾಗಿತ್ತು. ಜೇನ್ನೊಣ ಚುಚ್ಚಿದ ಮುಳ್ಳುಗಳನ್ನೆಲ್ಲಾ ಹೆಕ್ಕಿ ತೆಗೆದು, ಗಂಧಲೇಪನ ಮಾಡಿದೆವು. ಅಂತೂ, ರೇಂಜರರು ಒಂದು ವಾರದವರೆಗೆ ಹಾಸಿಗೆ ಬಿಟ್ಟೇಳುವಂತಿರಲಿಲ್ಲ.

ಅರಣ್ಯ ಖಾತೆಯಲ್ಲಿ ಅಡಿಗಡಿಗೆ ಭಯಂಕರ ಆಪತ್ತುಗಳು ಕಾದಿರುತ್ತಿದ್ದವು. ಮನುಷ್ಯನ ಪ್ರಭುತ್ವ, ಅಂದು ಕಾಡಿನ ಮೇಲೆ ಅಷ್ಟೊಂದು ಶಕ್ತಿಯುತವಾಗಿ ಬೀರಿರಲಿಲ್ಲ. ಆದರೂ ನೌಕರಿಯಾಸೆ ಇದನ್ನೆಲ್ಲಾ ಮೆಟ್ಟಿ ನಿಲ್ಲುವಂತೆ ಮಾಡಿತ್ತು.

ಹೀಗೆ ಒಂದೆರಡು ಸಾರಿ ಪ್ರಾಣವನ್ನೇ ಕಳೆದುಕೊಳ್ಳಬೇಕಾದ ಪ್ರಸಂಗ ಬಂದುದರಿಂದ, ರೇಂಜರರು ಅಂದಿನ ಆಂಗ್ಲ ಮೇಲಧಿಕಾರಿಗಳಿಗೆ ಪತ್ರ ಬರೆದು ತಾನು ಸೈನ್ಯಕ್ಕೆ ಸೇರುವೆನೆಂದು ಕೇಳಿಕೊಂಡರು. ಸೈನ್ಯದಲ್ಲಿ ಪ್ರಾಣಾಪಾಯವಿಲ್ಲವೆಂದು ಅವರ ಭಾವನೆಯಿತ್ತೇನೋ ! ಆದರೆ, ನಾನು ? ಇಲಾಖೆಯಲ್ಲೇ ಉಳಿದು ಇನ್ನೂ ಏನೇನೋ ಅವಘಡಗಳನ್ನೆದುರಿಸಬೇಕಾದ ಅದೃಷ್ಟವಿತ್ತೇನೋ ! ಸಾಯುವವನು ಮನೆಯಲ್ಲೇ ಕೂತರೂ ಸಾಯುತ್ತಾನೆಂಬ ಧೈರ್ಯ, ಇಲಾಖೆಯಲ್ಲೇ ಉಳಿಯುವಂತೆ ಮಾಡಿತು.

ನಮ್ಮ ರೇಂಜರರು ಸೈನ್ಯಕ್ಕೆ ಸೇರಿದ ಮೇಲೆ, ನನಗೂ ಬೇರೊಂದು ರೇಂಜಿಗೆ ವರ್ಗವಾಯಿತು. ಅದೂ ಕೂಡಾ ಕಾಡಿನ ಮಧ್ಯದಲ್ಲಿರುವ ಕಚೇರಿಯಾಗಿದ್ದು, ಅದರ ಸುತ್ತಮುತ್ತು ಕಾಡು ಕುರುಬರ ವಸತಿಗಳಿದ್ದವು. ಇಲ್ಲಿ ಅಷ್ಟೇನೂ ತೊಂದರೆಯಾಗದೆಂದು ಗ್ರಹಿಸಿದ್ದೆನು.

ಆದರೆ, ಈ ರೇಂಜಿನಲ್ಲಿ ವಿಷವುಳ್ಳ ಹಾವುಗಳು ತುಂಬಾ ಇವೆಯೆಂದು ಹೇಳಲಾಗುತ್ತಿತ್ತು. ಆದರೆ, ಕಾಡುಕುರುಬರಿಗೆ ಅದನ್ನು ನಿಗ್ರಹಿಸುವ ಸಿದ್ಧೌಷದಗಳು, ತಂತ್ರ–ಮಂತ್ರಗಳು, ಇದ್ದೇ ಇದ್ದವು. ಆದರೆ, ನಮಗೆ ? ಇದಕ್ಕೆಂದೇ ಸರಕಾರವು ಮಂಡಿಯವರೆಗೆ ಸುತ್ತುವ ಸುತ್ತುಪಟ್ಟಿಗಳನ್ನು ಲಾಳ ಬಡಿದ ಬೂಟನ್ನೀಯುತ್ತಿತ್ತು. ಆದರೂ, ಹಾವುಗಳ ಹೆದರಿಕೆ ತಪ್ಪೀತೆ ?

CC-O. In Public Domain. Digitized by eGangotri

ಒಮ್ಮೆ ಕಾಡುಕುರುಬರ ಈ ತಂತ್ರ-ಮಂತ್ರಕ್ಕೆ ಇಂಬುಗೊಡುವ ಒಂದು ಘಟನೆ ನಡೆಯಿತು. ರಾತ್ರಿ ಗುಡಿಸಿಲಿನಲ್ಲಿ (ಪಾಡಿ) ತಂದೆತಾಯಿಗಳ ಜತೆಯಲ್ಲಿ ಮಲಗಿದ್ದ ಅವರ ಒಂದೇ ಮಗುವನ್ನು ಒಂದು ಕರಿ ನಾಗರಹಾವು ಬಂದು ಕಚ್ಚಿಕೊಂದಿತ್ತೆಂದು ತಿಳಿದುಬಂದಿತು. ನಾಗರಹಾವು ರಾತ್ರಿ ಕಾಲದಲ್ಲಿ ತಿರುಗುವುದಿಲ್ಲವೆಂದು ಹೇಳಿ ವಾದ ನಡೆದಿತ್ತು. ತಂದೆ ತಾಯಿಗಳೊಡನೆ ಮಲಗಿದ್ದ ಮಗುವು ರಾತ್ರಿಯೇ ಹಾವಿನಿಂದ ಕಚ್ಚಲ್ಪಟ್ಟು ಬೆಳಿಗ್ಗೆ ಕೊರಡಾಗಿತ್ತು. ತಂದೆ ತಾಯಿಗಳು 'ಗೊಳೋ' ಎಂದು ಅಳುತ್ತಿದ್ದರು. ಬೇರೆ ಹತ್ತಿರದ ಪಾಡಿಗಳಿಗೆ ಈ ವಿಚಾರವು ತಿಳಿದು, ಎಲ್ಲಾ ಕುರುಬರು ಅಲ್ಲಿ ನೆರೆದಿದ್ದರು. ಮಗುವನ್ನು ಕಳೆದುಕೊಂಡಿದ್ದ ತಾಯಿಗಳು ಒಬ್ಬ ಮುದುಕನ ಕಾಲು ಹಿಡಿದು ಅಳುತ್ತಿದ್ದರು. ಆತ, ಅವರಿಗೆ ಸಮಾಧಾನದ ಮಾತುಗಳನ್ನಾಡಿ, ಏನೇನೊ ವ್ಯವಸ್ಥೆ ಮಾಡಲು ಮುದುಕ ಅಲ್ಲಿಂದ ಹೊರಟು ಹೋದನು.

ಮಗು ಸತ್ತ 'ಪಾಡಿಗೆ' ಮುದುಕ ಬಂದಾಗ ಆತನು ಕೆಂಪು ಆಡ್ಡ ಪಂಚೆಯನ್ನುಟ್ಟಿದ್ದನು. ಕೈಯಲ್ಲೊಂದು ಉದ್ದದ ಬೆತ್ತದ ಕೋಲು ಹಿಡಿದು ಆವೇಶ ಬಂದಂತೆ... ಹು.... ಹು... ಎನ್ನುತ್ತಿದ್ದನು. ಮುದುಕನನ್ನು ಮೊದಲು ಕಂಡಾಗ, ನಡೆಯಲಾರದಂತವನಿದ್ದು, ಈಗ ಆವೇಶ ಬಂದು, ಯುವಕನಂತೆ ಕುಣಿದು ಕುಪ್ಪಳಿಸುತ್ತಿದ್ದನು. ಪಾಡಿಯ ಮುಂದೆ ಜಮಾಯಿಸಿದ್ದ ನಮ್ಮ ಮುಂದೆ, ಎಂತಹದೋ ಮಂತ್ರ ಬಾಯಲ್ಲಿ ಹೇಳುತ್ತಾ, ಪಾಡಿಗೆ ಮೂರು ಸುತ್ತ ಬಂದ ಮುದುಕನು, ತನ್ನ ಉದ್ದ ಕೋಲಿನಿಂದ ತನ್ನ ದೇಹಕ್ಕೆ ಫಳೀರೆಂದು ಹೊಡೆದುಕೊಂಡು, ಅಲ್ಲೇ ಇಟ್ಟಿದ್ದ ತಟ್ಟೆಯಿಂದ ಸ್ವಲ್ಪ ಅಕ್ಕಿ ಕಾಳುಗಳನ್ನು ತೆಗೆದು ಆಕಾಶಕ್ಕೆ ಒಗೆದು, ಆ ಕಾಳುಗಳನ್ನು ಹಿಡಿದು ಅಲ್ಲೇನಿಂತಿದ್ದಪನ ಹಸ್ತಕ್ಕೆ ಕೊಟ್ಟ. ಮಗುವಿನ ಬಲಗೈಗೆ ಆ ಅಕ್ಕಿ ಕಾಳುಗಳನ್ನು ಬಟ್ಟೆಯಲ್ಲಿ ಕಟ್ಟಲು ಹೇಳಿದನು. ಹಾಗೆಯೇ ತನ್ನ ಕೈಯಲ್ಲಿದ್ದ ಕೋಲನ್ನು ಮತ್ತೊಬ್ಬನ ಕೈಗಿತ್ತು, ಬಾಯಲ್ಲಿ ಏನೋ ಹೇಳುತ್ತಾ ಕಾಡು ನುಗ್ಗಿ ಓಡಿದನು. ಅವನು ಕೆಲವೇ ನಿಮಿಷಗಳಲ್ಲಿ ವಾಪಸಾದಾಗ ಕೈಯಲ್ಲಿ ಎಂತಹದ್ದೋ ಎಲೆಗಳಿದ್ದವು. ಆ ಹಸಿರೆಲೆಗಳನ್ನು ತನ್ನ ಕೈಯಲ್ಲಿ ಉಜ್ಜುತ್ತಾ ಬಂದು ಪಾಡಿಯೊಳಕ್ಕೆ ನುಗ್ಗಿದನು. ಮಗುವಿನ ಮೈಗೆಲ್ಲಾ ಆ ಎಲೆಗಳ ರಸವನ್ನು ಲೇಪಿಸಿ, ಆ ಮಗುವನ್ನು ಪಾಡಿಯ ಹೊರಗೆ ತರಲು ಆದೇಶವಿತ್ತನು.

CC-O. In Public Domain. Digitized by eGangotri

ಮಗುವನ್ನು ಹೊರತಂದು ಒಂದು ಉದ್ದದ ಬಾಳೆಲೆಯಲ್ಲಿ ಮಲಗಿಸಿ, ಆದರ ಹತ್ತಿರವೇ ಒಂದು ಬಟ್ಟಲು ಹಾಲು ಇಟ್ಟು ಏನೇನೋ ಪಠಿಸಿದ. ತನ್ನ ಉದ್ದ ಕೋಲನ್ನು ಎತ್ತಿಕೊಂಡು ನಾಲ್ಕು ದಿಕ್ಕಿಗೆ ರೊಯ್ಯನೆ ಬೀಸಿದ. ಆ ಶಬ್ದದಲ್ಲಿ ಏನೋ ಕಂಡುಕೊಂಡವನಂತೆ ಮತ್ತೊಮ್ಮೆ ಕಾಡು ನುಗ್ಗಿದ.

ಒಂದು ಬಂಡೆ ಸೀಳಿ ಒಡೆದಿತ್ತು. ಆದರ ನಡುವೆ ಸಣ್ಣಪುಟ್ಟ ಗಿಡಗಳು ಬೆಳೆದಿದ್ದವು. ಈ ತಂತ್ರಗಾರ ಮುದುಕ ಆದನ್ನು ಹೇಗೆ ಕಂಡು ಹಿಡಿದನೋ ಆದೊಂದು ಆಶ್ಚರ್ಯವೇ. ಬಂಡೆ ಬಳಿ ಸಾರಿದಾಗ ಒಂದು ಕರಿನಾಗರ ಬುಸುಗುಟ್ಟುತ್ತಿತ್ತು. ಬಂಡೆಯ ಸುತ್ತೊಮ್ಮೆ ತನ್ನ ಉದ್ದದ ಕೋಲನ್ನು ನೆಲಕ್ಕೆ ಒತ್ತಿ ಹಿಡಿದು ಗರೆಯೆಳೆದು ಕೈಯಲ್ಲಿದ್ದ ಅಕ್ಕಿ ಕಾಳುಗಳನ್ನು ಮಂತ್ರಿಸಿ ಹಾವಿನತ್ತ ಹಾಕಿ, ಓಡಿ ಬಂದ. ಅಕ್ಕಿ ಕಾಳು ಹಾಕಿದಾಗ ಹಾವು ಫೂತ್ಕರಿಸಿತು. ಹೆಡೆಯೆತ್ತಿ ಅತ್ತಿತ್ತ ವಾಲಾಡಿತು. ಆವೇಶ ಬಂದ ಮುದುಕ ತನ್ನ ಕೋಲಿನಿಂದ ತನ್ನ ಮೈಗೆ ರೊಯ್ಯನೆ ಬಡಿದುಕೊಂಡ. ಹಾವು ಕೂಡ ಆ ಹೊಡೆತಕ್ಕೆ ಸಿಕ್ಕಿತೇನೋ ಎನ್ನುವಂತೆ ವಿಲಿವಿಲಿ ಒದ್ದಾಡಿತು.

ಅಷ್ಟು ದೊಡ್ಡ ಕಾಡಿನಲ್ಲಿ ಹಾವು ಇಂತಹದ್ದೇ ದಿಕ್ಕಿನಲ್ಲಿದೆಯೆಂದು ಅದು ಹೇಗೆ ಕಂಡು ಹಿಡಿದನೋ ಏನೋ ಆತನ ಮಾಂತ್ರಿಕ ಶಕ್ತಿಯ ಮುಂದೆ ನಾವೆಲ್ಲಾ ಮೂಕರಾದೆವು. ಕಾಡಾಡಿ ಎಂದು ಹೇಳಿಸಿಕೊಳ್ಳುವ ಇವರಲ್ಲಿ ಇಂತಹ ಅದ್ಭುತಶಕ್ತಿ ಅದೆಲ್ಲಿಂದ ಬಂತು ? ಎಂಬುದು ಇಂದೂ ನನಗೆ ತಿಳಿಯದಾಗಿದೆ.

ರಾತ್ರಿ ಆಹಾರ ಹುಡುಕಿಕೊಂಡು ಬಂದ ಹಾವು ಏನೂ ಸಿಗದ್ದರಿಂದ ಗುಡಿಸಿಲಿನಲ್ಲಿ ಇಲಿಗಳ ಶಬ್ದ ಕೇಳಿ ಒಳಗೆ ನುಗ್ಗಿರಬೇಕು. ಅಲ್ಲಿ ಆ ಮಗುವು ಮತ್ತು ತಂದೆ ತಾಯಿಗಳು ಮಲಗಿದ್ದಲ್ಲಿ ಅದು ಚಲಿಸಿರಬೇಕು. ಆಗ ಮಗುವಿನ ಕಾಲು ಅಥವಾ ಕೈ ಚಲಿಸಿರಬಹುದು, ಆಗ ಹಾವು ಕಚ್ಚಿತೇನೋ ಎಂದು ನನ್ನ ಸಂಶಯ ಬಿಚ್ಚಿದೆ. ಆದರೆ, ಬಂಡೆಯ ಹತ್ತಿರವಿದ್ದ ಹಾವನ್ನು ನೋಡಿದ ಮಗುವಿನ ತಂದೆ, ಅದು ವೈರತ್ವವನ್ನು ಸಾಧಿಸಿಯೇ ಮಗುವನ್ನು ಕಚ್ಚಿದೆಯೆಂದ. ಎರಡು ತಿಂಗಳ ಹಿಂದೆ ಮಗುವಿನ ತಂದೆ ಹುಲ್ಲು ಕುಯ್ಯುತ್ತಿದ್ದಾಗ ತಿಳಿಯದೆ ಆ ಹಾವಿನ ಬಾಲವನ್ನು ಹುಲ್ಲಿನೊಡನೆ ಕೊಯ್ದು ಘಾಸಿಗೊಳಿಸಿದ್ದನ್ನು ಹೇಳಿದ. ಹೌದು, ಹಾವಿನ ಬಾಲವೂ ತುಂಡಾಗಿತ್ತು. ಕೆಲವು ತಿಂಗಳಿಂದ ಆ ಹಾವು ಆತನನ್ನು ಅನೇಕ ಬಾರಿ ಹಿಂಬಾಲಿಸುತ್ತಿತ್ತಂತೆ, ಆದರೆ, ಆತನನ್ನು ಆದೇಕೆ ಕಚ್ಚಲಿಲ್ಲ ? ಮಗುವನ್ನು ಕಚ್ಚಿ ಹಗೆ ತೀರಿಸಿ

CC-O. In Public Domain. Digitized by eGangotri

ಕೊಳ್ಳಲು ಕಾರಣವೇನು ? ಅಂದಾಗ, ಆತನು ತನ್ನ ಕೈಯಲ್ಲಿ ಕಟ್ಟಿದ ಒಂದು ತಾಯಿತದಂತಹ ವಸ್ತುವನ್ನು ಕಾಣಿಸಿದ.

ಹಾವುಗಳು ಹಗೆತನ ಸಾಧಿಸುವವೆಂದು ಕೇಳಿದ ಕೆಲವು ವಿಚಾರಗಳನ್ನು ನಾನು ಹೇಳುತ್ತೇನೆ. ಸನ್ನೊಬ್ಬ ಸ್ನೇಹಿತ ತನ್ನ ತೋಟದಲ್ಲಿ ಕೆಲಸ ಮಾಡುತ್ತಿದ್ದ. ಆಳೊಬ್ಬನು ತಿಳಿಯದೆ ಗುದ್ದಲಿಯಿಂದ ಹಾವನ್ನು ಘಾಸಿಮಾಡಿದ, ಹಾವು ತನ್ನ ಬಾಲವನ್ನು ಕಳೆದುಕೊಂಡು ಹೇಗೋ ಅಲ್ಲಿಂದ ಪಾರಾಯಿತು. ಆ ತೋಟವು ಹೊಳೆಯಂಚಿನಲ್ಲಿದ್ದು, ಈ ಆಳಿನ ಮನೆಗೆ ಸುಮಾರು ಒಂದು ಮೈಲಿನಷ್ಟು ಅಂತರವಿತ್ತು. ಆದರೂ ಕೂಡ ಹಾವು ಆವನನ್ನು ಎಡೆಬಿಡದೆ ಅನೇಕ ಸಾರಿ ಅನುಸರಿಸಿ,ತನ್ನ ಹಗೆತನವನ್ನು ತೀರಿಸಲು ಪ್ರಯತ್ನಿಸುತ್ತಿತ್ತು. ಆತನ ಮನೆಯನ್ನು ಕಂಡುಹಿಡಿದು, ಪ್ರತೀ ಸಾರಿ ಆತನ ಮೇಲೆ ಧಾಳಿ ಮಾಡುತ್ತಿತ್ತು. ಆದರೆ, ಆತನ ಆದೃಷ್ಟಬಲದಿಂದ ಆವನು ಪಾರಾಗುತ್ತಿದ್ದ. ಇದರಿಂದ ವ್ಯಾಕುಲಚಿತ್ತನಾದ ಆಳು, ಹಾವಾಡಿಗನ ಸಹಾಯದಿಂದ ಆ ಹಾವನ್ನು ಹಿಡಿಸಿ, ತನ್ನ ಜೀವನವನ್ನು ರಕ್ಷಿಸಿಕೊಂಡ ಎಂದರೆ ಹಾವಿನ ಹಗೆ ತನಕ್ಕೆ ಇದೊಂದು ಸಾಕ್ಷಿ.

ಮಗುವನ್ನು ಬಾಳೆಯ ಎಲೆಯ ಮೇಲೆ ಮಲಗಿಸಿದ ನಂತರ ಮತ್ತೊಮ್ಮೆ ಆ ಮಗುವಿನ ಮೈಗೆ ಹಸಿರು ಸೊಪ್ಪಿನ ರಸ ಉಜ್ಜಿ, ತನ್ನ ಕೈಯಲ್ಲಿದ್ದ ಒಂದು ವೀಳ್ಯದೆಲೆಯನ್ನು ಹಿಡಿದು ಮಂತ್ರಿಸಿದನು. ಹಾಗೆಯೇ ಆ ಎಲೆಯನ್ನು ತನ್ನೆರಡು ಬೆರಳುಗಳಿಂದ ಮಧ್ಯಭಾಗಕ್ಕಾಗಿ ಹರಿಯುವಂತೆ ಹಿಡಿದನು.

ಹಾವು ಬುಸುಗುಟ್ಟುತ್ತಾ ಬರುತ್ತಿತ್ತು. ಹಟ್ಟಿಗೆ ಬಂದ ಹಾವು ಹೆಡೆಯೆತ್ತಿ ತನ್ನ ರೋಷವನ್ನು ಪ್ರದರ್ಶಿಸಿತು. ಮಾಂತ್ರಿಕ ಆದನ್ನು ತನ್ನ ವೀಳ್ಯದೆಲೆಯಿಂದಲೇ ನಿಯಂತ್ರಿಸುತ್ತಿದ್ದ. ಹಾವು ಇನ್ನೂ ಹತ್ತಿರ ಬರಲು ಅಸಮ್ಮತಿ ಸೂಚಿಸುತ್ತಿತ್ತು. ಆದರೆ, ಮಾಂತ್ರಿಕ ಆದರ ಮೇಲೆ ಪೂರ್ಣ ಪ್ರಭುತ್ವ ಪಡೆದಿದ್ದ.

ಹಾವು ಆ ಮಗುವಿನತ್ತ ರೋಷದಿಂದಲೇ ಸರಿಯಿತು. ಮಾಂತ್ರಿಕ ತನ್ನ ಕೈಯಲ್ಲಿದ್ದ ಎಲೆಯನ್ನು ಮತ್ತಷ್ಟು ಹಿಂಗಿಸಿದ. ಮೊದಲು ಆ ಮಗುವಿಗೆ ಕಚ್ಚಿದ ಸ್ಥಳದ ಹತ್ತಿರ ಹಾವು ಬಂದು ಮತ್ತೊಮ್ಮೆ ರಭಸದಿಂದ ಕಚ್ಚಿತು. ಅಲ್ಲಿಯೇ ಒಂದು ನಿಮಿಷದವರೆಗೆ ತನ್ನ ಬಾಯನ್ನು ಇಟ್ಟುಕೊಂಡಿದ್ದು, ತಲೆಯೆತ್ತಿ, ತನ್ನ ಬಾಯನ್ನು ಹತ್ತಿರವಿದ್ದ ಹಾಲಿನ ಬಟ್ಟಲಿನಲ್ಲಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಅದ್ದಿತು. ಹಾಲು ಅದು ಬಿಟ್ಟ ವಿಷದಿಂದ ನೀಲಿ ಬಣ್ಣಕ್ಕೆ ತಿರುಗಿತು. ಎರಡು ಮೂರು ಸಾರಿ ಇದೇ ರೀತಿಯಲ್ಲಿ ಹಾವು ಕಚ್ಚಿದ ಸ್ಥಳಕ್ಕೆ ಕಚ್ಚಿ, ಮಗುವಿನ ದೇಹದಲ್ಲಿದ್ದ ಪೂರ್ತಿ ವಿಷವನ್ನು ಹೀರಿತು. ಆದರೂ ಮಾಂತ್ರಿಕ ನಿಗೆ ಸಮಾಧಾನವಿಲ್ಲ. ಮತ್ತೊಮ್ಮೆ ಹಾವನ್ನು ಬಲಾತ್ಕರಿಸಿದ. ಆದರೆ, ಹಾವು ತನ್ನ ಹೆಡೆಯೆತ್ತಿ ಮಣ್ಣಿಗೆ ಹೊಡೆದು ತನ್ನ ರೋಷವನ್ನು ವ್ಯಕ್ತಮಾಡಿತು.

ಮಾಂತ್ರಿಕ ತನ್ನ ಕೈಯಲ್ಲಿದ್ದ ವೀಳ್ಯದೆಲೆಯಿಂದ ಹಾವನ್ನು ನಿಯಂತ್ರಿಸುತ್ತಿದ್ದ. ಆತನ ಚಮತ್ಕಾರ ನಮ್ಮೆಲ್ಲರನ್ನು ಮೂಕರನ್ನಾಗಿ ಮಾಡಿತ್ತು. ಎಲ್ಲಿಯಾದರೂ ಹಾವು ವಿಷವನ್ನು ಮಗುವಿನ ದೇಹದಿಂದ ತೆಗೆಯಲು ಹಿಂತೆಗೆದರೆ, ಆ ಎಲೆಯನ್ನು ಹರಿದ ಹಾಗೆಯೇ ಆ ಹಾವಿನ ದೇಹವೂ ಕೂಡ ಹರಿದು ಎರಡಾಗುವುದೆಂದು ಹೇಳಿದ ಮಾತು ನನ್ನನ್ನು ದಂಗುಬಡಿಸಿತು. ಆದುದರಿಂದಲೇ ಹಾವು ಈ ಕಾಣದ ಬಲೋತ್ಪಂಧಿಗೆ ಸಿಕ್ಕಿ ಹೇಳಿದಂತೆ ಕೇಳುತ್ತದೆಂದು ನೆರೆದಿದ್ದವರಲ್ಲೊಬ್ಬ ಹೇಳಿದ. ಆದರೆ ಮಾಂತ್ರಿಕರು ಎಂದೂ ಹಾಗೆ ಮಾಡದೆ, ಹಾವನ್ನು ಕೊಲ್ಲದೆ, ಜೀವಂತವಾಗಿ ಬಿಟ್ಟುಬಿಡುವರೆಂದೂ ಹೇಳಿದ. ತಮ್ಮ ಕೆಲಸ ಮಾಡಿ, ಅದನ್ನು ನೋಯಿಸದೇ ಕಾಡಿಗಟ್ಟಿದರೆ ಮತ್ತೆಂದೂ ದ್ವೇಷ ಸಾಧಿಸದೆಂದೂ ಹೇಳಿದ. ಹಾಗೇನಾದರೂ ಮಾಂತ್ರಿಕ ಅದನ್ನು ವೀಳ್ಯದೆಲೆಯ ಮೇಲೆ ಕೈಮಾಡಿ ಕೊಂದರೆ, ಆ ಮಾಂತ್ರಿಕನ ಮೈ ಮೇಲೆ ಪಾಂಡುರೋಗ ಬರುತ್ತದೆಂದು ಹೇಳಿದ. ಹಾಗೂ ಆತನ ಸಂಸಾರ ಇಲ್ಲದ ಕಿರುಕುಳಕ್ಕೆ ಸಿಕ್ಕಿ ನಾಶವಾಗುವುದೆಂದು ಹೇಳಿದಾಗ, ಇದನ್ನೆಲ್ಲಾ ಈ ಕಾಡುಕುರುಬರಿಗೆ ಯಾರು ಕಲಿಸಿದರೆಂಬ ಬೃಹತ್ ಪ್ರಶ್ನೆ ನನ್ನ ಮುಂದೆ ಧುತ್ತೆಂದು ನಿಂತಿತು.

ಕಪ್ಪಿಟ್ಟಿದ್ದ ಮಗುವಿನ ಮುಖವು ಈಗ ಸ್ವಲ್ಪ ನಿಜ ಬಣ್ಣಕ್ಕೆ ಬಂದಿತ್ತು. ಮಾಂತ್ರಿಕ ಮತ್ತೊಮ್ಮೆ ಆ ಮಗುವಿನ ಮೈಗೆ ಹಸಿರೆಲೆಯ ಲೇಪನ ಮಾಡಿ, ಪ್ರಥಮ ಚಿಕಿತ್ಸೆ ಮಾಡಿದಂತೆ ಆತನ ಎದೆಯನ್ನು ಅದುಮಿದ. ಹಾಗೆಯೇ ಆತನ ಎದೆಯನ್ನು ತೀಡಿ, ಆ ಮಗುವಿನ ಬಾಯಿಗೆ ಬಾಯಿಟ್ಟು ಶಕ್ತಿ ವಿಹಾರಿ ಊದಿ, ಆ ಮಗುವಿನ ಎದೆಗೆ ಗಾಳಿ ತುಂಬಿಸುತ್ತಿದ್ದನು. ಹಾಗೆಯೇ ಹತ್ತಾರು ಸಾರಿ ಮಾಡಿದಾಗ ಮಗುವಿನ ದೇಹದಲ್ಲಿ ಚಟುವಟಿಕೆ ಕಾಣಿಸುತ್ತಿತ್ತು.

ಹಾವು ಸುಸ್ತಾಗಿ ಮಲಗಿದಂತೆ, ಹಾಲಿನ ಬಟ್ಟಲಿನ ಬಳಿ ಮಲಗಿತ್ತು. ಮಾಂತ್ರಿಕನು ತನ್ನ ಕೈಯಲ್ಲಿದ್ದ ವೀಳ್ಯದೆಲೆಯನ್ನು ಮಗುವಿನ ನೆತ್ತಿಯ

Sri Vidyabharathi Book Centre, Sringeri

CC-O. In Public Domain. Digitized by eGangotri

ಮೇಲಿಟ್ಟು, ಅದರ ಮೇಲೆ ಒಂದಿಷ್ಟು ಆಕ್ಕಿ ಕಾಳುಗಳನ್ನು ಹಾಕಿ, ತನ್ನ ಉದ್ದನೆಯ ಕೋಲಿನಿಂದ ಹಾವನ್ನು ಮುಟ್ಟಿ ಎಬ್ಬಿಸಿದನು. ಹಾವು ಎಚ್ಚರಗೊಂಡು ಅಲ್ಲಿಂದ ಸರಸರನೆ ಓಡಿ, ಹತ್ತಿರದ ಪೊದೆಯನ್ನು ಸೇರಿಕೊಂಡಿತು.

ಮಗುವನ್ನು ಕೆಲವು ಸಮಯದವರೆಗೆ ಚಿಕಿತ್ಸೆಗೆ ಒಳಪಡಿಸಿ, ಮಾಂತ್ರಿಕ ಅಲ್ಲಿಂದ ಮಾಯವಾದ. ನಾವೆಲ್ಲರೂ ಈ ಚಮತ್ಕಾರದ ಮಂತ್ರ ತಂತ್ರವನ್ನು ನೋಡುತ್ತಾ ನಿಬ್ಬೆರಗಾಗಿದ್ದೆವು. ಯಾವುದೇ ಆಧುನಿಕ ಸಂಸ್ಕೃತಿಯ ಸೋಂಕಿಲ್ಲದೆ, ವಿದ್ಯೆ, ವಿಚಾರಗಳಿಲ್ಲದೆ, ಕಾಡಾಡಿಯಾಗಿರುವ ಇವರಲ್ಲಿ ಇಂತಹ ಅದ್ಭುತ ವಿದ್ಯೆ ಹೇಗೆ ತಾನೆ ಬಂತೆಂಬುದು ಇನ್ನೂ ನನಗೆ ಬಿಡಿಸಲಾಗದ ಒಗಟಾಗಿದೆ. ಸತ್ಯಕ್ಕೂ ಕಲ್ಪನೆಗೂ ಅದೆಷ್ಟು ಅಂತರವಿದೆ ? ಇಂತಹ ವಿದ್ಯೆ ಈ ಕಾಡಿನಲ್ಲಿ ಹೇಗೆ ಹುಟ್ಟಿಕೊಂಡಿತು ? ಅವರು ಅದನ್ನು ಯಾರಿಂದ ಹೇಗೆ ಕಲಿತರು ? ಈ ವಿದ್ಯೆಗೆ ಅದಾವ ಹೆಸರಿಡಲಿ ? ಪವಾಡವೇ ? ಯಕ್ಷಿಣಿಯೇ ? ಇಂದ್ರಜಾಲ ಮಹೇಂದ್ರಜಾಲವೇ ? ಇದು ನನಗೆಟುಕದ ವಿಚಾರವಾಗಿದೆ.

ಇಂತಹ ಅದ್ಭುತ ವಿದ್ಯೆಗಳನ್ನು ಕಲಿತ ಕಾಡುಕುರುಬರು ನಮ್ಮ ರೇಂಜಿನಲ್ಲಿ ದಿನಕೂಲಿ ಮಾಡುತ್ತಿದ್ದರು. ಇವರಲ್ಲಿ ದಿನ ಕಳೆದಂತೆ ನನಗೆ ಅಭಿಮಾನ ಮೂಡಿತ್ತಲ್ಲದೆ, ಅವರನ್ನು ಗೌರವದಿಂದ ನೋಡುತ್ತಿದ್ದೆ. ಅವರು ಜೀವನಕ್ಕಾಗಿ ಅರಣ್ಯ ಇಲಾಖೆಯನ್ನು ಅವಲಂಬಿಸಿದ್ದಲ್ಲದೆ, ಕಾಡಿನಲ್ಲಿನ ಗೆಡ್ಡೆ, ಗೆಣಸು, ಜೇನು ಬೇಟೆ ಹೀಗೆ ಆನಂದವಾಗಿ ಕಾಲಕಳೆಯುತ್ತಿದ್ದರು. ಗಂಡು ಹೆಣ್ಣು ಎಲ್ಲರೂ ರೇಂಜಿನ ಕೆಲಸಕ್ಕೆ ಬರುತ್ತಿದ್ದರಲ್ಲದೆ, ಅವರೆಲ್ಲಾ ನನ್ನವರೆಂಬ ಭಾವನೆ ನನ್ನಲ್ಲಿ ಮೂಡಿತ್ತು.

ನಮ್ಮ ರೇಂಜಿನಲ್ಲಿದ್ದ ಯುರೋಪಿಯನ್ ರೇಂಜರು ತುಂಬಾ ಕಾಮುಕನೆಂದು ಹೇಳಿಕೆಯಿತ್ತು. ಅಲ್ಲಿ ಇಲ್ಲಿ ನಮ್ಮ ಸಿಬ್ಬಂದಿಗಳಾಡುವ ಪಿಸು ಮಾತುಗಳನ್ನು ಕೇಳಿದ್ದೆನು. ಆತನು ಎಷ್ಟು ಕುಡುಕನೋ ಅಷ್ಟೇ ಸ್ತ್ರೀ ಲಂಪಟನಾಗಿದ್ದನು. ಹಾಗೆಯೇ ಆತನಲ್ಲಿ ಧಾರಾಳತನವೂ ಇತ್ತು. ಅವಿವಾಹಿತನಾದ ಯುವಕನಿಗೆ ಅರಣ್ಯದ ಏಕಾಂಗಿ ಜೀವನ ಅದೆಷ್ಟು ಹಿಡಿಸೀತು ? ಸುತ್ತು ಮುತ್ತೆಲ್ಲಾ ಗೊಂಡಾರಣ್ಯ ಮತ್ತು ವನ್ಯಜಂತುಗಳು, ಕಾಡುಕುರುಬರು. ಇವರ ಮಧ್ಯೆ ತನಗೆ ಸರಿಸಮಾನರಿಲ್ಲದ ಆ ಕಾನನದಲ್ಲಿ ಆತ ಸಿಕ್ಕಿದ್ದರಲ್ಲಿ ತೃಪ್ತಿಪಡುವ ಒಳಸಂಚು ನಡೆಸಿದ್ದನು.

Sri Vidyabharathi Book Centre, Sringeri

CC-O. In Public Domain. Digitized by eGangotri

ಆತನ ಕಾಮುಕ ಪ್ರವೃತ್ತಿಗೆ ಇಂಬುಗೊಡಲು ಆತನ ಬಂಗ್ಲೆಯಲ್ಲಿ ಊಳಿಗ ಮಾಡುತ್ತಿದ್ದ ಕುರುಬ ಯುವಕ ಸಹಕಾರಿಯಾಗಿದ್ದನು. ಕುರುಬರ ವಸತಿಯಲ್ಲಿ ಹೃಷ್ಟಪುಷ್ಟವಾದ ಯುವತಿಯರನ್ನು ಏನೇನೋ ಆಸೆ, ಆಮಿಷ ಗಳನ್ನು ತೋರಿ ಬಲೆಗೆ ಬೀಳಿಸಿಕೊಂಡು, ತನ್ನ ಧಣಿಗೆ ಒಪ್ಪಿಸಿ, ಕೃತ ಕೃತ್ಯನಾ ಗುತ್ತಿದ್ದನು. ಇದರಿಂದ ಒಮ್ಮೆ ತನಗೂ ತನ್ನ ಧಣಿಗೂ ದುರಂತವನ್ನೇ ತಂದುಕೊಂಡ.

ಕಾಡು ಕುರುಬರು ತಂತ್ರ, ಮಂತ್ರಗಳಲ್ಲಿ ತುಂಬಾ ಪ್ರವೀಣರೆಂದು ಆಗಲೇ ಹೇಳಿರುವೆನು. ರೇಂಜರರ ಬಂಗ್ಲೆಯಲ್ಲಿದ್ದವನು ಯುವತಿಯರನ್ನು ತನ್ನ ಮಂತ್ರಶಕ್ತಿಯಿಂದಲೋ ಅಥವಾ ಯಾವುದೋ ತಂತ್ರದಿಂದಲೋ ಹಾರಿಸುವುದರಲ್ಲಿ ತುಂಬಾ ನಿಪುಣನಿದ್ದನು. ಒಂದು ಹುಡುಗಿ ಏಕಾಂಗಿಯಾಗಿ ದ್ದಾಗ ಭೇಟಿಮಾಡಿ, ತನ್ನ ಕೈ ಚಳಕವನ್ನು ತೋರಿಸುತಿದ್ದುದು ಕುರುಬರಲ್ಲಿ ಜನಜನಿತವಾಗಿತ್ತು. ಆದರೆ, ಬಿಳಿ ರೇಂಜರರನ್ನು ಎದುರು ಹಾಕಿಕೊಳ್ಳುವ ಧೈರ್ಯವಿಲ್ಲದೆ ಕುರುಬರು ತಟಸ್ಥರಾಗಿದ್ದರು.

ಹುಡುಗಿಯನ್ನು ಏಕಾಂತವಾಗಿ ಭೇಟಿಯಾದಾಗ ಆಕೆಯೊಡನೆ, ಆಕೆ ಮೆಚ್ಚುವಂತಹ ಮಾತುಗಳನ್ನಾಡಿ, ಆಕೆಯು ಈತನನ್ನು ದೃಷ್ಟಿಸಿದಾಗ, ತನ್ನ ಕೈಯಲ್ಲಿ ಸಿದ್ಧಮಾಡಿಕೊಂಡಿರುವ ಹಸಿರು ಮೂಲಿಕೆಯನ್ನು ತನ್ನ ಹಣೆಗೆ ಹಾಕಿಕೊಂಡು ಮಂತ್ರಪಠನೆ ಮಾಡುತ್ತಾ ನಡೆಯುತ್ತಾನೆ. ಈ ಕ್ರಿಯೆಯಿಂದ ಆ ತರುಣಿಯು ತನ್ನನ್ನೇ ತಾನು ಮರೆತು, ತನ್ನ ಮೇಲೆ ಹಿಡಿತವಿಲ್ಲದಾಗಿ, ಯಾವುದೇ ಬೇರೆ ಜ್ಞಾಪಕಶಕ್ತಿಯಿಲ್ಲದೆ ಆತನೊಡನೆ ತೆರಳುತ್ತಾಳೆಂದು ಅವರ ಮಾತು.

ಕಾಡು ಕುರುಬರಲ್ಲಿ ಒಳ್ಳೆಯವನೆಂದು ಹೇಳಿಸಿಕೊಂಡು, ಮೇಸ್ತ್ರಿ ಸ್ಥಾನಕ್ಕೇರಿದವನ ಇದ್ದ ಒಬ್ಬಳೇ ಮಗಳು, ಅವಳ ಮೇಲೆ ಈ ಕಿರಾತನ ಕಣ್ಣು ಬೀಳಬೇಕೆ ? ತಂದೆಯಿಲ್ಲದ ಸಮಯ ಸಾಧಿಸಿ, ಅವಳಿಗೆ ಮಂಕು ಬೂದಿ ಹಚ್ಚಿ, ಆಕೆಯನ್ನು ಲಪಟಾಯಿಸಿ, ತನ್ನ ದೊರೆಗೆ ಅವಳನ್ನು ಅರ್ಪಿಸಿ ಸಂತೋಷಪಟ್ಟಿದ್ದ ಆತನಿಗೆ ತನ್ನ ಹಿಂದೆ ಗಂಡಾಂತರ ಕಾದಿದೆಯೆಂದು ತಿಳಿ ದಿರಲಿಲ್ಲವೇನೊ ! ಹಣಕ್ಕಾಗಿ ಏನನ್ನೂ ಮಾಡಲು ಹೇಸದ ಆತನಿಂದ ಆ ಹುಡುಗಿಯ ಶೀಲ ಸೂರೆಯಾಗಿತ್ತು.

ರೇಂಜರರ ಬಂಗ್ಲೆಯಿಂದ ಹೊರಬಂದಾಗ ಆಕೆ ಬಿಕ್ಕಿ ಬಿಕ್ಕಿ ಅಳುತ್ತಿ ದ್ದಳು. ಅಳುತ್ತಿದ್ದ ಮಗಳನ್ನು ಕಂಡ ಮೇಸ್ತ್ರಿಗೆ ಆಕಾಶವೇ ಕಳಚಿಬಿದ್ದಂತಾ

Sri Vidyabharathi Book Centre, Sringeri

CC-O. In Public Domain. Digitized by eGangotri

ಯಿತು. ಈ ಗಂಡಾಂತರಕ್ಕೆ ಇಂಬುಗೊಟ್ಟು, ಪುಸಲಾಯಿಸಿದ ಆ ಊಳಿಗ ದವನ ವಿಚಾರ ಆಕೆ ವಿಶದಪಡಿಸಿದಾಗ ತಂದೆ ಕೆರಳಿದ ಹುಲಿಯೇ ಆದ. ಈ ಅವಮಾನದಿಂದ ಕಂಪಿತನಾದ ಮೇಸ್ತ್ರಿಗೆ ಸಹಾಯ ಮಾಡಲು, ವಸತಿಯಲ್ಲಿ ತನ್ನವರಿದ್ದರೂ ಕೂಡ ಬಿಳಿ ರೇಂಜರಿನ ಮೇಲೆ ಸೇಡು ತೀರಿಸುವುದಾದರೂ ಹೇಗೆ ? ತಲೆಗಟ್ಟಿ ಇದೆಯೆಂದು ಬಂಡೆಗಲ್ಲಿನೊಡನೆ ಸೆಣಸಾಟವೇ ?

ಅಂದು ರಾತ್ರಿ ಮೇಸ್ತ್ರಿಯು ತನ್ನ ಪಾಡಿಯಲ್ಲಿ ಮಲಗಲೇ ಇಲ್ಲ. ತನ್ನ ಮಗಳನ್ನು ಪಾಡಿಯಲ್ಲಿ ಮಲಗಿಸಿ, ಆದೆತ್ತಲೋ ಹೋದವನು ಬೆಳಗಿನ ಜಾವಕ್ಕೆ ವಾಪಾಸಾದನು. ಆತನ ಮುಖದಲ್ಲಿ ಒಂದು ನಿರ್ಧಾರವಿತ್ತು. ತನ್ನ ಪ್ರೀತಿಯ ಒಬ್ಬಳೇ ಮಗಳ ಶೀಲದೊಡನೆ ಚಕ್ಕಂದವಾಡಿದಂತಹವನ ಮೇಲೆ ಸೇಡು ತೀರಿಸುವ ಛಲವಿತ್ತು.

ಮರು ದಿನ ರೇಂಜರನ ಬಂಗ್ಲೆಯ ಊಳಿಗದವನು ಹುಚ್ಚು ಹುಚ್ಚಾಗಿ ಕಿರುಚುತ್ತಾ ಅಲ್ಲಿ ಇಲ್ಲಿ ಓಡಾಡುತ್ತಿದ್ದ. ರೇಂಜರರು ಬೆಕ್ಕಿನ ಬಾಲಕ್ಕೆ ಪಟಾಕಿ ಕಟ್ಟಿದಂತೆ ತನ್ನ ಬಂಗ್ಲೆಯಲ್ಲಿ ಅತ್ತಿತ್ತ ಗೋಳಾಡುತ್ತಾ ತಿರುಗುತ್ತಿದ್ದನು. ವಿಷಯ ತಿಳಿದು ಬಂಗ್ಲೆಗೆ ಬಂದ ನಮಗೆ ಯಾವುದೇ ವಿಚಾರಗಳು ತಿಳಿಯಲಿಲ್ಲ. ಬಂಗ್ಲೆಯ ಬೇರೊಬ್ಬ ಊಳಿಗದವನನ್ನು ಏನು ಕೇಳಿದರೂ ಆತನು ಕೇಕೆ ಹಾಕಿ ಹಾರಿ, ಸುತ್ತುತ್ತಿದ್ದನು. ಮತ್ತೊಬ್ಬ ಊಳಿಗದವನು ಗರಬಡಿದವನಂತೆ ಮೆಟ್ಟಿಲಿನಲ್ಲಿ ಕೂತು ಹೂಂಕರಿಸುತ್ತಿದ್ದ. ರೇಂಜರನು ತನ್ನ ದೇಹಕ್ಕೆಲ್ಲಾ ಮುಳ್ಳು ಚುಚ್ಚುತ್ತಿದೆಯೆಂದು ದುಃಖಿಸುತ್ತಿದ್ದನು. ಇದನ್ನು ಹೇಗೆ ತಾನೆ ಪರಿಹಾರ ಮಾಡುವುದು ? ಇದರ ಕಾರಣ ತಿಳಿಯದೆ ಪರಿಹಾರ ಮಾಡುವುದಾದರೂ ಹೇಗೆ ?

ಈ ವಿಚಾರ ತಿಳಿದು 'ಪಾಡಿ'ಯಿಂದ ಅನೇಕರು ಬಂದು ಹೋದರು. ತಮಗೆ ತಿಳಿದ ಔಷಧಿ, ಮಂತ್ರ, ತಂತ್ರಗಳನ್ನೆಲ್ಲಾ ಮಾಡಿದರು. ಆದರೆ, ದಿನೇ ದಿನೇ ರೇಂಜರನ ನೋವು ಹೆಚ್ಚುತ್ತಿತ್ತು. ಊಳಿಗದವನು ತನ್ನ ಮೈ ಮೇಲಿನ ಬಟ್ಟೆ ಬರೆಗಳನ್ನು ಹರಿದು, ಸತ್ತವನಂತೆ ಅನ್ನ, ನೀರು ಬಿಟ್ಟು ಮರದಡಿಯಲ್ಲಿ ಮಲಗಿದನು. ರೇಂಜರರ ರೋಧನ ಮಾತ್ರ ಹೆಚ್ಚುತ್ತಿದ್ದುದರಿಂದ ನಾವುಗಳು ಹೇಗಾದರೂ ಆಸ್ಪತ್ರೆಗೆ ಒಯ್ಯಲು ಏರ್ಪಾಡು ಮಾಡಿದೆವು. ನಮ್ಮ ರೇಂಜಿನಿಂದ ಸುಮಾರು ನಲವತ್ತು ಮೈಲು ದೂರದಲ್ಲಿದ್ದ ಆಸ್ಪತ್ರೆಗೆ, ರೇಂಜರನನ್ನು ಎತ್ತಿನ ಗಾಡಿಯಲ್ಲಿ ಒಯ್ದೆವು. ಆಗಿನ ಕಾಲದ ರಸ್ತೆಯೋ ದೇವರಿಗೆ ಪ್ರೀತಿ. ಬೇರೆ ಯಾವುದೇ ರೀತಿಯ ವಾಹನಗಳಿಲ್ಲವಾದುದ್ದ

Sri Vidyabharathi Book Centre, Sringeri

CC-O. In Public Domain. Digitized by eGangotri

ರಿಂದ ಎತ್ತಿನ ಗಾಡಿಯೇ ಸರ್ವಸ್ವವಾಗಿತ್ತು. ಒಂದು ರಾತ್ರಿ, ಒಂದು ಹಗಲು ಪ್ರಯಾಣಿಸಿ ಆಸ್ಪತ್ರೆ ಸೇರಿದಾಗ, ರೇಂಜರರು ಜೀವಂತ ಹೆಣವಾಗಿದ್ದರು.

ಆಸ್ಪತ್ರೆಯ ಆಂಗ್ಲ ಸರ್ಜನನು ಬಂದು ರೇಂಜರರನ್ನು ಪರೀಕ್ಷಿಸಿದನು. ಆದರೆ, ಆವರಿಗೆ ಯಾವುದೇ ರೋಗದ ಚಿಹ್ನೆ ಕಾಣಲಿಲ್ಲ. ಶತಪ್ರಯತ್ನ ಮಾಡಿದರೂ ಆವರಿಗೆ ರೋಗ ಏನೆಂದು ಹೇಳಲಾಗಲಿಲ್ಲ. ನಾಮಕಾವಾಸ್ತೆ ಔಷಧಿಗಳನ್ನು ಕೊಟ್ಟು, ಎರಡು ದಿವಸಗಳವರೆಗೆ ಶುಶ್ರೂಷೆ ಮಾಡಿದರು. ಆದರೆ, ಯಾವುದೇ ಪರಿಹಾರ ಕಾಣಲಿಲ್ಲ. ರೇಂಜರರ ಗೋಳು ಯಾವ ಶತ್ರುವಿಗೂ ಬೇಡದಂತಾಗಿತ್ತು.

ಆಸ್ಪತ್ರೆಯಲ್ಲಿ ಯಾವುದೇ ಗುಣ ಕಾಣದ್ದರಿಂದ ನಾನು ರೇಂಜಿಗೆ ಮರಳಿದೆನು. ರೇಂಜಿಗೆ ಬಂದಾಗ ನಮ್ಮ ಕೆಲಸಗಾರರ ಗುಂಪಲ್ಲಿದ್ದ ಹಿರಿಯ ಕುರುಬನು ಬಂದು, ರೇಂಜರಿಗೆ ಬಂದಿರುವ ಕತ್ತನ್ನು ವಿವರಿಸಿದನು. ಯಾರೋ ಕುರುಬರಲ್ಲಿರುವ ಮಂತ್ರವಾದಿಯೇ ಈ ಕೆಲಸ ಮಾಡಿರಬೇಕೆಂದು ವಿಶದಪಡಿಸಿದನು. ತನಿಖೆ ಮಾಡುತ್ತಾ ನಡೆದ ನನಗೆ, ರೇಂಜರರು ಮತ್ತು ಆತನ ಊಳಿಗದವನು ಮಾಡಿದ ನೀಚ ಕೃತ್ಯ ಮತ್ತು ಅದರಿಂದ ರೋಸಿ ಹೋದ ಮೇಸ್ತ್ರಿಯು ಸೇಡು ತೀರಿಸಲು ಹೀಗೆ ಮಾಡಿದನೆಂದು ತಿಳಿದು ಬಂತು.

ರಾತ್ರಿಯೇ ನಾನು ಮೇಸ್ತ್ರಿಯ ಪಾಡಿಯತ್ತ ಹೋದೆನು. ಮೇಸ್ತ್ರಿಯು ಆಗತಾನೆ ಎಲ್ಲಿಗೋ ಹೊರಗೆ ಹೊರಟ್ಟಿದ್ದನು. ನನ್ನನ್ನು ಕಂಡ ಮೇಸ್ತ್ರಿಯನ್ನು ಪ್ರೀತಿಯಿಂದ ಮಾತಾಡಿಸಿ, ಕೆಲಸಕ್ಕೆ ಗೈರುಹಾಜರಾಗಿದ್ದೇಕೆಂದು ಕೇಳಿದೆ. ಯಾವ್ಯಾವುದೋ ಮಾತುಗಳನ್ನಾಡಿದ ನಾನು, ರೇಂಜರರ ಮತ್ತು ಊಳಿಗದವನ ವಿಚಾರ ಹೇಳಿ, ಆವರಿಗೆ ತಕ್ಕ ಪ್ರಾಯಶ್ಚಿತ್ತವಾಯಿತೆಂದು ಆತನಿಗೆ ಒತ್ತಾಸೆ ಕೊಟ್ಟು ಮಾತಾಡಿದೆ. ಆತನಿಗೆ ನನ್ನ ಮೇಲೆ ವಿಶ್ವಾಸವಿತ್ತು, ಮತ್ತು ನಾನು ಆತನನ್ನು ಗೌರವದಿಂದ ಕಾಣುತ್ತಿದ್ದೆನು. ನನ್ನ ಈ ತನಿಖೆ ಸಮಯದಲ್ಲಿ ಆತನು ಬಿಕ್ಕಿ ಬಿಕ್ಕಿ ರೋಧಿಸುತ್ತಾ ತನ್ನ ಮಗಳ ಮೇಲೆ ನಡೆದ ದೌರ್ಜನ್ಯಕ್ಕೆ ಪ್ರತಿರೂಪವಾಗಿ ತಾನು ಅಂತಹ ಕೆಲಸ ಮಾಡಿದೆನೆಂದು ಒಪ್ಪಿಕೊಂಡ.

ನಾನು ಹೆಚ್ಚು ಮಾತನಾಡದೆ, ನನ್ನ ವಸತಿಗೆ ಬಂದವನು ಮರು ದಿವಸವೇ ಆಸ್ಪತ್ರೆಗೆ ನಡೆದೆ. ರೇಂಜರರಿಗೆ ಆಗಿ ಹೋದ ವಿಚಾರಗಳನ್ನು ತಿಳಿಸಿ,

CC-O. In Public Domain. Digitized by eGangotri

ಈ ಕುತ್ತಿನಿಂದ ಪಾರಾಗಬೇಕಾದರೆ, ಮೇಸ್ತ್ರಿಯ ಕಾಲು ಹಿಡಿಯುವುದೊಂದೇ ಉಪಾಯವೆಂದು ಮನದಟ್ಟುಮಾಡಿದೆ. ರೇಂಜರರು ಜೀವಭಯದಿಂದ ಅವನ ಕಾಲು ಹಿಡಿಯುವುದೇ ಅಲ್ಲ, ಅವನ ಯಾವ ಷರತ್ತಿಗೂ ಒಪ್ಪುವುದಾಗಿ ಹೇಳಿದರು. ಆಸ್ಪತ್ರೆಯಿಂದ ರೇಂಜರು ವಾಪಾಸು ಬಂದಾಗ, ಬಂಗ್ಲೆಯಲ್ಲಿ ರೇಂಜಿನ ಎಲ್ಲಾ ಜನರು ಬಂದು ಸೇರಿದ್ದರು. ನಾನು ಮೇಸ್ತ್ರಿಯ ಕೈಕಾಲು ಹಿಡಿದು ರೇಂಜರರನ್ನುಳಿಸಬೇಕೆಂದು ಕೇಳಿಕೊಂಡೆನು. ಅದಕ್ಕೆ ಮೇಸ್ತ್ರಿಯು ಒಪ್ಪಿದರೂ, ಒಂದು ಕಟುವಾದ ಷರತ್ತನ್ನು ಮುಂದೊಡ್ಡಿದನು. "ನಾಯಿ ಮುಟ್ಟಿದ ಮಡಕೆ ನಾಯಿಗೆ ಇರಲಿ" ನನ್ನ ಮಗಳನ್ನು ರೇಂಜರರು ಸ್ವೀಕರಿಸಲು ತಯಾರಿದ್ದರೆ ಮಾತ್ರ ರೇಂಜರನ್ನು ಮತ್ತು ಊಳಿಗದವನನ್ನುಳಿಸುತ್ತೇನೆ ಎಂದ. ರೇಂಜರರಿಗೆ ಮತ್ತಾವ ವಾದ ಮಾಡುವ ತಾಕತ್ತಿಲ್ಲವಾದ್ದರಿಂದ ಈ ಷರತ್ತಿಗೆ ಒಪ್ಪಲೇಬೇಕಾಯಿತು.

ಮೇಸ್ತ್ರಿಯು ತನ್ನ ಮಗಳನ್ನು ಮದುವಣಿಗಿತ್ತಿಯಂತೆ ಶೃಂಗರಿಸಿ, ಬಂಗ್ಲೆಗೆ ಕರೆತಂದನು. ಆಕೆಯ ಕೈಯಲ್ಲಿ ಹಣ್ಣು ಹಂಪಲಿನ ತಟ್ಟೆ ಅದರ ಮೇಲೊಂದು ಕೆಂಪು ವಸ್ತ್ರವಿದ್ದಿತು. ಮೇಸ್ತ್ರಿಯೂ ಕೂಡ ಕೆಂಪು ಅಡ್ಡ ಪಂಚೆಯನ್ನು ಕಟ್ಟಿ, ಕೈಯಲ್ಲಿ ಯಾವುದೋ ಸೊಪ್ಪಿನ ಕೊಂಬೆಯನ್ನು ಹಿಡಿದಿದ್ದನು. ತನ್ನ ಮಗಳನ್ನು ನೇರವಾಗಿ ರೇಂಜರು ಮಲಗಿದ್ದಲ್ಲಿಗೆ ಕರೆತಂದು ಆಕೆಯ ಕೈಯಲ್ಲಿದ್ದ ತಟ್ಟೆಯನ್ನು ರೇಂಜರರ ಕೈಗೆ ಕೊಡಿಸಿದನು. ರೇಂಜರರು ಕೆಂಪು ಬಟ್ಟೆಯನ್ನು ತೆಗೆದು ಮೇಸ್ತ್ರಿಯ ಮಗಳ ಭುಜಗಳು ಮುಚ್ಚುವಂತೆ, ಇಳಿಬಿಟ್ಟು ಕಟ್ಟಿದನು ಮತ್ತು ಆಕೆಯನ್ನು ತನ್ನ ಹಾಸಿಗೆಯ ಮೇಲೆ ಕೂರಿಸಿ, ನೋವಿನಿಂದ ಗೋಳಾಡಹತ್ತಿದನು.

ಮೇಸ್ತ್ರಿಯು ತನ್ನ ಕೈಯಲ್ಲಿದ್ದ ಸೊಪ್ಪಿನ ಕೊಂಬೆಯನ್ನು ರೇಂಜರ ಮುಖದಿಂದ ಹಿಡಿದು ಕಾಲಿನವರೆಗೆ ಮೂರು ಸಲ ಇಳಿತೆಗೆದು ಹೊರಬಂದನು. ಹೊರಗೆ ನಿಂತಿದ್ದ ನನ್ನನ್ನು ಕರೆದು, ಒಂದು ಸ್ಥಳ ತೋರಿಸಿ, ಅಲ್ಲಿ ಒಂದು ಗುಂಡಿ ತೋಡಿಸಲು ಹೇಳಿದನು. ನಾನು ಒಬ್ಬನನ್ನು ಕರೆದು ಬಂಗ್ಲೆಯ ಮೆಟ್ಟಲಿಳಿಯುವಲ್ಲಿ ತೋರಿಸಿದ ನೆಲವನ್ನು ಅಗೆಯಲು ಹೇಳಿದೆ. ಒಂದೆರಡು ಸಲ ಮಣ್ಣನ್ನು ಹೊರ ತೆಗೆದಾಗ ಒಂದು ಮರದ ಹಲಗೆ ಸಿಕ್ಕಿತು. ಅದನ್ನು ಕೈಯಿಂದ ತೆಗೆದಾಗ, ಅವರಡಿಯಲ್ಲಿ ಒಂದು ಸಣ್ಣ ಕುಡಿಕೆ ಇರುವುದು ಕಂಡು ಬಂದಿತು. ಅದನ್ನು ಅರಸಿನದ ಒಟ್ಟೆಯಲ್ಲಿ ಸುತ್ತಿ ಬಾಯಿ ಕಟ್ಟಲ್ಪಟ್ಟಿದ್ದಿತು. ಆ ಕುಡಿಕೆಯನ್ನು ಹೊರತೆಗೆದಾಗ, ಬಂಗ್ಲೆಯ ಒಳಗಿದ್ದ ರೇಂಜರು ಗಟ್ಟಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಯಾಗಿ ಬಾಯಿ ಬಡಿಯುತ್ತಿದ್ದನು. ಮೇಸ್ತ್ರಿಗೆ ಆವೇಶ ಬಂದಿತ್ತು. ಕುಡಿಕೆಯನ್ನು ಕೈಯಿಂದೆತ್ತಿ, ಅಲ್ಲಿಯೇ ಇದ್ದ ಮೆಟ್ಟಲಿಗೆ ಬಲವಾಗಿ ಕುಕ್ಕಿದನು. ಆದರೊಳಗೆ ಕಾಡುಸೊಪ್ಪುಗಳು. ಬೂದಿ, ಮಸಿ ಜೊರುಗಳು, (ಇದ್ದಲು) ಅಕ್ಕಿ ಕಾಳುಗಳು ಮತ್ತು ಉದ್ದದ ಮುಳ್ಳು ಹಂದಿಯ ಎರಡು ಮುಳ್ಳುಗಳು ಹೊರಬಿದ್ದವು. ಅಷ್ಟರವರೆಗೆ ಬಾಯಿಬಡಿಯುತ್ತಿದ್ದ ರೇಂಜರರು ಒಮ್ಮೆಗೇ ಸ್ಮೃತಿ ತಪ್ಪಿಬಿದ್ದನು. ಮರದಡಿಯಲ್ಲಿ ಬಿದ್ದಿದ್ದ ಊಳಿಗದವನು ಅದೆಲ್ಲಿಗೆ ಓಡಿ ಮಾಯವಾದನೋ ತಿಳಿಯಲಿಲ್ಲ. ಈ ಕ್ರಿಯೆಯಾದ ನಂತರ ಒಂದು ಪಾತ್ರೆಯಲ್ಲಿ ನೀರು ತಂದು ಮೇಸ್ತ್ರಿಯು ಆದರಲ್ಲೆರಡು ಕೋಳಿ ಮೊಟ್ಟೆಗಳನ್ನು ಮಂತ್ರಿಸಿ, ಮುಳುಗಿಸಿ, ಬಂಗ್ಲೆಯ ಸುತ್ತು ಏನೇನೋ ಹೇಳುತ್ತಾ, ಮೂರು ಪ್ರದಕ್ಷಣೆ ಮಾಡಿ, ಕೆಲವು ಸಮಯ ಕಾಡು ನುಗ್ಗಿ ಹೊರಬಂದನು. ಕೈಯಲ್ಲಿ ಪಾತ್ರೆಯ ನೀರು ಮಾತ್ರವಿತ್ತು. ಬಂಗ್ಲೆಯ ಒಳಬಂದವನು ರೇಂಜರನ್ನು ಕುಳ್ಳಿರುವಂತೆ ಹೇಳಿ ತಲೆಯ ಮೇಲೆ ಆ ನೀರನ್ನು ಹೊಯ್ದನು. ರೇಂಜರರು ನಿದ್ದೆಯಿಂದೆಚ್ಚೆತ್ತವನಂತೆ ಎಚ್ಚರಗೊಂಡನು. ಬಳಿಯಲ್ಲೇ ಕೂತಿದ್ದ ತನ್ನ ಮಗಳ ಕೈಯನ್ನು ರೇಂಜರ ಸಾಹೇಬನ ಕೈಗೆ ಕೊಟ್ಟು, ಮೇಸ್ತ್ರಿ ಬಂಗ್ಲೆ ಬಿಟ್ಟು ಹೊರಬಂದನು.

ಈ ಚಮತ್ಕಾರಿಕ ವಿದ್ಯೆ ಪ್ರದರ್ಶನವನ್ನು ನಾನು ಮೂಕನಾಗಿ ವೀಕ್ಷಿಸುತ್ತಿದ್ದೆ. ರೇಂಜರರ ಹತ್ತಿರ ಹೋದಾಗ ಅವರೆದ್ದು ಕೂತಿದ್ದರು. ಯಾವುದೋ ಒಂದು ಜೊಂಪು ಹಿಡಿದಿದ್ದಂತೆ ಇದ್ದ ರೇಂಜರರು ಸ್ವಲ್ಪ ಕ್ಷೀಣವಾದರೂ ಹಸನ್ಮುಖಿಯಾಗಿದ್ದರು. ತನ್ನ ಮೈಯನ್ನು ಚುಚ್ಚುತ್ತಿದ್ದ ಪೀಡೆ ಕಳೆದು ಶರೀರವು ಹಗುರವಾಯಿತೆಂದು ಹೇಳಿದರು. ಇದೆಲ್ಲಾ ನನ್ನ ಪಾಲಿಗೆ ಸ್ವಪ್ನದಂತೆ ಕಾಣಿಸಿತ್ತು.

ರೇಂಜರರ ಬಂಗ್ಲೆಯಲ್ಲಿ ಮೇಸ್ತ್ರಿಯ ಮಗಳು 'ದೊರೆಸಾನಿ'ಯಾದಳು. ರೇಂಜರರು ಅಂದಿನಿಂದ ತುಂಬಾ ಪರಿವರ್ತನೆಗೊಂಡು ಸಭ್ಯರಾದರು. ಆ ಅರಣ್ಯದಲ್ಲಿ ಕೆಲಸ ಮಾಡುತ್ತಿದ್ದ ಕಾಡುಕುರುಬರಿಗೆ ಸರಕಾರದೊಡನೆ ವ್ಯವಹರಿಸಿ, ಸುಮಾರು ನೂರು ಎಕರೆ ಜಾಗವನ್ನು ಮಂಜೂರು ಮಾಡಿಸಿ, ಅದಕ್ಕೆ ತನ್ನ ದೊರೆಸಾನಿಯ ಹೆಸರು "ಚುಂಡೆ"ಯೆಂದಿದ್ದುದರಿಂದ ಚುಂಡೆ ಕಾಡು ಎಂದು ಹೆಸರಿಸಿದನು.

ಇಂತಹ ಚಮತ್ಕಾರ ವಿದ್ಯೆಯನ್ನು ಯಾವುದೇ ಮುಂದವರಿದ ಜನಾಂಗದಲ್ಲೂ ಕಾಣದು. ಅತೀ ಆಳವಾಗಿ ಅಭ್ಯಾಸ ಮಾಡಿದ ಮನೋವಿಜ್ಞಾನಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಗಳಿಗೂ ಸಾಧ್ಯವಾಗದ ಈ ಚಮತ್ಕಾರಿಕ ವಿದ್ಯೆ ಈ ಕಾಡಾಡಿಗಳಾದ ಇವರಿಗೆ ಹೇಗೆ ಸಾಧ್ಯವೆನಿಸಿದೆಯೆಂದು ನನಗೆ ತಿಳಿಯಲಾಗಲಿಲ್ಲ.

ನಾನು ಈ ರೇಂಜಿಗೆ ಬಂದು ಕೆಲವು ತಿಂಗಳುಗಳಲ್ಲಿ ಸರಕಾರವು ನನಗೆ ಸಣ್ಣದೊಂದು ಬಿಡ್ತಿ ಕೊಟ್ಟಿತು. ರೇಂಜನಲ್ಲಿ ನನ್ನ ಊಟೋಪಚಾರಕ್ಕೆ ಅನುವಾಗಲೆಂದು ವಿಧವೆಯಾದ ನನ್ನ ಒಬ್ಬಳೇ ಅಕ್ಕನನ್ನು ಕರೆತಂದಿದ್ದೆ. ಹೇಗಾದರೂ ಮಾಡಿ ನನ್ನ ಮದುವೆ ಮಾಡಿಸಲೇಬೇಕೆಂಬ ಅಕ್ಕನ ಹಠಕ್ಕೆ ನಾನು ಮಣಿಯಲೇಬೇಕಾಯಿತು. ನಾನು ಕಾಡಿನಲ್ಲಿದ್ದುಕೊಂಡು ಯಾರದೋ ಕುಟುಂಬದ ಯಾವುದೋ ಯುವತಿಯನ್ನು ತಂದು ಪ್ರಾಣಹೀರುವುದು ಸರಿಯಲ್ಲವೆಂದರೆ ಆಕೆ ಕೇಳಬೇಕಲ್ಲಾ ! ದಿನನಿತ್ಯ ಆಕೆಗೆ ಅದೇ ಚಿಂತೆ.[1]

ಕಡೆಗೊಮ್ಮೆ ಆಕೆಯು ಆರಿಸಿದ ಯುವತಿಯನ್ನೇ ಕೈಹಿಡಿಯಬೇಕಾಯಿತು. ಮದುವೆಯಾಗಿ ಒಂದರಡು ವಾರಕ್ಕೆ ಅಲ್ಲಿಂದ ವರ್ಗವಾಗಬೇಕೆ ? ಈ ಕಾಡುಜನರ ಪ್ರೇಮ, ಪ್ರೀತಿ ಅವರಲ್ಲಿ ನನಗಿದ್ದ ಅಪಾರ ಗೌರವ, ಹಾಗೂ ನನ್ನ ರೇಂಜಿನ ಆಸುಪಾಸುಗಳ ಪರಿಚಯವೆಲ್ಲಾ ನಾನು ಅಲ್ಲಿಂದ ವರ್ಗವಾಗದಂತೆ ತಡೆದಿದ್ದರೂ, ಹೃದಯ ಭಾರದಿಂದ ಬೇರೊಂದು ರೇಂಜಿಗೆ ಸಂಸಾರ ಸಮೇತ ಹೋಗಲೇಬೇಕಾಯಿತು.

ಹೊಸ ರೇಂಜಿಗೆ ಬಂದಾಗ ನಾನು ಒಟ್ಟು ಎಂಟು ವರ್ಷದ ಸೇವೆ ಮಾಡಿದ್ದೆನು. ನಾನು ಅಲ್ಲಿಗೆ ಹೋದ ಕೆಲವೇ ದಿನಗಳಲ್ಲಿ ಅಲ್ಲಿದ್ದ ಯುರೋಪಿಯನ್ ರೇಂಜರು ಯಾವುದೋ ಯುದ್ಧ ನಿಮಿತ್ತವಾಗಿ ಸೇನೆಗೆ ಭರ್ತಿಯಾಗಿ ಇಂಗ್ಲೆಂಡಿಗೆ ಹೋದರು. ಅವರ ಸ್ಥಾನದಲ್ಲಿ ನನ್ನ ನೇಮಕವಾಯಿತು.

ನನ್ನ ಸಂಸಾರ ಆ ಬಂಗ್ಲೆಗೆ ಬಂದಂದಿನಿಂದ ನನ್ನ ಅಕ್ಕನ ದೇಹವೇ ಕ್ಷೀಣಿಸುತ್ತಿತ್ತು. ಆಕೆಗೆ ರಾತ್ರಿ ಕಾಲದಲ್ಲಿ ದೆವ್ವ ಹಿಡಿಯುತ್ತಿತ್ತು. ಬಾಯಿಗೆ ಬಂದದ್ದನ್ನೆಲ್ಲಾ ಬಡಬಡಿಸುತ್ತಾ ರಾತ್ರಿಯಿಡೀ ಯಾರಿಗೂ ನಿದ್ರೆಯಿಲ್ಲದಂತೆ ಮಾಡುತ್ತಿದ್ದಳು. ಈ ಒಂದು ಪಿಡುಗನ್ನು ಹೇಗೆ ಹೋಗಲಾಡಿಸುವುದೆಂದು ತಿಳಿಯದೆ ರೇಂಜಿನ ಆಳುಗಳ ಜತೆ ವಿಚಾರ ಹೇಳಲು, ಅದಕ್ಕೆ ಪರಿಹಾರವಿದೆ ಎಂದು ಧೈರ್ಯವಿತ್ತರೂ ರಾತ್ರಿಯಿಡೀ ಏನೇನೊ ಹೇಳುತ್ತಾ, ತಲೆ ಕೆದರಿ, ಬಾಯ್ಬಡಿಯುವ ಅಕ್ಕನ ಸ್ಥಿತಿ ನೋಡಿ ಸಾಕಾಗಿದ್ದ ನನಗೆ—ಆಳುಗಳ ಸಲಹೆ ಮುಳುಗುವವನಿಗೆ ಹುಲ್ಲುಕಡ್ಡಿ ದೊರೆತಂತಾಗಿತ್ತು.

ಒಂದು ದಿನ, ಅಕ್ಕನ ಮೇಲಿನ ದೆವ್ವ ಬಿಡಿಸುವ ಕಾರ್ಯಕ್ರಮ ರೂಪಿತವಾಯಿತು. ದೆವ್ವ ಬಿಡಿಸುವವನು ಹೇಳಿದ ಹೆಂಡ, ಕೋಳಿ, ಬೇರೆ ಸಾಮಾನು

Sri Vidyabharathi Book Centre, Sringeri

CC-O. In Public Domain. Digitized by eGangotri

ಗಳನ್ನು ಆಣಿ ಮಾಡಲಾಯಿತು. ಕುರುಬರ 'ಹಾಡಿ'ಯಲ್ಲಿದ್ದ ಎಲ್ಲಾ ಗಂಡು ಹೆಣ್ಣುಗಳು ರಾತ್ರಿ ನನ್ನ ಹಟ್ಟಿಯಲ್ಲಿ ನೆರೆದರು.

ದೆವ್ವ ಬಿಡಿಸುವವನು ಮಿಂದು, ಕೆಂಪು ಅಡ್ಡ ಪಂಚೆಯನ್ನು ಕಟ್ಟಿ, ಕಾಲುಗಳಿಗೆ ಗೆಜ್ಜೆ ಕಟ್ಟಿ ತಯಾರಾದನು. ನನ್ನ ಅಕ್ಕನನ್ನು ಕುರುಬತಿಯರು ಸ್ನಾನ ಮಾಡಿಸಿ, ಮಡಿಬಟ್ಟೆಯುಡಿಸಿ, ನೆಲದಲ್ಲಿ ಏನೇನೋ ವಿಕಾರ ರೂಪಿನ ಚಿತ್ರ ಬರೆದಿದ್ದ ಸ್ಥಳದಲ್ಲಿ ಸ್ಟೂಲು ಹಾಕಿ—ಕೂರಿಸಿದರು. ಆಕೆಯ ತಲೆ ಕೆದರಿತ್ತು. ಆಕೆಯ ಮುಖವಿದಲ್ಲೊಂದು ತೇಜಸ್ಸಿತ್ತು.

ದೆವ್ವ ಬಿಡಿಸುವವನ ಅಪ್ಪಣೆಯಂತೆ ನಾಲ್ಕು ಜನರು ಚಿಕ್ಕ ಡೋಲುಗಳನ್ನು (ದುಡಿ) ತಂದು ಬಾರಿಸಹತ್ತಿದರು. ಅದರ ಜತೆಯ ಚೀನಿ (ಊದುವ ವಾಲಗ)ಯನ್ನು ಬಾರಿಸುತ್ತಿದ್ದರು. ಡೋಲುಬಡಿತ ಹಚ್ಚಾದಂತೆ ದೆವ್ವ ಬಿಡಿಸುವವನು ಕುಣಿಯುತ್ತಾ, ಬಾಯಲ್ಲಿ ಏನೇನೋ ಹೇಳುತ್ತಾ, ಕೇಕೆ ಹಾಕುತ್ತಿದ್ದನು. ಕಡೆಗೊಮ್ಮೆ ಆತನಿಗೆ ಆವೇಶವೇ ಬಂದಿತ್ತು. ಡೋಲು ಬಡಿತ ಇನ್ನೂ ಹೆಚ್ಚಾಯಿತು. ನಡುನಡುವೆ ಆ ಆವೇಶದ ಹೂಂಕಾರ, ಗೆಜ್ಜೆಗಳ ನಾದ, ಡೋಲುಗಳ ಕಿವಿಗಡಚಿಕ್ಕುವಂತಹ ಶಬ್ದ ವಾತಾವರಣವನ್ನು ಭಯಂಕರ ಮಾಡಿತ್ತು. ಆದರೆ, ಅಕ್ಕನು ಮಾತ್ರ ನಿಶ್ಚಿಂತಳಾಗಿ ಕೂತಿದ್ದಳು. ಒಂದು ಕೋಳಿಯನ್ನು ತಂದು ಪೂಜಾರಿಯು (ದೆವ್ವ ಬಿಡಿಸುವವನ ಸಹಾಯಕ) ದೆವ್ವ ಬಿಡಿಸುವವನ ಕೈಗಿತ್ತನು. ಆತನು ಕೋಳಿಯ ತಲೆ ಹಿಡಿದು, ಆದರ ಕುತ್ತಿಗೆಗೆ ಬಾಯಿಹಾಕಿ, ಮಗು ಮೊಲೆ ಹೀರಿದಂತೆ ಕೋಳಿಯ ರಕ್ತವನ್ನು ಹೀರಿ, ಕುತ್ತಿಗೆಯನ್ನು ತುಂಡು ಮಾಡಿ ಎಸೆದನು. ಆಗ ನೋಡಬೇಕತ್ತು ಆತನ ವಿಕಾರ ಸ್ವರೂಪ!

ಅಕ್ಕನನ್ನು ಸ್ಟೂಲಿನಿಂದ ಎಬ್ಬಿಸಿ, ಒಂದು ಅಗಲವಾದ ಪಾತ್ರೆಯಲ್ಲಿ ನೀರು ಹಾಕಿ, ಅದರೊಳಗೆ ಕಾಲುಗಳನ್ನಿಟ್ಟು ನಿಲ್ಲಲು ದೆವ್ವ ಬಿಡಿಸುವವನು ಅಪ್ಪಣೆಯಿತ್ತ. ತನ್ನ ಹಾಡಿನಲ್ಲೇ ದೆವ್ವಕ್ಕೆ ಏನು ಬೇಕೆಂದು ಕೇಳಿದ. ನೀನು ಈ ಹೆಂಗಸನ್ನು ಹಿಡಿದುಕೊಂಡು ತೊಂದರೆ ಕೊಡುತ್ತಿರುವುದಕ್ಕೆ ತಕ್ಕ ಶಾಸ್ತಿಯೇ ಮಾಡಬೇಕಾದೀತು, ಈಗ ನಾವು ಕೊಡುವ ಬಲಿಯನ್ನು ಸ್ವೀಕರಿಸಿ ತೊಲಗಬೇಕೆಂದು ಹಾಡಿನಲ್ಲೇ ಹೇಳಿದ ಹಾಗೆ ಹೋಗಲು ಇಷ್ಟವಿಲ್ಲದಿದ್ದರೆ ಕಾರಣ ತಿಳಿಸಲು ಈಕೆಯ ಮೈಮೇಲೆ ಬಂದು ಮಾತಾಡೆಂದು—ಕೈಯಲ್ಲಿದ್ದ ಉದ್ದ ಕೋಲಿನಿಂದ ಒಂದು ಏಟು ಹಾಕಿದ.

CC-O. In Public Domain. Digitized by eGangotri

ಉಪಚಾರದ ಮಾತುಗಳಿಂದ ಜಗ್ಗದ ದೆವ್ವಕ್ಕೆ ಪೆಟ್ಟು ಬಿದ್ದಾಗ, ಹೂಂಕರಿಸಿತು, ಎಡಪಾರ್ಶ್ವದಲ್ಲಿ ಆಣಿಮಾಡಿದ್ದ ಬಲಿಸ್ಥಾನಕ್ಕೆ ಒಂದು ಒಲಿಯಿತ್ತು. ಒಂದಷ್ಟು ಅಕ್ಕಿಯನ್ನು ಆಕಾಶಕ್ಕೆರಚಿದನು. ಡೋಲುಗಳ ಬಡಿತ ಬದಲಾಯಿಸಿತು. ದೆವ್ವ ಬಿಡಿಸುವವನು ಏಕಾರ ಮುಖವಾಡವನ್ನು ತನ್ನ ಮುಖಕ್ಕೆ ಕಟ್ಟಿಕೊಂಡು ರಾಗವಾಗಿ ಹಾಡುತ್ತಾ, ಅಕ್ಕನ ಸುತ್ತ ಕುಣಿಯ ಹತ್ತಿದನು.

ಮಧ್ಯರಾತ್ರಿಯಾದರೂ ಅಕ್ಕನ ಮೈಮೇಲೆ ದೆವ್ವ ಬರಲಿಲ್ಲ. ಒಂದು ಪಾತ್ರೆಯಲ್ಲಿ ನೀರು ತುಂಬಿ ಕಾಲು ಅಲ್ಲಾಡಿಸಲಾಗದ ಸ್ಥಿತಿಯಲ್ಲಿ ಗಂಟೆಗಟ್ಟಲೆ ನಿಲ್ಲುವುದೆಂದರೆ ಪ್ರಯಾಸವೇ ಸರಿ. ಮತ್ತೊಮ್ಮೆ ದೆವ್ವ ಬಿಡಿಸುವವನು ತನ್ನ ಕೈಯಲ್ಲಿದ್ದ ಬೆತ್ತದಿಂದ ಎರಡು ಬಾರಿಸಿದನು. ನನ್ನ ಅಕ್ಕನ ಮೇಲೆ ಬಿದ್ದ ಪೆಟ್ಟು ನನ್ನ ಬೆನ್ನಿಗೆ ಬಿದ್ದಂತಾಯಿತು. ಬಿದ್ದ ಪೆಟ್ಟಿನಿಂದ ಅಕ್ಕ ಒಮ್ಮೆಗೇ ಚೀರಿದಳು. ತನ್ನ ತಲೆಗೆದರಿ, ಎರಡು ಕೈಗಳನ್ನು ಎದೆಗೆ ಬಡಿದುಕೊಂಡು, ನಿಂತ ಜಾಗದಿಂದ ಒಂದೆರಡು ಹೆಜ್ಜೆ ಮುಂದಿಟ್ಟು–ತೂರಾಡಹತ್ತಿದಳು. ದೆವ್ವ ಬಿಡಿಸುವವನು ಮತ್ತೊಮ್ಮೆ ಆಕಾಶದತ್ತ ಅಕ್ಕಿಯನ್ನೆಸೆದು 'ಮಾತಾಡು' ಎಂದು ಆರ್ಭಟಿಸಿದ. ಆದರೆ, ಅಕ್ಕನ ದೆವ್ವ ಮಾತಾಡುವುದು ಬಿಟ್ಟು ಡೋಲಿನ ಬಡಿತಕ್ಕೆ ಕುಣಿಯಹತ್ತಿತು. ಕುಣಿದಂತೆ ಪೂಜಾರಿಯತ್ತ ಕೈಮಾಡಿ 'ಅಮೃತ' ಎಂದಿತು. ಕುಡಿಕೆಯಲ್ಲಿರಿಸಿದ್ದ ಸೇಂದಿಯನ್ನು ಸಣ್ಣ ಮಡಿಕೆಗೆ ಹೊಯ್ದು ಅಕ್ಕನ ಕೈಗೆ ಕೊಟ್ಟನು. ಗಟಗಟನೆ ಅದನ್ನು ಕುಡಿದ ದೆವ್ವ 'ಇನ್ನೂ ಬೇಕೆಂದು ಸಂಜ್ಞೆ ಮಾಡಿತು. ಜೀವಮಾನದಲ್ಲೆಂದೂ ಸೇಂದಿ, ಶರಾಬು ಕುಡಿಯದ ಅಕ್ಕ, ಕುಡಿದು ಕುಪ್ಪಳಿಸುವುದನ್ನು ಕಂಡು ನನಗೆ ಆಶ್ಚರ್ಯವಾಗಿತ್ತು. ಕೊಟ್ಟದ್ದನ್ನೆಲ್ಲಾ ಗಟಗಟನೆ ಕುಡಿದು, ಮತ್ತೂ ಕೈಯೊಡ್ಡುತ್ತಿರುವುದನ್ನು ನೋಡಿ ನಾನು ಮಂಕುಬಡಿದವನಂತಾಗಿದ್ದೆ.

ದೆವ್ವ ಬಿಡಿಸುವವನು ಎರಡು ಕೋಳಿಗಳನ್ನು ತಂದು ಬಲಿ ಕೊಟ್ಟು, ಒಂದು ಬಿದಿರು ತುಂಡಿನಲ್ಲಿ ಅದರ ರಕ್ತ ತುಂಬಿ, ಮಂತ್ರ ಹೇಳುತ್ತಾ ಅದರೊಳಗೆ ಅರಸಿನ, ಮಸಿ, ಅಕ್ಕಿ ಏನೇನೊ ಹಾಕಿ, ಒಂದು ನಿಂಬೆ ಹಣ್ಣನ್ನು ಮಂತ್ರಿಸತೊಡಗಿದನು. ಮಂತ್ರಿಸುತ್ತಿದ್ದಂತೆ, ಅಕ್ಕನನ್ನು ಹಿಡಿದದೆವ್ವ ಆತನ ಕೈಯಿಂದ ಆ ನಿಂಬೆಹಣ್ಣನ್ನು ಎಳೆಯುವ ಪ್ರಯತ್ನ ನಡೆಸಿತು. ಮಾಂತ್ರಿಕನು ತನ್ನಕೈಯಲ್ಲಿ ಏಳು ತರಹದ ಬಣ್ಣಗಳ ನೂಲನ್ನು ನಿಂಬೆಹಣ್ಣಿಗೆ ಸುತ್ತತೊಡಗಿದನು. ಅಕ್ಕನ ಮೇಲಿನ್ನದೆವ್ವ ವಿಕಾರವಾಗಿ ಅರಚತೊಡಗಿತು. 'ನನ್ನನ್ನು ಬಿಟ್ಟು

Sri Vidyabharathi Book Centre, Sringeri

CC-O. In Public Domain. Digitized by eGangotri

ಬಿಡು' ಎಂದು ಗೋಗರೆಯಿತು. ಆದರೆ, ಮಾಂತ್ರಿಕನು ಭದ್ರವಾಗಿ ನೂಲನ್ನು ನಿಂಬೆಹಣ್ಣಿಗೆ ಸುತ್ರಿ ನಂತರ ಎರಡು ದೊಡ್ಡ ಮುಳ್ಳುಗಳನ್ನು ಅದಕ್ಕೆ ಚುಚ್ಚಿದನು. ದೆವ್ವ ವಿಕಾರವಾಗಿ ಕೂಗಿತು. ಅಕ್ಕನು ಕುಣಿಯುತ್ತಿದ್ದರೂ ಕೂಡ ತನ್ನೆರಡು ಕಣ್ಣುಗಳನ್ನು ಮುಚ್ಚಿಕೊಂಡು ರೋಧಿಸತೊಡಗಿತು. ಬಿದಿರ ತುಂಡಿನೊಳಗೆ ಆ ನಿಂಬೆ ಹಣ್ಣನ್ನಿಟ್ಟ. ಬಿದಿರ ತುಂಡಿನ ತೆರೆದ ಬಾಯಿಯನ್ನು ಭದ್ರವಾಗಿ ಮುಚ್ಚಿದನು. ಈಗ ಮಾಂತ್ರಿಕ ಗೆಲುವಿನಿಂದ ಕೇಕೆ ಹಾಕಿ ಕುಣಿಯತೊಡಗಿದನು.

ಸುಮಾರು ನಾಲ್ಕನೆ ಝಾವದ ಸಮಯವಿರಬಹುದು. ಕಡೇಯದಾಗಿ ಹೆಂಡದ ಗಡಿಗೆಯನ್ನು ದೆವ್ವಕ್ಕಿತ್ತು. ಒಂದು ಕೋಳಿಯನ್ನು ಬಲಿಯಿತ್ತು ಅಕ್ಕನ ಮುಖಕ್ಕೆ ಒಂದು ಹಿಡಿ ಅಕ್ಕಿಯನ್ನೆಸೆದನು. ವಾದ್ಯದವರು ಬಂಗ್ಲೆಯ ಎಡ ಹಾದಿಯತ್ತ ಮಾಂತ್ರಿಕನ ಆಪ್ಪಣೆಯಂತೆ ನಡೆಯಹತ್ತಿದರು. ಪಾಟಾಳಿಯೆಂದರೆ ಮಾಂತ್ರಿಕನು ತನ್ನ ಕೈಯಲ್ಲಿದ್ದ ಬಿದಿರ ತುಂಡನ್ನು ಒಬ್ಬನನ್ನು ಕರೆದು ಅವನ ಕೈಗಿತ್ತು ಹಾಲು ಬರುವ ಮರದಡಿಯಲ್ಲಿದ್ದ ಹಳ್ಳದಲ್ಲಿ ಹೂಳಲು ಹೇಳಿದನು. ಅಕ್ಕನ ಎರಡು ಕೈಗಳಿಗೂ ಮಂತ್ರಿಸಿದ ನೂಲು ಕಟ್ಟಿ, ಆಕೆಯ ನಡುವಿಗೆ ಒಂದು ಹಗ್ಗ ಕಟ್ಟಿ ಇಬ್ಬರು ಎರಡು ಬದಿಯಿಂದ ಹಿಡಿದು ಕೊಂಡರು.

ಈ ಮೆರವಣಿಗೆ ಕುಣಿಯುತ್ತಾ ಹತ್ತಿರದ ಹೊಳೆಯತ್ತ ಸಾಗಿತು. ನಾನು ಮತ್ತು ಅಲ್ಲಿ ನೆರೆದಿದ್ದವರೆಲ್ಲಾ ಅನುಸರಿಸಿದೆವು. ಅಕ್ಕನು ಕಣ್ಣು ಬಿಡದೆ, ಆ ಏರುತಗ್ಗುಗಳಲ್ಲಿ ಸರಾಗವಾಗಿ ನಡೆಯುತ್ತಿದ್ದಳು. ಹೊಳೆಯ ಹತ್ತಿರವೇ ಮೂರು ದಾರಿಗಳು ಕೂಡುವಲ್ಲಿ ಒಂದು ಚಿತ್ರ ಬರೆದು ಅದಕ್ಕೆ ಆಹಾರ (ಬಲಿ) ಕೊಟ್ಟು ಮಾಂತ್ರಿಕನು ಹೊಳೆಯುತ್ತ ನಡೆದನು. ಹೊಳೆಯಲ್ಲಿ ಮನುಷ್ಯನನ್ನು ಮುಳುಗಿಸುವಷ್ಟು ನೀರಿದ್ದಿತು. ಡೋಲುಗಳು ಕಿವಿಗಡಚಿಕ್ಕುವಂತೆ ಮಾರ್ದನಿಗೊಂಡವು. ದೆವ್ವವು ತನ್ನ ಎರಡೂ ಕಣ್ಣುಗಳು ಹೋದವೆಂದು ಆರಚುತ್ತಿತ್ತು. ಹೊಳೆಯ ದಡದಲ್ಲಿ ಎರಡು ಪಾರ್ಶ್ವದಲ್ಲಿ ಎರಡು ದೀವಟಿಗೆಗಳನ್ನು ಹೊತ್ತಿಸಿದ್ದರು. ಅಕ್ಕನ ಮೇಲಿನ ದೆವ್ವ ಕುಣಿಯುತ್ತಿತ್ತು. ಗಳಿಗೆಗೊಮ್ಮೆ ನನ್ನ ಕಣ್ಣುಗಳು ಹೋದವೆಂದೂ ಚೀರುತ್ತಿತ್ತು. ಮಾಂತ್ರಿಕನ ಸಲಹೆಯಂತೆ ಇಬ್ಬರು ನೀರಿಗಿಳದು ನಿಂತರು. ಮಾಂತ್ರಿಕನು ಸಮಯ ನೋಡಿ, ಅಕ್ಕನನ್ನು ಹೊಳೆಯೊಳಕ್ಕೆ ಒಮ್ಮೆಗೇ ನೂಕಿದನು. ಅನಿರಿಕ್ಷಿತವಾಗಿ ನೂಕಲ್ಪಟ್ಟ ಅಕ್ಕನು, ನೀರಿಗೆ ಬಿದ್ದು

Sri Vidyabharathi Book Centre, Sringeri

CC-O. In Public Domain. Digitized by eGangotri

ಮುಳುಗಿದಳು. ನೀರು ಆಳವಿದ್ದುದರಿಂದ ಮೊದಲೇ ತಯಾರಾಗಿದ್ದ ಇಬ್ಬರು ಅವಳನ್ನು ಹಿಡಿದು ಮೇಲೆತ್ತಿ ದಂಡೆಗೆ ತಂದರು. ಅಕ್ಕನು ಪ್ರಜ್ಞಾಹೀನಳಾಗಿದ್ದಳು. ಆಕೆಯ ಹಾರಾಟ, ಕಿರುಚಾಟವೇನೂ ಇಲ್ಲದೆ, ಸತ್ತ ಹೆಣದಂತೆ ಬಿದ್ದಿದ್ದಳು. ಆಕೆಯನ್ನು ತಂದು ಚಾಪೆಯಲ್ಲಿ ಮಲಗಿಸಿ, ನನ್ನನ್ನು ದ್ದೇಶಿಸಿ, ಅಕ್ಕನೊಡನೆ ಮಾತಾಡಲು ಮಾಂತ್ರಿಕ ಹೇಳಿದ. ಮಾಂತ್ರಿಕನ ಆವೇಶವೂ ಇಳಿದಿತ್ತು. ಡೋಲು ಮೊರೆತವಿರಲಿಲ್ಲ. ನನ್ನ ಕರೆಯುವಿಕೆಯಿಂದ ಅಕ್ಕನು ನಿದ್ರೆಯಲ್ಲಿ ಗೊಣಗಿದಂತೆ, ದಡಬಡಿಸಿ ಎದ್ದು ಕುಳಿತಳು. ತನಗೆ ಯಾವುದೇ ವಿಚಾರ ತಿಳಿಯದಂತೆ ಆಕೆ "ನನ್ನನ್ನು ಇಲ್ಲಿಗೇಕೆ ಕರೆತಂದಿರಿ" ಎಂದು ಪ್ರಶ್ನಿಸಿದಳು. "ನನ್ನ ಮೈಮೇಲೆ ನೀರೇಕೆ ಹಾಕಿದಿರಿ" ಎಂದಳು.

ಅಂದಿನಿಂದ ಅಕ್ಕನ ಮೇಲಿನ ದೆವ್ವ ಬಿಟ್ಟುಹೋಯಿತು. ಆಕೆಯ ದೇಹವೂ ಕೂಡ ತುಂಬಿಕೊಳ್ಳತೊಡಗಿತು. ಈ ಕಾಡುಕುರುಬರ ದೆವ್ವ ಬಿಡಿಸುವ ರೀತಿ ಅದೆಷು ವೈಜ್ಞಾನಿಕವಾದದ್ದು ಎಂದು ನನ್ನನ್ನೇ ನಾನು ಪ್ರಶ್ನಿಸಿಕೊಂಡೆ.

ದೆವ್ವವೇ ಸುಳ್ಳಿಂದು ಹೇಳುತ್ತಿದ್ದ ನಾನು, ದೆವ್ವ ಬಿಡಿಸುವ ಕಾರ್ಯಕ್ಕೆ ಹೆಂಡತಿಯ ಮನಃತೃಪ್ತಿಗಾಗಿ ಬೆಂಬಲವಿತ್ತೆ. ಆದರೆ, ಈ ಕ್ರಿಯೆಗಳಾದ ಮೇಲೆ ಅಕ್ಕನು ನೆಮ್ಮದಿಯಲ್ಲಿರುವುದನ್ನು ಕಂಡು ದೆವ್ವವಿದೆಯೆನ್ನುವ ನಿಲುವಿಗೆ ಬಂದೆ.

ಅಕ್ಕನ ಶರೀರ ಇನ್ನೂ ಸುಧಾರಿಸಲಿಯೆಂದು ನನ್ನ ಹೆಂಡತಿಯ ಹಿಂಸೆಯಿಂದ ಒಂದು ಹಸುವನ್ನು ಕೊಳ್ಳಬೇಕಾಯಿತು. ಈ ಹಸುವನ್ನು, ದುಷ್ಟ ಪ್ರಾಣಿಗಳೇ ತುಂಬಿರುವ ಕಾಡಿನಲ್ಲಿ ಸಾಕುವುದು ಸುಲಭವಾಗಿರಲಿಲ್ಲ. ಆ ಹಸುವನ್ನು ಮೇಯಿಸಿ, ಮಿಾಯಿಸಿ, ಜೋಪಾನ ಮಾಡಲು ರೇಂಜಿನ ಒಬ್ಬ ಯುವಕನಿಗೊಪ್ಪಿಸಿದೆನು. ಹಸುವೂ ಕೂಡ ಆರಣ್ಯದ ಯಥೇಚ್ಛ ಹುಲ್ಲು ತಿಂದು ದಷ್ಟಪುಷ್ಟವಾಗಿ ಬೆಳೆಯುತ್ತಿತ್ತು.

ಒಂದು ದಿನ ದನವನ್ನು ನೋಡುತ್ತಿದ್ದವನು ಬಂದು, ಅಂದು ನಡೆದ ಅನಿರೀಕ್ಷಿತ ವಿಚಾರವನ್ನು ತಿಳಿಸಿದನು. ಹಸುವನ್ನು ಮೇಯಿಸಿ, ಹತ್ತಿರದ ತೋಡಿನಲ್ಲಿ ನೀರು ಕುಡಿಸಿ, ಬರುವಾಗ ಒಂದು ಹೆಬ್ಬುಲಿಯು ಇವರನ್ನು ಹಿಂಬಾಲಿಸಿ ಬಹುದೂರದವರೆಗೆ ಬಂದಿತ್ತು. ಒಂದೆರಡು ಫರ್ಲಾಂಗಿನಷ್ಟು ದೂರ ಹಿಂಬಾಲಿಸಿದ ಹುಲಿಯು ಗುರ್-ಗುರ್ ಶಬ್ದಮಾಡಿ ಕಾಡಿನೊಳಗೆ ನುಗ್ಗಿತ್ತೆಂದು ಹೇಳಿದನು. ಹಸುವನ್ನು ಕಂಡ ಹುಲಿಯು ಅದನ್ನು ಹೇಗಾ

CC-O. Vasudeva Bharathi Book Centre, Sringeri

CC-O. In Public Domain. Digitized by eGangotri

ದರೂ ಬಲಿ ತೆಗೆದೀತೆಂದು ಹೆದರಿ, ಮರುದಿನ ನಾನೂ ಆ ಹಸುವಿನೊಡನೆ ಕೋವಿ ಹೊತ್ತು ನಡೆದೆ. ಆದರೆ, ಆ ದಿವಸ ಆ ಹುಲಿಯು ಕಾಣಲೇ ಇಲ್ಲ. ನಾಲ್ಕಾರು ದಿವಸಗಳು ಕಳಿದರೂ ಹುಲಿಯ ದರ್ಶನವಾಗಲಿಲ್ಲ.

ಈ ಹುಲಿಯ ಉಪದ್ರವಕ್ಕೆ ಹೆದರಿ, ಹಸುವನ್ನು ನಾವಿದ್ದ ಬಂಗ್ಲೆಯ ಒಂದು ಕೋಣೆಯಲ್ಲಿ ಸೇರಿಸಿ ಬಾಗಿಲು ಭದ್ರಮಾಡುತ್ತಿದ್ದೆವು. ಒಂದು ದಿವಸ ಅನಿರೀಕ್ಷಿತವಾಗಿ ಹಸುವನ್ನು ಕೂಡಿಸಿದ್ದ ಕೋಣೆಯ ಬಾಗಿಲು ಪರ ಪರನೆ ಶಬ್ದವಾಯಿತು. ಈ ಶಬ್ದದಿಂದ ಎಚ್ಚರಗೊಂಡು ನಾನು ಕೋವಿ ಯನ್ನು ಬಂದು ಮಾಡಿ, ನನ್ನ ಕೋಣೆಯ ಕಿಟಕಿಯ ಹತ್ತಿರ ಬಂದು ನೋಡಿದೆ. ಮಂದ ಪ್ರಕಾಶದಲ್ಲಿ ಒಂದು ದೊಡ್ಡ ಹೆಬ್ಬುಲಿಯು ದನ ಕಟ್ಟಿದ ಕೋಣೆಯೊಳಗೆ ನುಗ್ಗಲು ಭೀಮ ಸಾಹಸ ಮಾಡುತ್ತಿತ್ತು. ನನ್ನ ಕೋಣೆಯೂ ಹಸುಕಟ್ಟಿದ ಕೋಣೆಯೂ ಎದುರುಬದುರಾಗಿದ್ದು ನಡುವಿನಲ್ಲಿ ಆಂಗಳವಿತ್ತು. ಹುಲಿಯನ್ನು ಕಂಡ ನನ್ನ ಜಂಘಾಬಲವೇ ಉಡುಗಿ ಹೋಯಿತು. ಹಸು ಕೋಣೆಯಲ್ಲಿದ್ದರೂ ಈ ಹುಲಿಯು ಅದನ್ನು ಹೇಗೆ ಕಂಡುಹಿಡಿಯಿತು ? ಇನ್ನು ಈ ಹುಲಿಯನ್ನು ಸುಮ್ಮನೆ ಬಿಟ್ಟರೆ, ಹಸುವಿಗೆ ಖಂಡಿತಾ ಪ್ರಾಣಾಪಾಯವೆಂದು ಗುರಿ ನೋಡಿ, ಕಿಟಕಿಯಿಂದ ಗುಂಡಿಕ್ಕಿದೆ. ಹುಲಿಯು ಗುಂಡೇಟಿನಿಂದ ನೆಲಕ್ಕುರುಳಿ, ಅಬ್ಬರಿಸಿ, ನಾಗಾಲೋಟದಲ್ಲಿ ಕಾಡು ಸೇರಿತು. ಪ್ರಪ್ರಥಮವಾಗಿ ಹುಲಿಗೆ ಗುಂಡಿಕ್ಕಿದ್ದರಿಂದ ನಾನು ಗಡ ಗಡನೆ ನಡುಗುತ್ತಿದ್ದೆ. ಹುಲಿಯನ್ನು ಗುಂಡಿಕ್ಕುವ ಧೈರ್ಯ ಎಲ್ಲರಿಗೂ ಇರುವುದಿಲ್ಲ. ಅದಕ್ಕೆ ಗಟ್ಟಿಯಾಗಿ ಎದೆಗುಂಡಿಗೆಯಿದ್ದರೂ ಸಾಲದು. ಸಮಯ ಬಂದಾಗ ಗುಂಡಿನ ಮೇಲೆ ಗುಂಡಿಕ್ಕುವ ತಾಕತ್ತೂ ಇರಬೇಕೆನಿಸಿತು.

ಬೆಳಿಗ್ಗೆ ಎದ್ದು ಹಸುವಿನ ಕೋಣೆಗೆ ಹೋದಾಗ ಅಲ್ಲಿ ಆಶ್ಚರ್ಯವೇ ಕಾದಿತ್ತು. ಹಸುವು ಅಂಗಾತ ಬಿದ್ದು ಅಸುನೀಗಿತ್ತು. ನಾನು ಹುಲಿಗೆ ಹೊಡೆದ ಗುಂಡು ಬಾಗಿಲಿಗೆ ಬಡಿದಿತ್ತು. ನನ್ನ ಗುಂಡು ಹುಲಿಗೂ ತಗಲಿ, ಒಂದು ಜೊರು ಬಾಗಿಲನ್ನು ದಾಟಿ, ಹಸುವಿನ ತಲೆಗೆ ಸರಿಯಾಗಿ ತಗು ಲಿತ್ತು. ಹಸುವು ಆ ಕ್ಷಣವೇ ನೆಲಕ್ಕೊರಗಿರಬೇಕು. ಈ ಹುಲಿಯು ನೆಲ ಕ್ಕೊರಗಿ ಒದ್ದಾಡಿ, ಓಡುವಾಗಲೇ ಹಸುವು ಕೂಡ ನೆಲಕ್ಕೆ ಬಿದ್ದಿರಬೇಕು. ಹುಲಿಗೆ ಹೊಡೆದ ಗುಂಡು ಹೀಗೆ ಅನಾಹುತ ಮಾಡುವುದೆಂದು ಯಾರಿಗೆ ತಾನೆ ಸ್ವಪ್ನ ಬಿದ್ದೀತು ? ಹಸುವನ್ನು ಹುಲಿಯ ಬಾಯಿಂದ ತಪ್ಪಿಸಲು ಹೋಗಿ ಸ್ವತಃ ನಾನೇ ಹಸುವನ್ನು ಕೈಯಾರೆ ಕೊಂದ ದುರಾದೃಷ್ಟಕ್ಕೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಏನೆನ್ನಬೇಕು ? ಮನೆಯಲ್ಲಿ ಹೆಂಡತಿ ಮತ್ತು ಅಕ್ಕ ಇಬ್ಬರೂ ಅಳಲು ಪಕ್ರಮಿಸಿದರು . ಆದರೆ, ನಾನೇನು ಮಾಡಲಿ ? ಕಾರ್ಯ ಮಿಂಚಿತ್ತು !

ಬೆಳಿಗ್ಗೆ ರೇಂಜಿನ ಕೆಲಸಕ್ಕೆ ಬಂದ ಆಳುಗಳು ದಾರಿಯಲ್ಲಿ ದೊಡ್ಡ ಹೆಬ್ಬುಲಿ ಸತ್ತು ಬಿದ್ದಿದೆಯೆಂದು ಹೇಳಿದರು. ಈ ವಾರ್ತೆಯಿಂದ ಸಂತೋಷ ಗೊಂಡು, ಹಸುವನ್ನು ಬಲಿಯಿತ್ತರೂ ಹುಲಿಯನ್ನು ಬಲಿತೆಗೆದುಕೊಂಡೆನಲ್ಲಾ ಎಂದು ಸಮಾಧಾನದ ಉಸಿರುಬಿಟ್ಟೆ. ಅಕ್ಕ ಮತ್ತು ಹೆಂಡತಿಯನ್ನು ಸಮಾಧಾನಿಸಿದೆ. ಊಟಮಾಡಲು ತಿಳಿಯದವನು ಎಲೆ ಹರಿದುಕೊಂಡಂತೆ ನನ್ನ ಸ್ಥಿತಿಯಾಗಿತ್ತು.

ಆ೦ದು ಹುಲಿ ಹೊಡೆದವನಿಗೆ ಸರಕಾರವು ಪುರಸ್ಕಾರವೀಯುತ್ತಿತ್ತು. ಹುಲಿಯ ಚರ್ಮ, ಉದರ ನಖಿಗಳನ್ನು ಮತ್ತು ತಲೆಯನ್ನು ಸರಕಾರಕ್ಕೆ ಒಪ್ಪಿಸಿದರೆ 50 ರೂಪಾಯಿಗಳ ಬಹುಮಾನ ಸಿಗುತ್ತಿತ್ತು. ನನ್ನ ಮೇಲಧಿಕಾರಿಗಳ ಹುಕುಂ ಮೇರೆ ಅವುಗಳನ್ನು ಸರಕಾರಕ್ಕೊಪ್ಪಿಸಿದೆ. 50 ರೂಪಾಯಿ ಬಹುಮಾನ ನನಗೆ ಹೆಮ್ಮೆಯಾಗಿದ್ದಿತು. ಈ ಹೆಮ್ಮೆಯೇ ನನ್ನನ್ನು ಮತ್ತೂ ಬೇಟೆಯಾಡಲು ಪ್ರೇರೇಪಿಸಿತು.

ಇದರಲ್ಲಿ ಒಂದು ವಿಚಾರವನ್ನು ಹೇಳಬೇಕಾಗಿದೆ. ಹುಲಿಬೇಟೆಯೆಂದರೆ ಎಲ್ಲರೂ ಹೆಮ್ಮೆಪಡುತ್ತಾರೆ. ಬೇರೆ ಯಾವುದೇ ಜಂತುವನ್ನು ಹೊಡೆದರೂ ಹುಲಿ ಬೇಟೆಯಾಡುವುದು ಸುಲಭವಲ್ಲ.

ಹುಲಿ ಬೇಟೆಯನ್ನು ಅನೇಕ ರೀತಿಯಲ್ಲಿ ಕೈಗೊಳ್ಳುತ್ತಾರೆ. ತುಂಬಾ ಜನ ಬೇಟೆಗಾರರು ಸೇರಿ, ಹುಲಿ ಇರುವ ಕಾಡನ್ನು ಹೊಕ್ಕು ನಾಯಿಗಳ ಸಹಾಯದಿಂದ, ರಂಪ ರಗಳೆಯೆಬ್ಬಿಸಿ, ಓಡುವ ಹುಲಿಗೆ ಅಲ್ಲಲ್ಲಿ ಕಾದು ಗುಂಡಿಕ್ಕುವುದು ಒಂದಾದರೆ, ಹುಲಿಬರುವ ದಾರಿಯನ್ನು ಆರಿತು, ಆಡು, ಕುರಿ, ಕೋಣನಂತಹ ಪ್ರಾಣಿಗಳನ್ನು ಅಲ್ಲಿ ಕಟ್ಟಿಹಾಕಿ, ಅಟ್ಟಣಿಗೆಯಲ್ಲಿ ಅಡಗಿ ಕೂತು, ಗುಂಡಿಕ್ಕಿ ಕೊಲ್ಲುವುದು ಮತ್ತೊಂದು ರೀತಿ. ಈ ರೀತಿಯಲ್ಲಿ ಅಡಗಿ ಗುಂಡಿಕ್ಕುವಾಗ ಬೇಟೆಗಾರನು ತುಂಬಾ ಎಚ್ಚರಿಕೆ ವಹಿಸಬೇಕಾಗುತ್ತದೆ. ಹುಲಿಯು ಕಟ್ಟಿಹಾಕಿದ ಪ್ರಾಣಿಯ ಆರಚುವಿಕೆಯಿಂದ ಆಕರ್ಷಕವಾಗಿ ಬಂದರೆ ತುಂಬ ಎಚ್ಚರಿಕೆ ವಹಿಸುತ್ತದೆ.

ರಾತ್ರಿ ಕಾಲದಲ್ಲಿಯೇ ಈ ರೀತಿಯ ಬೇಟೆಯಾಡಲು ಸಾಧ್ಯವಿರುವುದರಿಂದ ಬೇಟೆಗಾರನು ಅನುಭವಿಯಾಗಿರಬೇಕು. ತರಗೆಲೆಗಳ ಮೇಲೆಯೂ ಕೂಡ ಶಬ್ದವಾಗದ್ಹಾಗೆ ನಡೆಯುವ ಚಾತುರ್ಯವಿರುವ ಹುಲಿಯ ಹೆಜ್ಜೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಯನ್ನು ಕೇಳಿಸಿಕೊಳ್ಳುವಷ್ಟು ನಿಪುಣನಿದ್ದರೆ ಈ ತರಹದ ಬೇಟೆಯು ಜಯ ಪ್ರದವಾದೀತು. ಕಟ್ಟಿ ಹಾಕಿದ ಪ್ರಾಣಿಯನ್ನು ಕೊಂದು ಹೊತ್ತು ನಡೆಯುವಾಗಲೂ ಹುಲಿಯು ಯಾವುದೇ ಗದ್ದಲ, ಗಲಾಟೆಗೆ ಅವಕಾಶ ಕೊಡುವುದಿಲ್ಲ. ಆದರೆ, ಈ ರೀತಿಯ ಬೇಟೆಯಲ್ಲಿ ಶೌರ್ಯ, ಸಾಹಸವಿಲ್ಲ ಹಾಗೂ ಇದರಲ್ಲಿ ಹೆಚ್ಚು ಅಪಜಯವೇ ಕಾದಿರುತ್ತದೆ. ಒಂದೇ ಗುಂಡು ಬಡಿದರೂ ಹುಲಿಯು ಕಾಡಿನಲ್ಲಿ ಮಾಯವಾಗುವುದು ಅಥವಾ ಗುಂಡು ಹುಲಿಗೆ ತಗಲದೆ ಅದನ್ನು ಹೆದರಿಸಿದಂತಾಗುವುದು. ರಾತ್ರಿ ಕಾಲದಲ್ಲಿ ತನ್ನ ಗುರಿಯನ್ನು ಸಾಧಿಸುವ ಬೇಟೆಗಾರನು ಇಂತಹ ಸಂದರ್ಭದಲ್ಲಿ ಚುರುಕು ಸ್ವಭಾವಿಯಾಗಿರಬೇಕು.

ಒಮ್ಮೆ ನಮ್ಮ ರೇಂಜಿನ ದಕ್ಷಿಣ ಭಾಗದಲ್ಲಿ ಆಳುಗಳು ಬಿದಿರು ಕಡಿಯುತ್ತಿದ್ದರು. ನಾನು ವಾಸವಿದ್ದ ಬಂಗ್ಲೆಯಿಂದ ಸುಮಾರು ಮೂರು ಮೈಲುಗಳ ದೂರದಲ್ಲಿದ್ದ ಆ ಸ್ಥಳಕ್ಕೆ ಕಾಡು ಮಾರ್ಗವಾಗಿ ಕೋವಿ ಹೊತ್ತು ಹೊರಟಿದ್ದೆ. ಸುಮಾರು ಎರಡು ಮೈಲುಗಳ ದೂರ ನಡೆದಾಗ, ಕಾಡಿನೊಳಗೆ ಹುಲಿಯ ಅಬ್ಬರ ಕೇಳಿತು. ಈ ಅಬ್ಬರಕ್ಕೆ ಹೆದರಿಕೊಂಡವನು, ಮತ್ಯಾವ ದಾರಿಯನ್ನೂ ಕಾಣದೆ, ಹತ್ತಿರದ ಮರವೇರಿ ಕುಳಿತುಕೊಂಡೆನು. ಎಂದೂ ಮರ ಹತ್ತಿ ಅಭ್ಯಾಸವಿಲ್ಲದವನು. ಯಾವ ಚಮತ್ಕಾರದಿಂದ ಆ ಮರವನ್ನು ಹತ್ತಿದೆನೋ ತಿಳಿಯದು. ಸುಮಾರು ಹತ್ತು ಅಡಿ ಎತ್ತರದ ಕೊಂಬೆಯ ಮಧ್ಯೆ ಕುಳಿತವನು ಕಾಡಿನಲ್ಲಿ ನಡೆಯುತ್ತಿರುವ ವಿದ್ಯಮಾನವನ್ನು ಭಯಮಿಶ್ರಿತ ಧೈರ್ಯದೊಡನೆ ವೀಕ್ಷಿಸುತ್ತಿದ್ದೆನು.

ಸುಮಾರು 200 ಗಜಗಳ ದೂರದಲ್ಲಿ ಒಂದು ಕಾಡುಕೋಣವು ಹುಲಿಗೆ ಎದುರಾಗಿ ನಿಂತಿತು. ಹುಲಿಯು ಕೋಣನ ಮೈ, ಕುತ್ತಿಗೆಯನ್ನು ಘಾಸಿ ಮಾಡಿತ್ತು. ರಕ್ತವು ಕೋಡಿ ಹರಿಯುತ್ತಿದ್ದರೂ ಕೋಣವು ಛಲದಿಂದ ಹುಲಿಯನ್ನೆದುರಿಸುವ ಸಿದ್ಧತೆಯಲ್ಲಿತ್ತು. ಕಾಡು ಕೋಣವು ಅಷ್ಟು ಸುಲಭದಲ್ಲಿ ಹುಲಿಗೆ ಬಲಿಯಾಗುವಂತಿರಲಿಲ್ಲ. ಹುಲಿಯು ಕೋಣದ ಸುತ್ತುವರಿದಂತೆಯೇ ಅದು ಹುಲಿಗಿದಿರಾಗಿ ನಿಲ್ಲುತ್ತಿತು. ಘಾಸಿಕೊಂಡ ಕೋಣದ ಮತ್ತೊಂದು ಪಾರ್ಶ್ವದಲ್ಲಿ ದೊಡ್ಡದೊಂದು ಗಾಯವಾಗಿತ್ತು. ಈ ರಕ್ತ ಪಾತದಿಂದ ಮತ್ತು ಗಾಯದ ನೋವಿನಿಂದ ಅದು ಕ್ಷೀಣಿಸಲೆಂದೇ ಹುಲಿಯು ಕೋಣವು ಓಡಿಹೋಗದಂತೆ ಸುತ್ತುತಿರುಗುತ್ತಿತ್ತು.

ಸಂದರ್ಭ ನೋಡಿ ಹುಲಿಯೊಮ್ಮೆ ಕೋಣನ ಬೆನ್ನಿಗೆ ಮಿಂಚಿನಂತೆ ಹಾರಿತು. ಆದರೆ, ಕೋಣವು ಅಷ್ಟೇ ಚುರುಕಿನಿಂದ ತಿರುಗಿ ತನ್ನ ಕೊಂಬು

CC-O. In Public Domain. Digitized by eGangotri

ಗಳಿಂದ ಪ್ರಹರಿಸಿತು. ಹುಲಿಯು ತನ್ನ ಪಂಜದಿಂದ ಆದರ ಮುಖವನ್ನು ಪರಚಿ ಮುಗ್ಗರಿಸುವಂತೆ ಮಾಡಿತು. ಆದರೂ ಕೋಣವು ಚೇತರಿಸಿಕೊಂಡು ಹುಲಿಯನ್ನು ಪ್ರಹರಿಸಿ ಉರುಳಿಸಿತು.

ಹುಲಿಯು ಒಂದು ಮರದ ಬುಡದಲ್ಲಿ ಗರುಗುಟ್ಟುತ್ತಾ ನಿಂತಿತು. ನಾನು ಈ ರುದ್ರಭಯಂಕರ ಕಾದಾಟವನ್ನು ನೋಡುತ್ತಾ ನಡುಗುತ್ತಿದ್ದೆ. ಕೋವಿಯಿದ್ದರೂ ಕೂಡ, ಅದನ್ನೆತ್ತಿ ಗುರಿಯಿಡುವಷ್ಟು ಧೈರ್ಯ ಈ ಕೈಯಲ್ಲಿ ಕಾದಾಟವನ್ನು ಕಂಡ ನನ್ನಲ್ಲಿ ಅಳಿದುಹೋಗಿತ್ತು.

ಕೋಣದ ಶಕ್ತಿ ಗಳಿಗೆ ಗಳಿಗೆಗೂ ಕ್ಷೀಣಿಸುತ್ತಿತ್ತು. ಮೈಮೇಲೆ ಆಗಿದ್ದ ಗಾಯಗಳಿಂದ ರಕ್ತವು ಹರಿದು ಆದರ ಮೈಯೆಲ್ಲಾ ರಕ್ತಮಯವಾಗಿತ್ತು. ಕೋಣನ ಎಡಗಾಲಿನ ಮೇಲಿದ್ದ ಗಾಯದಿಂದ ಸುಮಾರು ಒಂದು ಪೌಂಡಿನಷ್ಟು ಮಾಂಸ ಕಿತ್ತುಹೋಗಿತ್ತು.

ಹುಲಿಯು ಕಾಡಿನೊಳಗೆ ನುಗ್ಗಿದಂತೆ ಮಾಡಿ ಕೋಣದ ಮತ್ತೊಂದು ಪಾರ್ಶ್ವದಿಂದ ಹೊರಬಂದು ಕೋಣದ ಹಿಂಬದಿಯಿಂದ ನೆಗೆಯಲು ಪ್ರಯತ್ನಿಸಿತು. ಆದರೆ, ಕೋಣವು ಜೀವದಾಸೆಬಿಟ್ಟು ಮಿಂಚಿನಂತೆ ತಿರುಗಿ ಹುಲಿಯನ್ನು ಹಿಡಿದೋಡುವಂತೆ ಮಾಡಿತು. ಆದರೆ, ಕೋಣದ ಆದೃಷ್ಟವೇ ನೆಟ್ಟಗಿರಲಿಲ್ಲವೆನ್ನಬಹುದು. ಹಾಗೆಯೇ ಮುನ್ನುಗ್ಗಿದಾಗ ಕೋಣವು ಮುಗ್ಗರಿಸಿತು. ಇದನ್ನೇ ಕಾದಿದ್ದ ಹುಲಿಯು ಚೆಂಗನೆ ಹಾರಿ, ಆದರ ಬೆನ್ನೇರಿತು. ಮಿಂಚಿನಂತೆ ಆದರ ಕುತ್ತಿಗೆಗೆ ಬಾಯಿಹಾಕಿ ಆದನ್ನು ಅಲುಗಾಡದಂತೆ ಮಾಡಿತು. ಇದೇ ಸಂದರ್ಭವೆಂದು ಹೆದರುತ್ತಾ ಹುಲಿಗೆ ಗುಂಡಿಕ್ಕಿದೆ. ಗುಂಡು ಆದರ ನೆತ್ತಿಗೆ ಬಡಿಯಿತು. ಜತೆಯಲ್ಲಿ ಮತ್ತೊಂದು ಗುಂಡು ಹಾರಿತು. ಹುಲಿ ಕಚ್ಚಿದ ಬಾಯನ್ನು ಬಿಡದೆ, ವಿಲಿವಿಲಿ ಒದ್ದಾಡಿ, ಅಲ್ಲೇ ಪ್ರಾಣಬಿಟ್ಟಿತು. ಇಷ್ಟು ಸುಲಭದಲ್ಲಿ ಅಂದೇನೋ ಹುಲಿಯನ್ನು ಹೊಡೆದುರುಳಿಸಿದೆ. ಆದರೆ, ಇನ್ನೊಂದು ಸಾರಿ, ಹುಲಿ ಹೊಡೆಯಲು ಬೆಳಗಿನವರೆಗೆ ಕೂತು, ಕಂಗಾಲಾಗಿ ಬಂದ ಅನುಭವ ಕೇಳಿದರೆ ನೀವೂ ನಗುತ್ತೀರೇನೊ !

ನಮ್ಮ ಬಂಗ್ಲೆಗೆ ಹತ್ತಿರವಿದ್ದ ಕುರುಬರ 'ಪಾಡಿ'ಯಿಂದ ಮೂರು ನಾಯಿಗಳು ಕಣ್ಮರೆಯಾಗಿದ್ದವು. ಹುಲಿಯೋ ಚಿರತೆಯೋ ಕಬಳಿಸಿರಬೇಕೆಂದು ಊಹಿಸಿದೆ. ಹುಲಿಯು ನಾಯಿಗಳನ್ನು ಕೊಂದರೂ ಅವನ್ನು ತಿನ್ನುವುದಿಲ್ಲ. ಆದರೆ ಚಿರತೆಗೆ ನಾಯಿಗಳೆಂದರೆ ಬಲು ಇಷ್ಟ. ನಾಯಿಯನ್ನು ಒಮ್ಮೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಕಂಡರೆ ಗಂಟಿಗಟ್ಟಲೆ–ಏಕೆ ದಿವಸಗಳ ಸಮಯ ಹೊಂಚುಹಾಕಿ ಬಲಿ ತೆಗೆದು ಕೊಳ್ಳುತ್ತದೆ. ಚಿರತೆಯು ಒಹು ಪಾಲು ರಾತ್ರಿಯೇ ಬೇಟೆಯಾಡುತ್ತದೆ. ಅದರ ಸೂಕ್ಷ್ಮರೀತಿಯ ನಡಿಗೆ ಹೆಸರಾದದ್ದು. ಒಣ ಎಲೆ ಕಡೆಗಳ ಮೇಲೂ ಶಬ್ದವಾಗದಂತೆ ನಡೆಯುವ ಶಕ್ತಿ ಅದಕ್ಕಿದೆ. ಅದಕ್ಕೆ ಬಿಸಿರಕ್ತ ಮಾಂಸಗಳೇ ಬೇಕು. ಮನುಷ್ಯ ಸಾಕಿದ ಎಲ್ಲಾ ಪ್ರಾಣಿಗಳೂ ಅದಕ್ಕೆ ಆಹುತಿಯಾಗುತ್ತವೆ.

ಕುರುಬರ 'ಪಾಡಿ'ಯಿಂದ ಮೂರು ನಾಯಿಗಳು ಕಾಣದಾದಾಗ, ನಮ್ಮ ಮೇಷ್ಟ್ರಿಯು ಬಂದು, ಹುಲಿಯೇ ನಾಯಿಗಳನ್ನು ಹೊತ್ತಿದೆಯೆಂದನು. ನಾನು ಹೋಗಿ ಕೂಲಂಕಷವಾಗಿ ಪರೀಕ್ಷಿಸಿದಾಗ, ಹೆಜ್ಜೆಗಳು ಚಿರತೆಯದಾಗಿತ್ತು. ಕೊಂದ ನಾಯಿಯನ್ನು ಒಂದು ಪೊದೆಯೊಳಗೆ ಅರ್ಧ ತಿಂದು, ಅದಲ್ಲೋ ಮರೆಯಾಗಿರುವ ಚಿರತೆಯನ್ನು ರಾತ್ರಿ ಗುಂಡಿಕ್ಕಲು ನಾನು ಮತ್ತು ಒಬ್ಬ ಕುರುಬನು ನಿಶ್ಚಯಿಸಿ, ರಾತ್ರಿಯಾಗುವ ಮೊದಲೇ ಕಟ್ಟಿದ್ದ ಆಟ್ಟಣಿಗೆಯಲ್ಲಿ ಕೂತೆವು. ನನ್ನ ಜತೆಯಲ್ಲಿದ್ದ ಕುರುಬನು ಗಳಿಗೆಗೊಮ್ಮೆ ಕೆಮ್ಮುತ್ತಿದ್ದುದರಿಂದ ಆತನನ್ನು ಆಟ್ಟಣಿಗೆಯಿಂದಿಳಿಸಿ, ಕಾಡಿಗೆ ಕಳುಹಿಸಿ, ನಾನೊಬ್ಬನೇ ಚಿರತೆಯ ಬರವನ್ನು ಕಾದು ಕುಳಿತೆ. ಮಧ್ಯರಾತ್ರಿಯವರೆಗೆ ಕೂತರೂ ಚಿರತೆಯು ಆ ದಿಕ್ಕಿನಲ್ಲಿ ಬರಲೇ ಇಲ್ಲ.

ಹೀಗೆ ಆಟ್ಟಣಿಗೆಯಲ್ಲಿ ಕೂತು, ಸುತ್ತಲೂ ಹರಡಿರುವ ಬೆಳದಿಂಗಳ ಬೆಳಕನ್ನು ನೋಡಲು ಅದಷ್ಟು ಚಂದ. ದಿಗಂತಕ್ಕೇರಿದ ಮರಗಳ ಕಪ್ಪು ಛಾಯೆಗಳಲ್ಲಿ ಅದೆಂತೆಂತಹ ಕಲಾಕೃತಿಗಳನ್ನು ಗುರುತಿಸಬಹುದು? ಬೆಳದಿಂಗಳು ಮತ್ತು ಕತ್ತಲೆಯ ನೆರಳನಲ್ಲಿ ಸಮ್ಮಿಶ್ರವಾಗಿ ಕಾಣುವ ವಿವಿಧ ಆಕೃತಿಗಳನ್ನು ಯಾವುದೇ ಮಹಾ ಕಲಾವಿದನೂ ಕೂಡ ಚಿತ್ರಿಸಲಾಗದ ಮಹಾಕೃತಿಗಳೆಂದು ಅರಿವಾಗುವುದು.

ಸುಮಾರು ಮಧ್ಯ ರಾತ್ರಿ ಕಳೆದಿರಬಹುದು. ಚಂದ್ರನು ಎತ್ತರ ಮರಗಳ ಹಿಂದೆ ಅಡಗಿಹೋದದ್ದರಿಂದ ಕಗ್ಗತ್ತಲು ಎಲ್ಲೆಲ್ಲೂ ಪಸರಿಸಿತ್ತು. ನಾನು ಕೂತಲ್ಲಿಂದ ಕೆಳಗೆ ಯಾವುದೇ ವಸ್ತು ಗೋಚರಿಸುತ್ತಿರಲಿಲ್ಲ.

ಅಂತಹ ಅಂಧಕಾರದಲ್ಲಿ ಮನುಷ್ಯ ಅದೆಷ್ಟು ಚಿಕ್ಕವನೆಂದು ವೇದ್ಯವಾಗುತ್ತದೆ. ಸುತ್ತಲೂ ಪಸರಿಸಿರುವ ಕತ್ತಲಲ್ಲಿ ಕರಗಿ ಹೋದ ನಾನು ಈ ಪ್ರಪಂಚದಲ್ಲಿ ಅದೆಷ್ಟು ಸಣ್ಣವನೆನಿಸಿತು. ಆಕಾಶದಲ್ಲಿ ಅಸಂಖ್ಯಾತ ನಕ್ಷತ್ರಗಳು, ಸುತ್ತುವರಿದ ವಿಶಾಲ ಗಾಢಾಂಧತೆಯ ಮುಸುಕು, ಕೆಳಗಡೆ ಯಾವುದೇ ಪರಿವೆಯಿಲ್ಲದೆ ಕಾಲವನ್ನು ವಿಹಾರಿಸಲು ಓಡುತ್ತಿರುವ ರುಳಿ

Sri Vidyabharathi Book Centre, Sringeri

CC-O. In Public Domain. Digitized by eGangotri

ರಘುಳ ನದಿಯ ನೀರು, ಇದೆಲ್ಲಾ ಏನು ? ಜಗನ್ನಿಯಾಮಕನ ಈ ಆಟಕ್ಕೆ ಮೊದಲೆಲ್ಲಿ ? ಕೊನೆಯೆಲ್ಲಿ ?– ಹೀಗೆ ಚಿಂತಿಸುತ್ತಾ ಆಟ್ಪಣಿಗೆಯಲ್ಲಿ ಕುಳಿತಿದ್ದೆ.

ಮರದ ಕೆಳಗೆ ಆದೇನೋ ಶಬ್ದವಾದಂತಾಯಿತು. ನಾನು ಕೂತ ಮರದ ಬುಡದಲ್ಲೇ ಚರಪರ ಶಬ್ದವಾಗತೊಡಗಿತು. ಯಾವುದೋ ಲೋಕದಲ್ಲಿ ವಿಹರಿಸುತ್ತಿದ್ದ ನಾನು ಈ ಶಬ್ದದಿಂದ ನಿಜಬುದ್ಧಿಗೆ ಬಂದೆ. ಈ ಶಬ್ದದಿಂದ ಮೈ ಜುಮ್ಮೆಂದಿತು. ಹೌದು ! ಚಿರತೆಗಳು ಮರ ಹತ್ತುತ್ತವೆ. ನನ್ನ ಇರವನ್ನು ಕಂಡು, ನನ್ನನ್ನು ಕಬಳಿಸಲು ಆದು ಪ್ರಯತ್ನಿಸುತ್ತಿರಬಹುದೇ ?

ನನ್ನ ಕೈಯಲ್ಲಿದ್ದ ಕೋವಿಯನ್ನು ಸಿದ್ಧಪಡಿಸಿ ಮರದ ಬುಡವನ್ನೇ ದೃಷ್ಟಿಸಿ ನೋಡಿದೆ. ಮರದ ಬುಡದಲ್ಲಿ ಯಾವುದೋ ಸಣ್ಣ ಪ್ರಾಣಿ ಗೆಜ್ಜಲನ್ನು ತಿನ್ನುತ್ತಿತ್ತು. ಮಂದ ಬೆಳಕಿನಲ್ಲಿ ಆದು ಕಾಡು ಬೆಕ್ಕೆಂದು ಗುರ್ತಿಸಿದೆ. ಕಾಡು ಬೆಕ್ಕೆಂದು ಆರಿವಾದ ಮೇಲೆ, ನಾನು ನನ್ನಲ್ಲೇ ನಕ್ಕೆ. ಮನುಷ್ಯನು ಆದೆಷ್ಟು ಪುಕ್ಕಲು ಪ್ರಾಣಿ, ಕೇವಲ ಕತ್ತಲಲ್ಲಾದ ಶಬ್ದಕ್ಕೆ ಇಷ್ಟು ಹೆದರಿದೆನಲ್ಲಾ ! ಮಂದ ಬೆಳಕಿನಲ್ಲಿ ಕಾಡುಬೆಕ್ಕನ್ನು ಕಾಣದಿದ್ದಿದ್ದರೆ ! ಮಂದ ಬೆಳಕಿನಲ್ಲಿ ವಾಸ್ತವಿಕತೆಯನ್ನರಿತ ನನಗೆ ವಿಚಾರಗಳನ್ನು ಸತ್ಯದ ಬೆಳಕಿನಲ್ಲಿ ವಿಮರ್ಶಿಸಿದರೆ, ಲೋಕದಲ್ಲಿ ನ್ಯಾಯಾನ್ಯಾಯ, ಸತ್ಯಾಸತ್ಯತೆ ಎಲ್ಲಾ ಬಯಲಾಗದೇ ? ಇಲಿ ಹೋದಲ್ಲಿ, ಮೂಡಾಂಧಕಾರದಲ್ಲಿ ಹುಲಿಯಾಗಿ ಕಾಣಿಸುವುದು ಆದೆಷ್ಟು ಸತ್ಯ ?

ಯಾವುದೇ ವಸ್ತುಗಳು ಕಾಣದ ಕತ್ತಲಲ್ಲಿ ಬೆಳಗಾಗುವವರೆಗೆ ನಾನು ಮರದ ಮೇಲೆ ಕೂತೆ. ಆದರೆ, ಚಿರತೆ ಹತ್ತಿರ ಸುಳಿಯಲೇ ಇಲ್ಲ. ಮರದ ಅಷ್ಟು ದೂರದಲ್ಲಿ ಅರ್ಧ ತಿಂದು ಹಾಕಿದ ನಾಯಿಯ ದೇಹ ಅನಾಥವಾಗಿ ಬಿದ್ದಿತ್ತು. ರಾತ್ರಿಯಿಡೀ ನಿದ್ದೆಗೆಟ್ಟಿದ್ದರಿಂದ ನಾನು ಬೆಳಗಾಗುತ್ತಲೇ ಮನೆಯ ಕಡೆ ನಡೆದೆ.

ಮನೆಗೆ ಬಂದಾಗ ಪಾಡಿಯಿಂದ ಬಂದ ಒಬ್ಬ ಕುರುಬ, ಆತನು ಸಾಕಿದ ಕರುವನ್ನು ಹುಲಿಯೋ, ಚಿರತೆಯೋ ಎಳೆದೊಯ್ದಿದೆ ಎಂದು ತಿಳಿಸಿದ. ಹೌದು, ಚಿರತೆಗಳು ತಾವು ತಿಂದುಬಿಟ್ಟ ಕೊಳೆತ ಮಾಂಸ ತಿನ್ನುವುದು ಕಡಿಮೆ. ಬಿಸಿರಕ್ತ ಮತ್ತು ಬಿಸಿಮಾಂಸವನ್ನು ಆಶಿಸುವ ಈ ಪ್ರಾಣಿ, ಎಲ್ಲೂ ಏನೂ

CC-O. In Public Domain. Digitized by eGangotri

ದೊರಕದಿದ್ದರೆ ಮಾತ್ರ ತಿಂದುಳಿದ ಮಾಂಸಕ್ಕಾಗಿ ಬರುತ್ತದೆಂದು ತಿಳಿದಿತ್ತು. ಕುರುಬರ ವಸತಿಯಲ್ಲಿ ನೂರಿನ್ನೂರು ಜನರು ವಾಸವಿದ್ದು, ಅವರು ನಾಯಿ, ಕುರಿ, ಕೋಳಿ, ಹಂದಿ ಸಾಕಿದ್ದರು. ಇಂತಹ, ಅನುಕೂಲವಾದ ಆಹಾರ ಸಿಕ್ಕುವ ಸ್ಥಳವಿರುವಾಗ, ಮಿಕ್ಕಿ ಉಳಿದ ಮಾಂಸವನ್ನು ಚಿರತೆ ತಿನ್ನಲಿಚ್ಚಿಸುವುದಿಲ್ಲವೆನಿಸಿತು.

ಆದುದರಿಂದ ಬೇರೊಂದು ಉಪಾಯ ಹುಡುಕಲೇ ಬೇಕಾಯಿತು. ಅಂದು ಪಾಡಿಯಲ್ಲಿದ್ದ ಒಂದು ಅನಾಥ ನಾಯಿಯನ್ನು, ಕರುವಿನ ಅರ್ಧ ದೇಹ ಬಿದ್ದ ಸ್ಥಳದ ಹತ್ತಿರ ಮರಕ್ಕೆ ಕಟ್ಟುವಂತೆ ಹೇಳಿದೆ. ನಾಯಿಯನ್ನು ಅಲ್ಲಿ ಕಟ್ಟಿದ ಕೂಡಲೇ ನಾನು ಮರವೇರಿ ಅಡಗಿಕೂತೆ. ನಾಯಿಗೆ ನನ್ನ ಇರವು ತಿಳಿದಿತ್ತು. ಆದುದರಿಂದ ತನ್ನ ಕಟ್ಟನ್ನು ಬಿಡಿಸಿಕೊಳ್ಳಲು ಅತ್ತಿತ್ತ ಜಿಗಿದು ಹೊ...ಹೊ... ಎಂದು ಅಳುತ್ತಿತ್ತು. ನಿನ್ನೆ ಕರುವನ್ನು ಹಿಡಿದು ತಿಂದ ಚಿರತೆ, ಹೆಚ್ಚು ದೂರ ಹೋಗಿರಲಿಕ್ಕಿಲ್ಲವೆಂಬ ನಂಬಿಕೆಯಿಂದ ಈ ವ್ಯವಸ್ಥೆ ಮಾಡಿದ್ದೆ. ನಾಯಿಯ ರಂಪ ರಗಳೆಯಿಂದ ಆಕರ್ಷಿತವಾದ ಚಿರತೆ ಬಂದೇ ಬರುವುದೆಂಬ ಆಸೆಯಿಂದ ಕುಳಿತೆ.

ನಾನು ಮರದ ಮೇಲೆ ಕೂತು ಒಂದು ಗಂಟೆಯಾಗಿರಬಹುದು. ನಾಯಿಯು ವಿಕಾರಧ್ವನಿ ಮಾಡಿ, ಜೀವಭಯದಿಂದ ಹಾರಾಡಹತ್ತಿತು. ನಾಯಿಗೆ ಚಿರತೆಯ ವಾಸನೆ ಸಿಕ್ಕಿತೋ ಅಥವಾ ಅದನ್ನು ಕಂಡಿತೋ ತಿಳಿಯದು. ಚಿರತೆ ಬಂದಿರಬಹುದೆಂದು ಸಜ್ಜಾದೆ. ಚಿರತೆಯು ಸುತ್ತುವರಿದು ಕೊಂಡುಬಂದು ನಾನು ಕುಳಿತ ಮರದ ಕೆಲವೇ ಗಜಗಳಲ್ಲಿ ಪ್ರತ್ಯಕ್ಷವಾಯಿತು. ನಾಯಿಯನ್ನು ಕಟ್ಟಿದ್ದರಿಂದ ಇದು ಮನುಷ್ಯನ ಕುಹಕವಿರಬಹುದೇ ಎಂದು ಸಂಶಯ ಮೂಡಿರಬೇಕು. ನಾಯಿಯನ್ನೇ ದಿಟ್ಟಿಸಿ ನೋಡುತ್ತಿದ್ದ ಚಿರತೆಯು ಒಂದೊಂದೇ ಹೆಜ್ಜೆಯನ್ನು ಮುಂದಿಟ್ಟು ಮುಂದುವರಿಯುತ್ತಿದ್ದಿತು. ನಾನು ಹೆಚ್ಚು ವಿಳಂಬ ಮಾಡದೆ ಚಿರತೆಯ ಎದೆಗುಂಡಿಗೆಗೆ ಗುಂಡಿಕ್ಕಿದೆ. ಚಿರತೆಯು ಆಳೆತ್ತರ ಹಾರಿ, ನಾಯಿಯ ಮೇಲೆ ಬಿದ್ದಿತು. ನಾಯಿಯನ್ನು ಕಚ್ಚಿ ಹಿಡಿದು ಜಾಲಾಡಿ, ಚಿರತೆಯು ವಿಲವಿಲನೆ ಒದ್ದಾಡಿತು. ಗುಂಡು ಒಳ್ಳೆಯ ಆಯ ಕಟ್ಟಿಗೆ ಬಿದ್ದುದರಿಂದ ಚಿರತೆ ಒಂದು ಗಳಿಗೆಯಲ್ಲಿ ಅಸುನೀಗಿತು. ಆದರೆ, ನಾನೆಂತಹ ಅಚಾತುರ್ಯ ಮಾಡಿದೆನೆಂದು ಆಮೇಲೆ ತಿಳಿಯಿತು. ಚಿರತೆಯು ಬಂದು ತಲೆ ತೋರಿಸಿದಾಗಲೇ ಗುಂಡಿಕ್ಕಿದ್ದರೆ ಪಾಪದ ನಾಯಿಯನ್ನುಳಿಸ ಬಹುದಿತ್ತು. ಚಿರತೆ, ಹುಲಿ ಇವುಗಳೆಲ್ಲಾ ಗುಂಡು ತಾಗಿದಾಗ ಮುಖ ಮಾಡಿ

Sri Vidyabharathi Book Centre, Sringeri

CC-O. In Public Domain. Digitized by eGangotri

ನಿಂತ ಕಡೆಗೇ ಜಿಗಿಯುವುದೆಂದು ತಿಳಿದಿದ್ದರೂ ನಾನೆಂತಹ ಅಚಾತುರ್ಯ ಮಾಡಿದೆನೆನಿಸಿತು.

ಗುಂಡಾದ ಕೂಡಲೇ ಶಬ್ದ ಕೇಳಿದ ಕುರುಬರು ದೂರ ನಿಂತು ಕೂಗಿದರು. ಚಿರತೆಯ ಕತೆ ಮುಗಿದಿದೆಯೆಂದು ಹೇಳಿದ ಮೇಲೆ, ಅವರು ನನ್ನನ್ನು ಮರದಿಂದಿಳಿಸಲು ಸಹಕರಿಸಿ, ಬಿದ್ದಿದ್ದ ಚಿರತೆಯನ್ನು ಹೊತ್ತು ತಮ್ಮ ವಸತಿಯತ್ತ ನಡೆದರು.

ಆರಣ್ಯ ಪ್ರದೇಶದಲ್ಲಿ ಜೀವಿಸುವವನಿಗೆ ಖಂಡಿತಾ ಎಂಟೆದೆ ಬೇಕು. ಈಗಿನ ಕಾಲದಂತೆ ಜನಸಂಖ್ಯೆಯೂ ಹೆಚ್ಚಿರಲಿಲ್ಲವಾದ್ದರಿಂದ ಅರಣ್ಯಗಳಲ್ಲಿ ಕ್ರೂರ ಜಂತುಗಳು ಯಥೇಚ್ಛವಾಗಿ ಬೆಳೆದಿದ್ದವು. ಅಂದಿನ ಕಾಡುಗಳೆಲ್ಲಾ ಇಂದು ನಾಡಾಗಿ, ಕಾಫಿ, ಕಿತ್ತಳೆಯ ತೋಟಗಳಾಗಿರುವುದರಿಂದ, ಇಂದಿನವರಿಗೆ ಹಿಂದಿನ ವಿಚಾರ ಹೇಳಿದರೆ ಆಶ್ಚರ್ಯವಾದೀತು.

ನಮ್ಮ ರೇಂಜಿನಲ್ಲಿ ಯಥೇಚ್ಛ ಸಾಗುವಾನಿ ಮರಗಳಿದ್ದು, ಅದರಲ್ಲಿ ಬೆಳೆದಮರಗಳನ್ನು ಕಡಿದು ಸಾಗಿಸುವ ಮತ್ತು ಅದರೊತ್ತಿನಲ್ಲೇ ಹೊಸಗಿಡಗಳನ್ನು ನೆಡುವ ಕಾರ್ಯಕ್ರಮ ನಡೆದಿತ್ತು. ಮರಕಡಿದು ಸಾಗಿಸುವಲ್ಲಿ ಆನೆಗಳ ಸಹಾಯ ಬಳಸಲಾಗಿತ್ತು. ಮತ್ತೊಂದೆಡೆ ಸಾಗುವಾನಿ ಗಿಡಗಳನ್ನು ನೆಡಲು ಕಾಡುಕಡಿಯಲಾಗುತ್ತಿತ್ತು. ಇದನ್ನು ನೋಡಿಕೊಳ್ಳಲು ವಾರಕ್ಕೊಂದು ಸಾರಿ, ನಾನು ಮತ್ತು ನನ್ನ ಗಾರ್ಡ್ ಆಲ್ಲಿಗೆ ಭೇಟಿಯಿತ್ತು, ಅವರ ವಾರದ ಸಂಬಳ ಕೊಟ್ಟು ಬರುತ್ತಿದ್ದೆವು.

ಒಮ್ಮೆ ಹೀಗೆ ಹೋಗುತ್ತಿದ್ದಾಗ ಒಂದು ಅನಿರೀಕ್ಷಿತ, ಅಪರೂಪದ ದೃಶ್ಯ ನಮಗೆ ಕಂಡಿತು. ಒಂದು ದೊಡ್ಡ ಹೆಬ್ಬಾವು ಒಂದು ಚಿರತೆಯೊಡನೆ ಕಾಳಗ ಮಾಡಿ, ಕಡೆಗೆ ಎರಡೂ ಸುಸ್ತಾಗಿ ಬಿದ್ದಿದ್ದವು. ರಾತ್ರಿಯ ಕಾಲದಲ್ಲಿ ಬೇಟೆಯಾಡಲು ಹೊರಟ ಎರಡು ಜಂತುಗಳು ಒಂದಕ್ಕೊಂದು ಎದುರಾಗಿರಬೇಕು. ಅಥವಾ ಹೆಬ್ಬಾವು ಹೊಂಚು ಹಾಕಿಕೊಂಡಿದ್ದುದನ್ನು ತಿಳಿಯದೆ ಚಿರತೆ ಬಂದು ಅದರ ತೆಕ್ಕೆಗೆ ಸಿಕ್ಕಿ ಬಿದ್ದಿರಬೇಕು.

ಹೆಬ್ಬಾವು ರಾತ್ರಿ ಕಾಲದಲ್ಲಿ ಬೇಟೆಯಾಡುತ್ತದೆ. ಮರದ ಮೇಲೇರಿ, ಅಡ್ಡ ಬೆಳೆದಿರುವ ಕೊಂಬೆಗಳ ಮೇಲೆ, ಪ್ರಾಣಿಗಳು ಬರುವ ದಾರಿಯನ್ನು ಗಮನಿಸಿ, ಮಲಗಿಕೊಂಡಿರುತ್ತದೆ. ರಾತ್ರಿ ಕಾಲದಲ್ಲಿ ಅದರ ಕಣ್ಣು ತುಂಬಾ ಚುರುಕಾಗಿರುತ್ತದೆ. ಆ ದಾರಿಗಾಗಿ ಯಾವುದೇ ಪ್ರಾಣಿ ಬಂದರೂ ಒಮ್ಮೆಗೇ ಜಾರಿ, ಅದರ ಮೇಲೆ ಬಿದ್ದು ತನ್ನ ತೆಕ್ಕೆಯಲ್ಲಿ ಮುದುಡಿ ಹಿಡಿಯುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಅದರ ದೇಹದಲ್ಲಿರುವ ಎಲ್ಲಾ ಎಲುಬುಗಳು ಪುಡಿಯಾದ ನಂತರ ಅದನ್ನು ನುಂಗುತ್ತದೆ. ಪ್ರಾಣಿ ಚಿಕ್ಕದಾದರೆ ಬಾಯಲ್ಲಿ ತನ್ನ ಕೋರೆಗಳಿಂದ ಕಚ್ಚಿ ಹಿಡಿದು ಜೀವಂತ ನುಂಗುತ್ತದೆ. ಹೆಬ್ಬಾವಿನ ಹಿಡಿತಕ್ಕೆ ಒಮ್ಮೆ ಯಾವುದೇ ಪ್ರಾಣಿ ಸಿಕ್ಕಿದರೂ ಅದಕ್ಕೆ ಉಳಿಗಾಲವೇ ಇಲ್ಲವೆನ್ನಬಹುದು.

ಹಾಗೆಯೇ ಈ ಚಿರತೆಗೆ ಈ ಹೆಬ್ಬಾವಿನ ಹಿಡಿತದಿಂದ ಬಿಡಿಸಿಕೊಳ್ಳಲು ಸಾಧ್ಯವಾಗದೆ, ಶಕ್ತಿಮೀರಿ ಹೋರಾಡಿದ್ದು ಆ ಪರಿಸರದಲ್ಲಿ ವ್ಯಕ್ತವಾಗುತ್ತಿತ್ತು. ಸುತ್ತುಮುತ್ತು ಬೆಳೆದಿದ್ದ ಗಿಡಗಂಟಿಗಳು ಪುಡಿಪುಡಿಯಾಗಿ ನಾಮಾವಶೇಷವಾಗಿದ್ದವು. ನೆಲದ ಮಣ್ಣಿಂದ ಎರಡೂ ಕೆಂಪು ಬಣ್ಣಕ್ಕೆ ತಿರುಗಿದ್ದವು. ಹೋರಾಟ ರಾತ್ರಿಯಿಂದಲೇ ನಡೆದಿದೆಯೆನ್ನಲು ಅವೆರಡೂ ಸುಸ್ತಾಗಿ ಬಿದ್ದಿದ್ದವು. ಚಿರತೆಯು ತನ್ನ ನಖಿಗಳಿಂದ ಹರಿತವಾದ ಹಲ್ಲುಗಳಿಂದ ಹಾವಿನ ಶರೀರವನ್ನು ಸಿಗಿದಿತ್ತು. ಹಾವಿನ ತಲೆಯು ಒಂದೆರಡು ಅಡಿಗಳ ದೂರದಲ್ಲಿ ವಿಶ್ರಮಿಸಿತ್ತು ಆದರೆ ಹಾವಿನ ನಡುಭಾಗವು ಚಿರತೆಯನ್ನು ಎರಡು ಸುತ್ತು ಸುತ್ತಿ, ಚಿರತೆಯನ್ನು ಮಿಸುಕಾಡದಂತೆ ಮಾಡಿತ್ತು.

ನಾನು ಮತ್ತು ನನ್ನ ಗಾರ್ಡಿಗೆ ಈ ಅಪೂರ್ವ ದೃಶ್ಯದಿಂದ ಮುಂದೇನು ಮಾಡಬೇಕೆಂಬುದೇ ಗೊತ್ತಾಗಲಿಲ್ಲ. ನಮ್ಮ ಕೈಯಲ್ಲಿ ಕೋವಿಯಿತ್ತಾದರೂ ಅವುಗಳನ್ನು ಕೊಲ್ಲಲು ಮನಸ್ಸಾಗಲಿಲ್ಲ. ಹಾಗೆಯೇ ಅವುಗಳ ಪಾಡಿಗೆ ಅವನ್ನು ಬಿಟ್ಟು ನಮ್ಮ ಕಾರ್ಯಾರ್ಥ ಹೋದೆವು.

ನಮ್ಮ ಕೆಲಸ ತೀರಿಸಿ ಅದೇ ದಾರಿಯಲ್ಲಿ ಬಂದಾಗ, ಚಿರತೆ ಉಸಿರು ಕಟ್ಟಿ ಸತ್ತಿತ್ತು. ಆದರೆ ಹಾವು ಅದನ್ನು ನುಂಗುವ ಪ್ರಯತ್ನಕ್ಕೆ ಹೋಗಿರಲಿಲ್ಲ ಕಾರಣ, ಅದರ ದೇಹದಲ್ಲಾಗಿದ್ದ ಗಾಯಗಳಿಗೆ ಇರುವೆಗಳು ಮುತ್ತಿಕಿತ್ತು ತಿನ್ನುತ್ತಿದ್ದವು. ಅದರ ತಲೆ ಮಾತ್ರ ಅತ್ತಿತ್ತ ಹೊರಳಾಡುತ್ತಿತ್ತೇ ಹೊರತು ದೇಹದಲ್ಲಿ ಚಲನೆಯಿರಲಿಲ್ಲ. ಕಾರಣ ಅದರ ಎಲುಬು ಚಿರತೆಯ ಬಾಯಿಗೆ ಸಿಕ್ಕಿ ಮುರಿದಿದ್ದಿರಬೇಕು.

ತನ್ನ ಆಹಾರಕ್ಕಾಗಿ ಒಂದನ್ನೊಂದು ಎದುರಿಸಿ, ತಮ್ಮ ಅವಸಾನವನ್ನೇ ತಂದುಕೊಂಡ ಎರಡು ಪ್ರಾಣಿಗಳನ್ನು ಕಂಡ ನನಗೆ ಕಾಡಿನ ಕ್ರೌರ್ಯದ ಅನುಭವವಾಯಿತು. ತನ್ನ ಆಹಾರಕ್ಕಾಗಿ ಜೀವನ್ಮರಣದ ಹೋರಾಟವನ್ನೇ ಮಾಡಿ ಬದುಕುವ ಈ ಪ್ರಾಣಿಕುಲದಲ್ಲಿ ಶಕ್ತಿಗೆ ಅಗ್ರಸ್ಥಾನ. ಒಂದನ್ನೊಂದು ಕಬಳಿಸಿ, ತನ್ನ ಜೀವನ ಹೊರೆಯುವ ಈ ಪ್ರಾಣಿಗುಣ, ಮನುಷ್ಯನಲ್ಲಿಯೂ ಬಂದಿದ್ದರೆ ?

Sri Vidyabharathi Book Centre, Sringeri

CC-O. In Public Domain. Digitized by eGangotri

ಮನುಷ್ಯ ತನ್ನ ಬುದ್ಧಿಯನ್ನುಪಯೋಗಿಸಿ, ತಂತ್ರ ಮಾಡಿ ಒಬ್ಬನ ನ್ನೊಬ್ಬ ನುಂಗುತ್ತಿದ್ದರೂ, ನನಗೇಕೊ ಪ್ರಾಣಿಗಳ ವರ್ತನೆಯೇ ಆತನಿಗಿಂತ ಮೇಲೆಂದು ಭಾಸವಾಯಿತು. ತನ್ನ ಆಸೆ, ಅಭಿಲಾಷೆಗಳನ್ನೀಡೇರಿಸಲು ಸಭ್ಯತೆಯ ಸೋಗು ಹಾಕಿ, ಮೋಸ, ದಗಾ, ದಗಲುಬಾಜಿತನದಲ್ಲಿ ಹೊಟ್ಟೆ ಹೊರೆಯುವ ಮನುಷ್ಯ ಈ ಪ್ರಾಣಿಗಿಂತ ಹೇಗೆ ಮೇಲು? ತನ್ನ ಕೈಗೆಟುಕಿದ್ದ ನ್ನೆಲ್ಲಾ ತನ್ನದಾಗಿ ಮಾಡಿಕೊಳ್ಳಲು ಮನುಷ್ಯ ಮಾಡುವ ಕುತಂತ್ರಗಳೆಷ್ಟು ? ಆತನಿಗೆ ಹೊಟ್ಟೆಗೆ ಸಿಕ್ಕಿದರೆ ಸಾಲದು, ಬಟ್ಟೆ ಬೇಕು, ವಸತಿ ಬೇಕು, ಆಸ್ತಿ ಬೇಕು. ಏಕೆ–ಇಡೀ ಸಾಮ್ರಾಜ್ಯವೇ ದೊರಕಿದರೂ ಆತನ ಆಸೆ ಹಿಂಗದು. ಆದರೆ ಪ್ರಾಣಿಗಳು ಹಾಗಲ್ಲವಲ್ಲಾ ! ನಾಳೆಯ ಯೋಚನೆ ಅವಕ್ಕಿಲ್ಲ. ಇಂದು ಹೊಟ್ಟೆ ತುಂಬುವುದೊಂದೇ ಅವಕ್ಕೆ ಚಿಂತೆ. ಹೊಟ್ಟೆ ತುಂಬಿದ ನಂತರ ನಾಳೆಗೆಂದು ಬಚ್ಚಿಡುವ ಸ್ವಾರ್ಥ ಬುದ್ಧಿಯೂ ಅವಕ್ಕಿಲ್ಲ. ಅಂದ ಮೇಲೆ ಮನುಷ್ಯ, ಪ್ರಾಣಿಗಳಿಗಿಂತ ಯಾವ ಬಗೆಯಲ್ಲಿ ಮೇಲು ?

ಹೀಗೆ ಚಿಂತನೆ ಮಾಡುತ್ತಾ ನಿಂತಾಗ ನನ್ನ ಗಾರ್ಡು "ಚಿರತೆಯೇನೊ ಸತ್ತಿದೆ. ಹಾವನ್ನು ಕೊಂದರೆ ಅವುಗಳ ಚರ್ಮ ದಕ್ಕುವುದಲ್ಲಾ" ಎಂದ. ನಾನು ಯಾವ ವಿಚಾರದಲ್ಲಿ ಯೋಚಿಸುತ್ತಿದ್ದೆನೋ ಅದನ್ನೇ ಆತ ಬಾಯ್ಬಿಟ್ಟು ತನ್ನ ಸ್ವಾರ್ಥ ಬುದ್ಧಿಯನ್ನು ತೋರಿದ್ದ. ಹಾವಿನ ತಲೆಗೆ ಗುಂಡಿಕ್ಕಿ ಕೊಂದು ಸಾಗುವಾನಿ ಮರಗಳನ್ನು ಕಡಿಯುತ್ತಿದ್ದಲ್ಲಿಗೆ ಹೋಗಿ, ಆಳುಗಳಿಂದ ಅವು ಗಳನ್ನು ಹೊರಿಸಿ ಬಂಗ್ಲೆಗೆ ತಂದು ಅವುಗಳ ಚರ್ಮ ಸುಲಿದು ನಮ್ಮ ಸ್ವಾರ್ಥ ಬುದ್ಧಿ ಪ್ರದರ್ಶಿಸಿಕೊಂಡೆವು.

ಅರಣ್ಯ ಖಾತೆಯಲ್ಲಿದ್ದು ನನಗೆ ಹೊರ ಪ್ರಪಂಚದ ಜ್ಞಾನವೇ ಇರಲಿಲ್ಲ. ಕಾಡು, ಕಾಡುಪ್ರಾಣಿಗಳು ಮತ್ತು ಕಾಡು ಕುರುಬರು ನನ್ನ ಸಂಗಾತಿಗಳಾಗಿ ದ್ದರು. ಮೊದಲೇ ಎಸ್.ಎಸ್.ಎಲ್.ಸಿ. ನಾಪಾಸು. ಆದರಿಂದಲೇ ಮನೆ ಬಿಟ್ಟು ಬಂದು ಈ ಸ್ಥಾನಕ್ಕೆ ತಲುಪಿದ್ದು. ಸುಮಾರು ಹದಿನೈದು ವರ್ಷಗಳ ಅರಣ್ಯದ ಸಹವಾಸ. ಅನೇಕ ವಿಶಿಷ್ಟ ಅನುಭವಗಳನ್ನು ಕೊಟ್ಟಿದೆ. ಇಂದೂ ಈ ಅನುಭವಗಳನ್ನು ಅಂದು ನಡೆದ ಘಟನೆಗಳನ್ನು ಹೇಳಿದರೆ ಯಾರೂ ನಂಬ ಲಾಗುವುದಿಲ್ಲ. ಕಾರಣ, ಇಂದಿನ ದಿನಗಳೇ ಬೇರೆ, ಅಂದಿನ ವಾತಾವರಣವೇ ಬೇರೆ. ಇಂದು ಆಧುನಿಕತೆಯ ತುಟ್ಟತುದಿಗೇರಿ ಮಾನವ ದಾನವನಾಗಿ ದ್ದಾನೆ. ಆದರೆ ಅಂದು ಮಾನವನಿಗೆ ಪ್ರಕೃತಿಯೆ ಹತ್ತಿರದ ನಂಟಿತ್ತು. ಇಂದು ಆಧುನಿಕ ಸಂಸ್ಕೃತಿಯಿಂದು ಮಾನವ ಪ್ರಕೃತಿಯಿಂದ ದೂರವಾಗಿ,

Sri Vidyabharathi Book Centre, Sringeri

CC-O. In Public Domain. Digitized by eGangotri

ಅದಕ್ಕೆ ವಿರುದ್ಧ ದಿಕ್ಕಿನಲ್ಲಿ ನಡೆಯುತ್ತಿದ್ದಾನೆ. ಆದರೆ ಅಂದು ಪ್ರಕೃತಿಗೆ ಹೊಂದಿಕೊಂಡು ನಡೆಯುವುದೇ ಸಂಸ್ಕೃತಿಯೆನಿಸಿತ್ತು. ಪ್ರಾಣಿ ಪಕ್ಷಿಗಳೂ ಕೂಡ, ಮನುಷ್ಯನನ್ನು ಪ್ರೀತಿಸುತ್ತಿದ್ದವೆನ್ನುವುದಕ್ಕೆ ಒಂದು ನಿದರ್ಶನ ಕೊಡುತ್ತೇನೆ. ಹಾಗೆಯೇ ಆ ಪ್ರೀತಿ ಹೆಚ್ಚಾಗಿ ಆದ ದುರಂತವನ್ನೂ ಮುಂದಿನ ಪುಟಗಳಲ್ಲಿ ವಿವರಿಸುತ್ತೇನೆ.

ನಾನು ನನ್ನ ದಿನಚರಿಯಂತೆ ಕಾಡಿನ ಮಧ್ಯೆ ಕೆಲಸ ಮಾಡುವಲ್ಲಿಗೆ ಭೇಟಿಯಿತ್ತು ಬೆಂಕಿ ಲೈನಿಗಾಗಿ (Fire line) ಬಂಗ್ಲೆಯತ್ತ ಬರುತ್ತಿದ್ದೆ. ದೂರದಲ್ಲಿ ಕಾಗೆಗಳು ಏನೋ ಅಳಿದುಳಿದ ಎಲುಬುಗೂಡನ್ನು ಕುಕ್ಕುತ್ತಿದ್ದವು ನಾನು ಹತ್ತಿರ ಬಂದಾಗ ಅದು ಕಡವೆಯ ದೇಹವೆಂದು ಅದರ ಕೊಂಬು ಗಳಿಂದ ತಿಳಿದುಕೊಂಡೆ. ಕಿನ್ನಾಯಿಗಳೋ ಅಥವಾ ಹುಲಿ, ಚಿರತೆಯೋ ತಿಂದಿರಬೇಕೆಂದು ಯೋಚಿಸಿ, ಮುಂದುವರಿದಾಗ ಒಂದು ಮರದ ಬುಡದಲ್ಲಿ ಹೆಚ್ಚೆಂದರೆ ಒಂದು ವಾರದ ಕಡವೆ ಮರಿ ನಡುಗುತ್ತಾ ನಿಂತಿತ್ತು. ಹೆತ್ತ ತಾಯಿಯನ್ನು ಕೊಂದು ತಿಂದು, ಈ ಮರಿಯನ್ನು ಅನಾಥ ಮಾಡಿರ ಬೇಕೆಂದು ತಿಳಿದು, ಕಷ್ಟಪಟ್ಟು ಆ ಮರಿಯನ್ನು ಹಿಡಿದೆ, ಕಡವೆ ಮರಿಗೆ ಹೆಚ್ಚು ಓಡಲಾಗುತ್ತಿಲ್ಲ, ಆದುದರಿಂದಲೇ ಅದು ಒಂದು ವಾರದ ಹಿಂದೆ ಹುಟ್ಟಿರಬೇಕೆಂದು ಗ್ರಹಿಸಿದೆ. ಆ ಮರಿಯನ್ನು ಹಿಡಿದು ನನ್ನ ಬಂಗ್ಲೆಗೆ ತಂದಾಗ, ನನ್ನ ಹೆಂಡತಿ, ಅಕ್ಕ ಇಬ್ಬರೂ ಒಂದು ಮಗು ಹುಟ್ಟಿದಷ್ಟು ಸಂತೋಷಗೊಂಡರು, ಅದಕ್ಕೆ ಅಲ್ಲಿಂದಲೇ ರಾಜಾತಿಥ್ಯ ಮಾಡಲಾಯಿತು. ನಮ್ಮ ಹಸು ಇದ್ದ (ಹುಲಿ ಹೊಡೆದು ಸತ್ತದ್ದು) ಕೋಣೆಯೇ ಅದರ ಠಿಕಾಣೆ ಯಾಯಿತು. ಬೆಳಗ್ಗೆ ಎದ್ದು ತನ್ನ ಮಗುವಿಗೆ ಉಪಚಾರ ಮಾಡುವಂತೆ ನನ್ನ ಅಕ್ಕ ಆ ಮರಿಯೊಡನೆ ಸರಸವಾಡುತ್ತಿದ್ದಳು. ಅದಕ್ಕೆ ಬೇಕಾಗಿದ್ದ ಹಾಲಿನ ತೊಂದರೆಯಿದ್ದುದರಿಂದ 'ಪಾಡಿ'ಯಿಂದ ಒಂದು ಸೇರು ಹಾಲು ವ್ಯವಸ್ಥೆಯೂ ಮಾಡಿಯಾಯಿತು. ಅದಕ್ಕೆ ಗರಿಕೆ-ಹುಲ್ಲು-ಹಣ್ಣು ಹಂಪಲು ಸೊಪ್ಪು ಎಲ್ಲವನ್ನೂ ಕೊಡುವ ಭಾರ ನನ್ನ ಅಕ್ಕನದಾಯಿತು. ಮಕ್ಕಳಿಲ್ಲದ ಬಂಜೆ, ವಿಧವೆ, ಆ ಮೂಕಪ್ರಾಣಿಯಲ್ಲಿ ತನ್ನ ತಾಯಿ ಹೃದಯವನ್ನೇ ಎರೆದಿದ್ದಳು. ದಿನಗಳೆದಂತೆ ಈ ಮರಿ ದಷ್ಟಪುಷ್ಟವಾಗಿ ಬೆಳೆಯುತ್ತಿತ್ತು. ಅದೆಷ್ಟು ಮುದ್ದಾಗಿತ್ತು ಮತ್ತು ನಮ್ಮನ್ನು ಹೇಗೆ ಅವಲಂಬಿಸಿತ್ತು ಎಂದರೆ, ಮನುಷ್ಯನನ್ನು ಕಂಡರೆ ನಾಗಾಲೋಟದಿಂದ ಓಡಿ ಬಂದು-ಮೈಯನ್ನು ಶರೀರದಿಂದ ಉಜ್ಜಿ ಪ್ರೀತಿ ತೋರ್ಪಡಿಸುತ್ತಿತ್ತು. ಆದರೆ, ಎಲ್ಲದಕ್ಕೂ

Sri Vidyabharathi Book Centre, Sringeri

CC-O. In Public Domain. Digitized by eGangotri

ಒಂದು ನಿಶ್ಚಿತ ಆಯುಷ್ಯವಿದೆ. ಕಾಡಿನಲ್ಲಿ-ಕೆಲವು ವೇಳೆ ಕಡವೆ, ಜಿಂಕೆ, ಕಾಡೆಮ್ಮೆ, ಸಾರಂಗಗಳಿಗೆ ಕಾಲು ಬೇನೆ, ಹಾಗೂ ದನಗಳಿಗೆ ಬರುವ ಗಂಟಲು ಬೇನೆ ಬರುವುದಿದೆ. ಗ್ರಾಮದಲ್ಲಿ ಜನರು ಸಾಕಿದ ದನಕರುಗಳಾದರೆ ಆಸ್ಪತ್ರೆ ಯಿದೆ. ಆದರೆ, ಈ ಕಾಡಿನಲ್ಲಿ ಇವುಗಳಿಗೆ ಉಪಚಾರ ಮಾಡುವವರಾರು ? ಆ ದೇವನೇ ಅವರ ರಕ್ಷಕ ಮತ್ತು ಸಂಹಾರಕ.

ಒಂದು ದಿವಸ, ಕಡವೆ ಮರಿ ತೂಕಡಿಸುತ್ತಿತ್ತು, ಅಕ್ಕ ಅದಕ್ಕೆ ತನಗೆ ತಿಳಿದಿರುವ ಔಷಧಿ ಮಾಡಿದಳು. ಮೂಕಪ್ರಾಣಿಗೆ ತನ್ನ ಕಷ್ಟವನ್ನು ಹೇಳುವ ಅನುವೆಲ್ಲಿ ? ಮರುದಿನ ಕೊಟ್ಟಿಗೆಯಲ್ಲಿ ಅದು ಕಾಲ್ನೀಡಿ ಸತ್ತು ಬಿದ್ದಿತ್ತು. ಆದರೆ, ಅದು ನಮ್ಮ ಪ್ರೀತಿ, ವಿಶ್ವಾಸಗಳಿಸಿ, ಕಾಡು ಗುಣ ವನ್ನೆಲ್ಲಾ ಬಿಟ್ಟು, ನಮ್ಮೊಡನೆ ಒಂದಾಗಿತ್ತು. ಕಾಡು ಮತ್ತು ನಾಡೆಂದು ವಿಂಗಡ ಪಂಗಡವಾಗಿರುವುದರಿಂದ ಈ ಪ್ರೀತಿ, ವಿಶ್ವಾಸ. ವಿಧೇಯತೆ ಯಲ್ಲಿಯೂ ತಾರತಮ್ಯವಿತ್ತೇನೋ ! ಪ್ರೀತಿಸುವುದು ದೈವಿಕ ವರದಾನ. ಆದರೂ, ಚಿಂತನಾಶಕ್ತಿಯಿರುವ ಈ ನಕಲಿ ಬ್ರಹ್ಮ, ಮಾನವ, ಅದೇಕೆ ಎಲ್ಲ ವನ್ನೂ ಪ್ರೀಸಲು ಕಲಿಯಲಿಲ್ಲವೊ ಅದು ಬಿಡಿಸಲಾರದ ಸಮಸ್ಯೆಯಾಗಿ ಇಂದೂ ನನ್ನ ಮನದಲ್ಲಿ ಹುದುಗಿದೆ.

ಹೀಗೆಯೇ ಮತ್ತೊಂದು, ಯಾರೂ ಗ್ರಹಿಸದ ವಿಚಾರವನ್ನು ಇಲ್ಲಿ ಬರೆ ಯುತ್ತೇನೆ. ಇದರಿಂದ ಮನುಷ್ಯನಿಗೂ ಮತ್ತು ಕಾಡುಪ್ರಾಣಿಗಳಿಗೂ ಸಂಬಂಧವೇನೆಂದು ಆರ್ಥೈಸಬಹುದು.

ನಮ್ಮ ಕುರುಬರ 'ಹಾಡಿ'ಯಲ್ಲಿ ಕೆಲವು ಜನರು ಆರಣ್ಯದ ನೀರು ಸರಬರಾಜಿರುವ ಕಡೆಗಳಲ್ಲಿ ಗದ್ದೆಗಳನ್ನು ಮಾಡಿ, ಭತ್ತ ಬೆಳೆಯುತ್ತಿದ್ದರು. ಭತ್ತ ಬೆಳೆದರೂ ಅರ್ಧಭಾಗ ಕಾಡುಪ್ರಾಣಿಗಳಿಗೆ ಮತ್ತರ್ಧ ಭಾಗ ನೆಟ್ಟವರಿಗೆ ಸಿಗುತ್ತಿತ್ತು.

ಒಮ್ಮೆ ಈ ಗದ್ದೆಗಳಲ್ಲಿ ಕೆಲವು ಹೆಂಗಸರು ಹುಲ್ಲು ಕುಯ್ಯುತ್ತಿದ್ದರು. ತಮ್ಮ ತಮ್ಮಲ್ಲೇ ಮಾತಾಡುತ್ತಾ ತಮ್ಮ ಕಾರ್ಯದಲ್ಲಿ ಮಗ್ನರಾಗಿದ್ದಾಗ, ಕಾಡಿನ ಅಂಚಿನಿಂದ ದೊಡ್ಡದೊಂದು ಕರಡಿ ಇವರ ಮೇಲೆರಗಿತು. ಗಾಬರಿ ಗೊಂಡ ಇವರು ದಿಕ್ಕಾಪಾಲು ಓಡಿದರೂ, ಗುಂಪಿನಲ್ಲಿದ್ದ ಒಬ್ಬಳು ಹದಿ ಹರೆಯದ ಯುವತಿಯನ್ನು ಹಿಡಿದು, ಮಗುವನ್ನು ಎತ್ತಿ ನಡೆದಂತೆ, ಕಾಡು ನುಗ್ಗಿ ಕಣ್ಮರೆಯಾಯಿತು. ಗಾಬರಿಗೊಂಡ ಯುವತಿಯ ಕಿರುಚಾಟ ಕೇಳು ತ್ತಿತ್ತು. ಜತೆಯವರೆಲ್ಲಾ ಪಾಡಿಗೆ ಬಂದು ವಿಚಾರ ತಿಳಿಸಿದರು. ಕಾಡು

Sri Vidyabharathi Book Centre, Sringeri

CC-O. In Public Domain. Digitized by eGangotri

ಕುರುಬರು ದೊಣ್ಣೆ ಕತ್ತಿ ಮೊದಲಾದ ಆಯುಧಗಳನ್ನು ಹಿಡಿದು ಕಾಡು ನುಗ್ಗಿ ಯುವತಿಯನ್ನು ಹುಡುಕಿದರು. ಆದರೆ, ಎಷ್ಟೇ ಹುಡುಕಿದರೂ ಯುವತಿಯ ಸುಳಿವು ದೊರಕಲಿಲ್ಲ.

ಕರಡಿಗಳು ಮನುಷ್ಯನನ್ನು ಕೊಂದು ತಿನ್ನುವುದಿಲ್ಲ. ಸಿಟ್ಟು ಬಂದರೆ ಮೇಲೇರಿ ಬಂದು ಕೊಂದೀತು. ಆದರೆ ಆ ಮಾಂಸವನ್ನು ತಿನ್ನುವುದಿಲ್ಲವೆಂದು ನನ್ನ ಅನುಭವ ಹೇಳುತ್ತದೆ. ಆದರೆ, ಈ ಯುವತಿಯನ್ನು ಹೊತ್ತ ಕರಡಿ ಅವಳನ್ನು ಏನು ಮಾಡಿತು ? ಎಲ್ಲರಿಗೂ ಇದೊಂದು ಬಿಡಿಸಲಾರದ ಪ್ರಶ್ನೆಯಾಯಿತು. ಕಾಡಿನ ಮೂಲೆ ಮೂಲೆಗಳಲ್ಲಿ ಹುಡುಕಿದರೂ ಒಂದೇ ಕುರುಹು ಕಾಣದ ರೀತಿ ಕರಡಿ ಅವಳನ್ನೆಲ್ಲಿಗೆ ಒಯ್ಯಿತು ? ಎಲ್ಲಿ ಹುಡುಕಿದರೂ ಸಿಕ್ಕದಿದ್ದರಿಂದ ಎಲ್ಲರೂ ತಟಸ್ಥರಾದರು.

ಮೂರು ದಿವಸದ ಮೇಲೆ ನಾನು ಕಾರ್ಯಾರ್ಥವಾಗಿ ಹೆಗಲಿಗೆ ಕೋವಿಯೇರಿಸಿ, ಬೆಂಕಿ ದಾರಿಯಲ್ಲಿ (Fire line) ನಡೆಯುತ್ತಿದ್ದೆನು. ಬೆಂಕಿ ದಾರಿಯ ಎಡಭಾಗದಲ್ಲಿ ಬಂಡೆಕಲ್ಲುಗಳ ರಾಶಿಯಿದ್ದು ಅಲ್ಲಲ್ಲಿ ಹುಟ್ಟಿದ ಬಿದಿರು ಮೆಳೆಗಳಿಂದ ಮುಚ್ಚಲ್ಪಟ್ಟಿತ್ತು. ಅಲ್ಲಿಗೆ ಬಂದಾಗ ಮನುಷ್ಯನು ನಿಃಶಕ್ತನಾಗಿ ಅಳುವಂತಹ ಸ್ವರ ಕೇಳಿತು. ಇದು ಯಾವುದೋ ಪ್ರಾಣಿಯಿರಬೇಕೆಂದು ನನ್ನ ಕುತೂಹಲ ಆ ಬಂಡೆಗಳ ಮೇಲೇರಿಸಿತು. ಬಂಡೆಯ ಮೇಲೇರಿದಾಗ, ಅದರಡಿಯ ಗುಹೆಯಲ್ಲಿ ಈ ಶಬ್ದವಾಗುತ್ತಿತ್ತು. ನಾನು ಎಚ್ಚರಿಕೆಯಿಂದ ಬಂಡೆಯ ಕೆಳಗಿಳಿದು ಒಡೆದಿದ್ದ ಬಂಡೆಯ ಕಿಂಡಿಯಿಂದ ನೋಡಿದಾಗ, ಕಂಡ ದೃಶ್ಯ ಹೃದಯ ವಿದ್ರಾವಕವಾಗಿತ್ತು.

ಕುರುಬರ ಯುವತಿಯು ನಗ್ನಳಾಗಿದ್ದಳು ಆಕೆಯುಟ್ಟಿದ್ದ ಬಟ್ಟೆಗಳೆಲ್ಲಾ ಚಿಂದಿ ಚಿಂದಿಯಾಗಿ ಬಿದ್ದಿದ್ದವು. ಕರಡಿಯು ಆಕೆಯನ್ನು ತಬ್ಬಿ ಹಿಡಿದು ಪ್ರಾಣಿಯಂತೆ ನಾಲ್ಕು ಕಾಲುಗಳಲ್ಲಿ ನಿಲ್ಲುವಂತೆ ಹೆಗಲಿಗೆ ಭಾರಹಾಕಿ ಅಮುಕುತ್ತಿತ್ತು. ಈ ಆಶ್ಚರ್ಯಕರ ಸಂಗತಿಯನ್ನು ಏನೆಂದು ಹೇಳಲಿ ?

ಆಂಗ್ಲ ಲೇಖಕನೊಬ್ಬ ತನ್ನ ಪುಸ್ತಕದಲ್ಲಿ ಪ್ರಾಣಿಗಳ ವಿಕೃತ ಕಾಮದ ವಿಚಾರ ಬರೆದಿದ್ದುದನ್ನು ನಾನು ಓದಿದ್ದೆ. ಕಾಡಿನಲ್ಲಿ ತನ್ನ ಕಾಮ ತೃಷೆಯನ್ನಡಗಿಸಿಕೊಳ್ಳಲು ಹೆಣ್ಣು ಕರಡಿ ದೊರಕದಿದ್ದರೆ ಗಂಡು ಕರಡಿಗಳು ಹೆಂಗಸರನ್ನು ಹೊತ್ತುಕೊಂಡು ಹೋಗಿ ತನ್ನ ತೃಷೆಯನ್ನಡಗಿಸಿಕೊಳ್ಳುತ್ತವೆಂದು ಬರೆದಿದ್ದ. ಕರಡಿ, ಮೊಲ, ಇಲಿ, ಮಂಗ ಇದರ ರಕ್ತವು ಮನುಷ್ಯನ ರಕ್ತಕ್ಕೆ ಹತ್ತಿರ ಸಂಬಂಧಿಯೆಂದೂ ಉಲ್ಲೇಖಿಸಿತ್ತು.

CC-O. In Public Domain. Digitized by eGangotri

ಯುವತಿಯು ಈ ಕಾಡುಪ್ರಾಣಿಯ ಉಪಟಳಕ್ಕೆ ಸಿಕ್ಕಿ ತನ್ನ ಬುದ್ಧಿಯನ್ನೇ ಕಳೆದುಕೊಂಡಿದ್ದಳು. ಆದರ ನಖಿಗಳು ಅವಳ ಕೋಮಲ ಮೈಗೆ ತಗಲಿ ಮೈಯೆಲ್ಲಾ ಗಾಯಗಳಾಗಿ ರಕ್ತ ಸೋರಿತ್ತು. ಕರಡಿಯು ಆಕೆಯನ್ನು ಕೆಳಗೆ ಬೀಳಲೂ ಕೂಡ ಬಿಡದೆ ಎತ್ತಿ ನಿಲ್ಲಿಸಿ, ತನಗೆ ಬೇಕಾದ ರೀತಿಯಲ್ಲಿ ನಿಲ್ಲುವಂತೆ ಮಾಡುತ್ತಿತ್ತು. ತನ್ನ ಉದ್ದ ಮೂತಿಯನ್ನು ಗಳಿಗೆಗೊಮ್ಮೆ ಆಕೆಯ ತೊಡೆಯ ಸಂದಿಗೆ ಹಾಕಿ ಬೆಂ... ಬೆಂ.. ಯೆಂದು ಶಬ್ದ ಮಾಡಿ, ಯಥಾ ಪ್ರಕಾರ ಆಕೆಯ ಮೇಲೇರುತ್ತಿತ್ತು. ಇಂತಹ ವಿಚಿತ್ರ ದೃಶ್ಯವನ್ನು ಕಂಡ ನಾನು ದಂಗಾದೆ. ಖಂಡಿತವಾಗಿಯೂ ಯುವತಿಯನ್ನು ಈ ಕರಡಿ ಉಳಿಯಗೊಡುವುದಿಲ್ಲವೆಂದು, ಅದನ್ನು ಗುಂಡಿಕ್ಕಿ ಕೊಲ್ಲುವ ಯೋಚನೆ ಮಾಡಿದೆ.

ಆದರೆ, ಗುಂಡಿಕ್ಕುವುದು ಅಷ್ಟು ಸುಲಭವಿರಲಿಲ್ಲ. ಕಾರಣ ಎಡೆಬಿಡದೆ ಯುವತಿಯ ಮೇಲೇರುವ ಈ ಕರಡಿಗೆ ಗುಂಡಿಕ್ಕಿದಾಗ, ಅದು ಯುವತಿಗೆ ತಗಲಿದರೆ ? ನಾನು ಒಂದು ಕಲ್ಲು ತೆಗೆದು ಗುಹೆಯ ಬಾಯಿಯತ್ತ ಹಾಕಿ ಶಬ್ದ ಮಾಡಿದೆನು. ಕರಡಿ ಎಚ್ಚರಗೊಂಡು ಬಾಯಿಯತ್ತ ದಿಟ್ಟಿಸಿ ನೋಡಿತು. ಅದರ ವರ್ತನೆಯಲ್ಲಿ ಗಾಬರಿಯಿತ್ತು. ಎಷ್ಟಾದರೂ ಕಳ್ಳತನ ಮಾಡಿದ ಕರಡಿಯಲ್ಲವೇ ? ಮತ್ತೊಂದು ಕಲ್ಲನ್ನು ಅದೇ ಸ್ಥಳಕ್ಕೆಸೆದಾಗ. ಗುರುಗುರು ಶಬ್ದಮಾಡಿ, ವಿಚಾರವೇನೆಂದರಿಯಲು ಗುಹೆಯ ಬಾಯಿಯತ್ತ ಬಂದಿತು. ನಾನು ಬಂಡೆಯ ಮೇಲಿದ್ದುದರಿಂದ ನನಗೆ ಒಳ್ಳೇಯ ಅವಕಾಶವಿದ್ದು, ಅದರ ತಲೆಗೆ ಗುಂಡಿಕ್ಕಿದೆನು. ಕರಡಿ ಆರ್ಭಟಿಸಿ, ಹೊರಗಿನ ಇಳಿಜಾರಿನಲ್ಲಿ ಉರುಳಿ ಬಿತ್ತು. ಕರಡಿಗಳನ್ನು ಒಂದೇ ಏಟಿನಲ್ಲಿ ಕೊಲ್ಲಲಾಗುವುದಿಲ್ಲ. ಕೆಳಗುರುಳಿ ಬಿದ್ದ ಕೂಡಲೇ ಮತ್ತೊಂದು ಗುಂಡನ್ನು ಅದರ ಎದೆಗೆ ಹೊಗಿಸಿದೆ. ಕರಡಿ ಒದ್ದಾಡಿ, ಸ್ತಬ್ಧವಾಯಿತು.

ನಾನು ಗುಹೆಯೊಳಗೆ ಹೋಗಿ ಯುವತಿಯನ್ನು ಎಬ್ಬಿಸಿದೆ. ಎರಡು ದಿನ ಆಹಾರವಿಲ್ಲದೆ, ಕಂಗಾಲಾಗಿ, ಈ ಕ್ರೂರ ಪ್ರಾಣಿಯ ಉಪಟಳದಿಂದು ನಿದ್ರೆ, ವಿಶ್ರಾಂತಿಯಿಲ್ಲದೆ, ತನ್ನ ಬುದ್ಧಿಮತ್ತೆಯನ್ನೇ ಯುವತಿ ಕಳೆದುಕೊಂಡಿದ್ದಳು. ಬಾಯಲ್ಲಿ ಏನೇನೊ ಬಡಬಡಿಸುತ್ತಿದ್ದಳು. ಆದರೆ ನಗ್ನವಾಗಿರುವ ಈ ಯುವತಿಯನ್ನು ಹೊರಸಾಗಿಸುವುದಾದರೂ ಹೇಗೆ ?

ಬಂಗ್ಲೆಗೆ ಬಂದು ಒಬ್ಬನನ್ನು ಪಾಡಿಗೆ ಕಳುಹಿಸಿ ಕುರುಬರ ತಂಡವನ್ನು ಕರೆಸಿ ವಿಚಾರ ಹೇಳಿದೆ. ಅವರೆಲ್ಲಾ ಇದನ್ನು ಕೇಳಿ ದಂಗಾಗಿ, ನನ್ನೊಡನೆ ಗುಹೆಗೆ ಹೊರಟರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಸತ್ತ ಮಗಳು ಜೀವಂತವಾಗಿ ಮುಂದೆ ನಿಂತರೆ ಯಾವ ತಂದೆ ತಾಯಿಗಳಿಗೆ ಸೋಜಿಗವೆನಿಸದು ? ಆಕೆಗೆ ಬಟ್ಟೆಯುಡಿಸಿ, ಹೊತ್ತು ಬಂಗ್ಲೆಗೆ ತಂದು, ಅವಶ್ಯವಿರುವ ಶುಶ್ರೂಷೆ ಮಾಡಿದೆವು.

ಯುವತಿಗೆ ಶುಶ್ರೂಷೆ ಅತಿ ಜಾಗರೂಕತೆಯಿಂದ ನಡೆಯುತ್ತಿದ್ದರೂ ಕಂಗಾಲಾದ ಯುವತಿ ಚೇತರಿಸಿಕೊಳ್ಳುವಂತಿರಿಲಿಲ್ಲ. ಕುರುಬರು ತಮಗೆ ತಿಳಿದ ಔಷಧಗಳನ್ನು ಮಾಡಿದರು. ಆದರೆ ದಿನವಿಡೀ ಬಾಯಿಗೆ ಬಂದಂತೆ ಹರಟುತ್ತಾ, ಪ್ರಜ್ಞೆಯಿಲ್ಲದೆ ವ್ಯವಹರಿಸುವ ಅವಳು, ಎಲ್ಲರಿಗೂ ಸಮಸ್ಯೆಯಾದಳು ಆಹಾರ ಸೇವಿಸುವುದಿರಲಿ, ಹಾಲನ್ನು ಬಾಯಿಗೆ ಹುಯ್ಯಲೂ ನಾಲ್ಕಾರು ಜನರ ಸಹಾಯ ಬೇಕಿತ್ತು. ನಾವೆಲ್ಲರೂ ಆಕೆಯನ್ನು ನಿಜ ಬುದ್ಧಿಗೆ ತರಲು ಎಷ್ಟೇ ಪ್ರಯತ್ನಿಸಿದರೂ, ದಿನಗಳೆದಂತೆ ಆಕೆಯ ಸ್ಥಿತಿ ಬಿಗಡಾಯಿಸಿತು. ಅಂದು ಹತ್ತಿರ ಆಸ್ಪತ್ರೆಗಳಿಲ್ಲದಿದ್ದುದರಿಂದ ದೂರದ ಆಸ್ಪತ್ರೆಗೆ ಸಾಗಿಸುವುದಾದರೂ ಹೇಗೆ ? ಕುರುಬರು ಆಕೆಯನ್ನು ಆಸ್ಪತ್ರೆಗೆ ಕಳುಹಿಸಲು ಒಪ್ಪದಿದ್ದದ್ದು ಮತ್ತೊಂದು ಸಮಸ್ಯೆಯಾಯಿತು. ಗಾಯಗಳನ್ನು ಔಷಧ ಹಚ್ಚಿ ಗುಣಪಡಿಸಿದರೂ ಮನಸ್ಸಿಗೆ ಬಿದ್ದ ಆಘಾತವನ್ನು ಸರಿಪಡಿಸುವುದಾದರೂ ಹೇಗೆ ?

ಕಡೆಗೊಂದು ದಿನ ಯುವತಿಯು ವಿಕಾರವಾಗಿ ಕೂಗತೊಡಗಿದಳು. ಸುಮಾರು ಮಧ್ಯರಾತ್ರಿಗೆ ಶಕ್ತಿಹೀನಳಾಗಿ ಕಣ್ಣುಮುಚ್ಚಿದವಳು ತೆರೆಯಲೇ ಇಲ್ಲ. ನಮಗೆಲ್ಲಾ ತುಂಬಾ ದುಃಖವಾದರೂ ಏನೂ ಮಾಡುವಂತಿರಲಿಲ್ಲ. ಯಮನ ಬಾಯಿಂದ ಆಕೆಯನ್ನು ಎಳೆ ತಂದು ಎಷ್ಟು ಪ್ರಯತ್ನಿಸಿದರೂ ಜೀವವುಳಿಸಲಾಗಲಿಲ್ಲವಲ್ಲಾ ಎಂಬ ಕಳವಳವು ನಮ್ಮಲ್ಲಿ ಉಳಿಯಿತು.

ಕರಡಿ ಮುಟ್ಟಿದ ಯುವತಿಯನ್ನು ಕರಡಿಗೆ ಒಪ್ಪಿಸಬೇಕೆಂದು ಆಕೆಯ ತಂದೆ ತಾಯಿಗಳ ವಾದ. ಪೂರ್ವಜನ್ಮದಲ್ಲಿ ಆಕೆಗೂ ಕರಡಿಗೂ ಏನೋ ಸಂಬಂಧವಿದ್ದಿರಬೇಕು; ಇಲ್ಲವೇ ದೇವತೆಯು ಕರಡಿ ರೂಪದಲ್ಲಿ ಬಂದು ಆಕೆಯನ್ನು ವರಿಸಿರಬೇಕು. ಅಂತಲೇ ಅದು ಆಕೆಯನ್ನು ಅಷ್ಟು ಜನರ ಮಧ್ಯೆ ಹೆಕ್ಕಿ ತನ್ನ ಗುಹೆಯೊಳಕ್ಕೆ ಒಯ್ದಿತು. ಅಂದ ಮೇಲೆ ಆ ಗುಡ್ಡದಲ್ಲಿಯೇ ಅವಳ ಶವಸಂಸ್ಕಾರವಾಗಬೇಕೆಂದು ಬಂಧು ಬಾಂಧವರ ತರ್ಕವಾಗಿ, ಆಕೆಯ ಕಳೆಬರವನ್ನು ಅಲ್ಲಿಯೇ ಸಮಾಧಿ ಮಾಡಲಾಯಿತು ಇಂದಿಗೂ ಆ ಗುಡ್ಡಕ್ಕೆ ಆ ಯುವತಿಯ ಹೆಸರು ಹಾಕಲ್ಪಟ್ಟು 'ತಾಯಕ್ಕ ಗುಡ್ಡ' ಎಂದು ಕುರುಬರಲ್ಲಿ ಪ್ರಖ್ಯಾತವಾಗಿದೆ. ತಾಯಕ್ಕ ಗುಡ್ಡ ಅಲ್ಲಿ ಸುತ್ತು ಮುತ್ತು ಜೀವಿಸುವ

CC-O. In Public Domain. Digitized by eGangotri

ಕುರುಬರಿಗೆ ಪವಿತ್ರ ಸ್ಥಳವಾಗಿದೆ. ವರ್ಷಕ್ಕೊಮ್ಮೆ ಬಿದಿರಿನಿಂದ ತಾಯಕ್ಕ ನನ್ನು ಮಾಡಿ, ಮೌನ ಮೆರವಣಿಗೆಯಲ್ಲಿ ಗುಡ್ಡಕ್ಕೆ ಹೋಗಿ, ಆ ಗುಹೆಯಲ್ಲಿ ಕೃತಕ ತಾಯಕ್ಕನನ್ನು, ಕಾಣದ ಕರಡಿಗೊಪ್ಪಿಸಿ, ವಿಧಿಪೂರ್ವಕ ಸಂಪ್ರದಾಯ ಆಚರಿಸಿದರೇನೇ ಅವರಿಗೆ ನೆಮ್ಮದಿ, ಇಲ್ಲದಿದ್ದರೆ ಆ ಪಂಗಡದ ಯುವತಿಯರಿಗೆ ಕರಡಿ ಭಯ ತಪ್ಪಿದ್ದಲ್ಲವೆಂದು ಅವರ ನಂಬಿಕೆ. ತಾಯಕ್ಕ ಗುಡ್ಡ ಇಂದು ಈ ಪಂಗಡದ ಯುವತಿಯರನ್ನು ರಕ್ಷಿಸುವ ತಾಣವಾಗಿದೆಯೆಂದು ಅವರ ಭರವಸೆ.

ಹೀಗೆ ಅನೇಕ ಘಟನೆಗಳು ನನ್ನ ಉದ್ಯೋಗದ ಅವಧಿಯಲ್ಲಿ ನಡೆದು ಹೋದವು. ಅರಣ್ಯ ಇಲಾಖೆಯಲ್ಲಿ ನಾನೊಬ್ಬ ಅಧಿಕಾರಿಯಾಗಿದ್ದು ನನಗೆ ರೇಂಜಿನ ಮೇಲೆ ಪೂರ್ಣ ಅಧಿಕಾರ ಚಲಾಯಿಸುವ ಹಕ್ಕಿದ್ದರೂ, ಆದೇಕೋ ನನಗೆ ಈ ಇಲಾಖೆಯನ್ನು ಬಿಟ್ಟು, ವಿಶ್ರಾಂತಿ ಜೀವನ ನಡೆಸಬೇಕೆಂದು ಒಳ ಮನಸ್ಸು ಹೇಳುತ್ತಿತ್ತು. ಅದರಂತೆ ನನ್ನ ಆಕ್ಕನೂ ದಿನೇದಿನ ಕ್ಷೀಣಿಸುತ್ತಿದ್ದೂ, ಈ ನನ್ನ ನಿಲುವಿಗೆ ಮತಷ್ಟು ಇಂಬುಗೊಟ್ಟಿತ್ತು. ಆದರೆ, ನನ್ನ ಹೆಂಡತಿ ಇದಕ್ಕೆ ವಿರೋಧವಿದ್ದು, ಪೂರ್ಣಾವಧಿಯ ಸೇವೆ ಮಾಡಿ, ವಿಶ್ರಾಂತಿ ಪಡೆಯಲು ಹೇಳುತ್ತಿದ್ದಳು. ಇಳಿವಯಸ್ಸಿನಲ್ಲಿ ಸರಕಾರದಿಂದ ಸಿಕ್ಕುವ ವಿಶ್ರಾಂತಿ ವೇತನವೇ ನಮಗೆ ಆಧಾರವೆಂಬುದು ಅವಳ ನಿಲುವು.

ಹೌದು, ಇಂದು ಅರಣ್ಯ ಇಲಾಖೆಯೆಂದರೆ ಚಿನ್ನದ ಗಣಿಯೇ ಹೌದು, ಲಂಚ, ರುಷುವತ್ತುಗಳ ಆಗರ. ಒಂದು ಪರ್ಮಿಟ್ಟಿಗೆ, ಒಂದು ಲೈಸೆನ್ಸ್‌ಗೆ, ಸಾವಿರಗಟ್ಟಲೆ ಹಣ ಸೆಳೆಯುವ ಅನುವಿದೆ. ಆನೆಕೊಂಬು, ಗಂಧದಮರ, ಅರಣ್ಯದಲ್ಲಿ ಬೆಳೆಯುವ ವಿವಿಧ ಉಪಯೋಗದ ವಸ್ತುಗಳು, ಜೇನು ಹೀಗೆ ಎಲ್ಲವೂ ಸರಕಾರಕ್ಕೆ ಮಾಸಲೆಂಬ ಅಂದಿನ ನಮ್ಮ ಕರ್ತವ್ಯ ನಿಷ್ಠೆ. ಇಂದಿಲ್ಲ. ಈಗ ಅಡಿಯಿಂದ ಮುಡಿಯವರೆಗಿರುವ ಎಲ್ಲಾ ನೌಕರರೂ ಹಣದಾಯಿಗಳು, ಹೇಗಾದರೂ ಮಾಡಿ, ನೌಕರಿ ಅವಧಿ ತೀರುವುದರೊಳಗೆ ಕೂತು ಉಂಬ ಹಣ ಸಂಚಯಿಸಬೇಕೆಂಬುದೇ ಇಂದಿನ ಬಹುತೇಕ ನೌಕರರ ಆಸೆ. ಆದರೆ, ಅಂದು ಸರಕಾರದ ವಸ್ತುವನ್ನು ತನಗಾಗಿ ಉಪಯೋಗಿಸುವುದು, ಅಧಿಕಾರದಡಿಯಲ್ಲಿ ಕಾರಸ್ಥಾನ ಮಾಡಿ ಹಣಗಳಿಸುವುದು ನ್ಯಾಯಬಾಹಿರ ಮತ್ತು ಆತ್ಮವಿರೋಧಿ ಯೆಂದು ಭಾವಿಸುತ್ತಿದ್ದೆವು. ಅದು ಅಂದಿನ ಕಾಲಕ್ಕೆ ಚೆಂದವಿತ್ತು. ಇಂದು ಕದಿಯದವ, ಲಂಚ ಸ್ವೀಕರಿಸದವ, ನಾನಾ ಮಾರ್ಗದಲ್ಲಿ ಹಣ ಸಂಚಯಿಸದವನು ನಿಷ್ಪ್ರಯೋಜಕ. ಜನರ ದೃಷ್ಟಿಯಲ್ಲೂ ಅಯೋಗ್ಯ !

Sri Vidyabharathi Book Centre, Sringeri

CC-O. In Public Domain. Digitized by eGangotri

ಕೆಲವೇ ದಿವಸಗಳಲ್ಲಿ ನನ್ನ ಅಕ್ಕನ ಸ್ಥಿತಿ ನಿರಾಶದಾಯಕವಾಗತೊಡ ಗಿತು. ತನ್ನ ಗಂಡನನ್ನು ಕಳೆದುಕೊಂಡು, ಯಾರೂ ಗತಿಯಿಲ್ಲದೆ, ತನ್ನ ತಮ್ಮನೇ ತನಗೆ ಸರ್ವಸ್ವವೆಂದು, ನನ್ನ ಜೀವನವಿಡೀ ಬೆಂಗಾವಲಾಗಿದ್ದ ಆಕೆ ಕೇವಲನನ್ನ ಸಹೋದರಿಯಲ್ಲ ಬದಲು ಮಾತೃ ಸ್ವರೂಪಿಣಿ. ಆಕೆಯ ಪ್ರೀತಿ, ವಿಶ್ವಾಸ, ಹಾಗೂ ನನ್ನ ಬಗ್ಗೆ ಇದ್ದ ಕಾಳಜಿ, ನನ್ನಿಂದ ಯಾವ ರೀತಿಯಲ್ಲೂ ಆಕೆಯ ಋಣ ತೀರಿಸಲುಸಾಧ್ಯವೆನಿಸಿತ್ತು.

ಏಳೆಂಟು ದಿವಸಗಳು ಆಕೆಯು ಪ್ರಜ್ಞಾಹೀನಳಾಗಿದ್ದಳು. ಆಕೆಗೆ ಅನ್ನಾ ಹಾರ ಕೊಡುವ ಮತ್ತು ಔಷಧಿಗಳನ್ನು ನೀಡುವ ಜವಾಬ್ದಾರಿಯನ್ನು ನಾನೇ ವಹಿಸಿಕೊಂಡು ಅಕ್ಕನ ಹಾಸಿಗೆಯ ಬಳಿಯೇ ಕೂತೆ. ಹೊಸ ವರ್ಷ ಯುಗಾದಿ ಹಬ್ಬದ ದಿವಸ ಆಕೆ ಕಣ್ಮುಚ್ಚಿ, ನಮ್ಮನ್ನೆಲ್ಲಾ ಬಿಟ್ಟು ಅಗಲಿದಳು. ಆರಣ್ಯ ದಲ್ಲಿ ತನ್ನ ತಮ್ಮನಿಗೆ ಸಹಕಾರಿಯಾಗಿ ದುಡಿಯಲು ಬಂದವಳು ಆರಣ್ಯದಲ್ಲೇ ಮಣ್ಣು ಪಾಲಾದಳು.

ಹುಟ್ಟಿದವನು ಸಾಯಲೇಬೇಕು. ಇಲ್ಲಿ ಚಿರಂಜೀವಿಯಾಗಿರ ಬಲ್ಲವರ್ಯಾರೂ ಇಲ್ಲ. ಮನುಷ್ಯ ಹುಟ್ಟುವಾಗಲೂ ಬೆತ್ತಲೆ– ಹೋಗುವಾ ಗಲೂ ಬೆತ್ತಲೆಯಾಗಿಯೇ ಹೋಗುತ್ತಾನೆ. ಈ ಜೀವನದಿಯಲ್ಲಿ ತಾನು ಅನಂತನೆಂದೇ ತಿಳಿದಿರುತ್ತಾನೆ. ಈ ಜೀವನ ಜಂಝಾಟದಲ್ಲಿ ಸಾವಿರ ಹಂಚಿಕೆ ಗಳನ್ನು ಹೂಡಿ, ಮುಳುಗಿ, ತೇಲಿ, ಕಡೆಗೊಮ್ಮೆ ತನಗರಿವಿಲ್ಲದೆಯೇ ಕಣ್ಮರೆ ಯಾಗುತ್ತಾನೆ. ಈ ಜೀವನರಂಗದಲ್ಲಿ ಅವನು ವಹಿಸಿದ ಪಾತ್ರ, ಹೂಡಿದ ಹೂಟ, ಮಾಡಿದ ಮಹತ್ಕಾರ್ಯ, ಅನುಸರಿಸಿದ ಆಚಾರ, ವಿಚಾರ, ನೀಡಿದ ನೀತಿ, ರೀತಿ, ಹಾಯ್ದ ಹಾದಿ ಮಾತ್ರ ಗಣನೆಗೆ ಬರುತ್ತದೆ. ಮನುಷ್ಯ ಹುಟ್ಟು ವಾಗ ಎಲ್ಲಾ ಪ್ರಾಣಿಗಳಂತೆ ಹುಟ್ಟುತ್ತಾನೆ. ಆದರೆ ಬಾಳುವಾಗ ಪ್ರಾಣಿಗಳಿ ಗಿಂತ ಭಿನ್ನವಾಗಿ ಬಾಳುತ್ತಾನೆ. ಭಗವಂತನಿತ್ತ ಬುದ್ಧಿಯಿಂದ, ಚಿಂತನಾಶಕ್ತಿ ಯಿಂದ ಪ್ರಾಣಿಗಳಿಗಿಂತ ಮೇಲೇರುತ್ತಾನೆ. ಈ ವಿರುವಿಕೆಯಲ್ಲಿ ಆತ ಮಾನ ವನಾಗಿ, ದೇವಮಾನವನ ಸ್ಥಾನಕ್ಕೇರುವ ಅವಕಾಶವಿದೆ. ಹಾಗೂ ಪ್ರಪಾ ತಕ್ಕೆ ಬಿದ್ದು ರಾಕ್ಷಸನಾಗಲೂ ಸಾಧ್ಯವಿದೆ. ಇವೆರಡರ ಅಂತರವೇ ಜೀವನ ರಹಸ್ಯ. ಈ ರಹಸ್ಯವನ್ನರಿಯುವುದೇ ಮಾನವತೆ.

ತನ್ನನ್ನು ಪರರಲ್ಲಿ ಕಾಣುವುದು ಮಾನವ ಗುಣ. ಹೃದಯ ತೆರೆದಾಗ ಈ ವಿಚಾರ ಅರ್ಥವಾಗುತ್ತದೆ. ಇಲ್ಲದಿದ್ದರೆ ಎಲ್ಲವೂ ಅನರ್ಥವೇ. ಇಂದಿನ ಸಮಾಜದಲ್ಲಿ ಏಕೆ ಪ್ರತಿ ವ್ಯಕ್ತಿಯಲ್ಲೂ ತಾನೇ ತಾನಾಗಿ ಮೆರೆಯುತ್ತಿರುವ

Sri Vidyabharathi Book Centre, Sringeri

CC-O. In Public Domain. Digitized by eGangotri

ಈರ್ಷೆ, ಅಸೂಯೆ, ಸ್ವಾರ್ಥ, ದುರಾಲೋಚನೆ, ಅನಾಚಾರ, ಅನೀತಿಗಳಿಲ್ಲವೂ ಈ ಹೃದಯದ ಕದ ತೆರೆಯದ್ದರಿಂದಲೇ ಎಂದು ಅನುಭವವಾಗುತ್ತಿದೆ. ಈ ಸ್ವೇಚ್ಛಾಚಾರಿ ಪ್ರಾಣಿಗುಣಗಳೇ ಇಂದು ಎಲ್ಲರಲ್ಲೂ ಹೆಡೆಯೆತ್ತಿ ಬುಸುಗುಟ್ಟುತ್ತಿರುವುದೇ ಇಂದಿನ ನಮ್ಮ ಅವನತಿಗೆ ಕಾರಣ. ಹೃದಯ ತೆರೆದವನಲ್ಲಿ ಸತ್ಯದ ಬೆಳಕಿರುತ್ತದೆ. ಆ ಬೆಳಕಿರುವಲ್ಲಿ ಆತನು ಎಲ್ಲರನ್ನೂ ತನ್ನಂತೆ ಕಾಣುತ್ತಾನೆ. ಸಂತೋಷ, ಸುಖ, ಶಾಂತಿ ಇತರರಲ್ಲಿ ಕಂಡು, ತಾನೂ ಸಂತೋಷಪಡುತ್ತಾನೆ. ತನ್ನ ಸಂತೋಷವನ್ನು ಇತರರಲ್ಲಿ ಹಂಚಿಕೊಳ್ಳುತ್ತಾನೆ. ಆ ಸಂತೋಷ ನಿಜಕ್ಕೂ ಹೆಚ್ಚಿನದೂ ಶಾಶ್ವತವಾದದೂ ಆಗಿ, ಇತರರೂ ಅದರಲ್ಲಿ ಪಾಲ್ಗೊಳ್ಳುವಂತಾಗುತ್ತದೆ.

ಇಷ್ಟೆಲ್ಲಾ ಏಕೆ ಹೇಳಿದೆನೆಂದರೆ ನನ್ನ ಅಕ್ಕ ಅಂತಹ ಸಾಧ್ವಿಮಣಿ, ತಮ್ಮನಮೇಲೆಯೇ ಪ್ರೀತಿ, ವಿಶ್ವಾಸವಲ್ಲ, ಮನುಷ್ಯ, ಪ್ರಾಣಿ, ಎಲ್ಲದರಲ್ಲೂ ತನ್ನ ನಿಷ್ಕಳಂಕ ಪ್ರೇಮದಿಂದ ಆದರಿಸುತ್ತಿದ್ದಳು. ಆಕೆಯ ನಡೆ, ನುಡಿ, ಆಚಾರ ವಿಚಾರ ಎಲ್ಲರನ್ನೂ ದಂಗುಪಡಿಸಿತ್ತು. ಅಷ್ಟೇನೂ ವಿದ್ಯಾವಂತಳಾಗಿರದಿದ್ದರೂ ಒಳ್ಳೆಯದು, ಕೆಟ್ಟದ್ದು ಎಂದು ಅರಿಯುವ ಶಕ್ತಿಯಿದ್ದ ಆಕೆ ಎಲ್ಲರಿಗೂ ಆದರ್ಶಪ್ರಾಯಳಾಗಿದ್ದಳು. ಮಾನವತೆಯ ಸಾಕಾರಮೂರ್ತಿಯಾಗಿದ್ದಳು. ಆಕ್ಕನ ಅಕಾಲ ಮರಣದಿಂದ ನನ್ನ ಜಂಘಾಬಲವೇ ಉಡುಗಿತ್ತು. ನನ್ನಲ್ಲಿ ಯಾವುದೇ ಪ್ರೇರಕ ಶಕ್ತಿಯಿರಲಿಲ್ಲ. ನಾನು ನೀರಿನಿಂದ ತೆಗೆದ ಮೀನಿನಂತಾಗಿದ್ದೆನು. ನನ್ನ ಶಕ್ತಿಯು ಕೂಡ ಈ ಆಘಾತದಿಂದ ಮೂಲೆ ಹಿಡಿದಿದ್ದಳು. ಇದ್ದ ಒಬ್ಬನೇ ಮಗನು ತಬ್ಬಲಿಯಂತಾಗಿದ್ದನು. ಕಾರಣ, ಅಕ್ಕನನ್ನು ನೆಚ್ಚಿಕೊಂಡಿದ್ದ ಮಗು ಇಂದು ಅನಾಥವಾಗಿತ್ತು. ಹೆಸರಿಗೆ ನಾವು ತಂದೆ ತಾಯಿಗಳಾಗಿದ್ದರೂ, ನಿಜವಾದ ತಾಯಿ ನನ್ನ ಅಕ್ಕನೇ ಆಗಿದ್ದಳು.

ಇದರಿಂದ ನನ್ನ ಮನಸ್ಸು ಮತ್ತಷ್ಟು ಮುದುಡಿಕೊಂಡು, ಯಾವುದೇ ಚಟುವಟಿಕೆಗಳಲ್ಲಿ ಭಾಗವಹಿಸದಂತಾಗಿತ್ತು. ಮನಸ್ಸಿಗಾದ ಆಘಾತದಿಂದ ನನ್ನ ಜೀವನವೇ ಸಪ್ಪೆಯೆನಿಸುತ್ತಿತ್ತು. ಹೀಗಿರುವಲ್ಲಿ ಮತ್ತೊಂದು ಮರುಕಪಡುವಂತಹ ಘಟನೆ, ನನ್ನ ಮನಸ್ಸನ್ನು ಮತ್ತೂ ಜಿಗುಪ್ಸೆಗೊಳಿಸಿತು.

ಕುರುಬರಲ್ಲಿ ತಂತ್ರ, ಮಂತ್ರ ಪ್ರವೀಣತೆಯಿದೆಯೆಂದು ನಾನು ಕೆಲವು ಘಟನೆಗಳನ್ನು ಈ ಮೊದಲೇ ವಿವರಿಸಿದ್ದೇನೆ. ಈ ಕುಟಿಲ ವಿದ್ಯೆಯನ್ನು ಅವರಿಗೆ ಆದಾರು ಕಲಿಸಿದರೋ ತಿಳಿಯದು ಅಥವಾ ಈ ವಿದ್ಯೆ ಅವರಿಗೆ ತಲೆಮಾರಿನಿಂದ ಹರಿದು ಬಂದಿದೆಯೋ ತಿಳಿಯದು.

Sri Vidyabharathi Book Centre, Sringeri

CC-O. In Public Domain. Digitized by eGangotri

ಒಮ್ಮೆ ನನ್ನ ರೇಂಜಿನ ಪೂರ್ವಗಡಿಯಲ್ಲಿದ್ದ ಕುರುಬರ 'ಪಾಡಿ'ಯಲ್ಲಿ ತಂತ್ರಗಾರನೆಂದು ಹೆಸರು ಪಡೆದ ಆವರ ಮುಖಿಂಡನ ಮಗಳು ಗರ್ಭಿಣಿಯಾಗಿದ್ದಳು. ಅವಿವಾಹಿತ ಕನ್ಯೆ ಗರ್ಭಿಣಿಯೆಂದರೆ ಯಾವ ಸಮಾಜವೂ ಸಹಿಸದು. ತನಗಿದ್ದ ಒಬ್ಬ ಮಗಳು ಒಬ್ಬ ಮಗನಿಗಾಗಿ ಎಂತಹ ಬಲಿದಾನ ಮಾಡಲೂ ಹಿಂಜರಿಯುತ್ತಿದ್ದಿಲ್ಲ. ಇದ್ದ ಮಗನು ವಯಸ್ಸಿಗೆ ಬರುವ ಮೊದಲೇ ಕಾಲವಾದ್ದರಿಂದ, ಮಗಳನ್ನೇ ನೆಚ್ಚಿಕೊಂಡು ಜೀವಿಸುತ್ತಿದ್ದ ಈತನಿಗೆ ಈ ಕುತ್ತು ಸಹಿಸಲಾಗಲಿಲ್ಲ.

ಯುವತಿಯ ಪ್ರೇಮಿಯು ಮತ್ತೊಂದು ಗುಂಪಿನವನಾಗಿದ್ದು, ಆತನಿಗೆ ಪತ್ನಿ ಮತ್ತಿಬ್ಬರು ಮಕ್ಕಳಿದ್ದು, ಏನೂ ಅರಿಯದ ಈ ಕನ್ಯೆಯು ಆತನ ಬಲೆಗೆ ಬಿದ್ದಿದ್ದಳು. ಮದುವೆಯಾಗದಿದ್ದರೆ ಹೇಗಾದರೂ ಪುಸಲಾಯಿಸಿ ತಂದು ತನ್ನ 'ಹಾಡಿ'ಯಲ್ಲೇ ಇರುವಂತೆ ಮಾಡುವ ಮನಸ್ಸು ತಂದೆಗಿತ್ತು. ಆದರೆ, ಆತ ಕುತಂತ್ರದಿಂದ ತನ್ನ ಮಗಳಿಗೆ ಮೋಸಮಾಡಿ ನಡು ಹೊಳೆಯಲ್ಲಿ ಕೈಬಿಟ್ಟದ್ದು ಸಹಿಸುವಂತಾದ್ದಾಗಿರಲಿಲ್ಲ.

ನಾನು ಹುಡುಗನ ಪಾಡಿಗೆ ಹೋದಾಗ ಮಧ್ಯಾಹ್ನ ಕಳೆದಿತ್ತು. ನನ್ನೊಡನೆ ಗ್ಯಾಂಗ್‌ಮ್ಯಾನ್ ಹಾಗೂ ಮತ್ತಿಬ್ಬರು ಕುರುಬರಿದ್ದರು. ಕನ್ಯೆಯ ಶೀಲ ಅಪಹರಣ ಮಾಡಿದಾತನ ಪಾಡಿ, ಗುಂಪು ಪಾಡಿಗಳ ಮಧ್ಯ ಭಾಗದಲ್ಲಿತ್ತು. ನಾವು ಪಾಡಿಯ ಮುಂದೆ ನಿಂತಾಗ, ಪಾಡಿಯಲ್ಲಿ ಯಾರೂ ಇದ್ದಂತಿರಲಿಲ್ಲ. ಅಪರಾಧಿಯು ತನ್ನ ಕುರುಬತಿ ಮಕ್ಕಳನ್ನು ಬಿಟ್ಟು ತಲೆ ಮರೆಸಿಕೊಂಡಿದ್ದನು.

ಪಾಡಿಯ ಸುತ್ತು ವೀಕ್ಷಿಸುತ್ತಿದ್ದಾಗ, ಎಡಭಾಗದಲ್ಲಿ ಬೆಳೆದಿದ್ದ ಮರದ ಕೊಂಬೆ ಲಟಕ್ಕನೆ ಮುರಿದು ರೊಯ್ಯನೆ ಬಂದು ನಮ್ಮ ಮುಂದೆಯೇ ಬಿದ್ದಿತು. ಗಾಬರಿಗೊಂಡ ನಾವು ಅತ್ತಿತ್ತ ಜದುರಿದೆವು. ಅದೇ ವೇಳೆಗೆ ಹಾಡಿಯೊಳಗೆ ಲಟಪಟನೆ ಶಬ್ದವಾಗುತ್ತಿತ್ತು. ಐದು ಕಂಬಗಳಿಂದ ಕಟ್ಟಲ್ಪಟ್ಟಿದ್ದ ಆ ಪಾಡಿಗೆ ಬಿದಿರುಗಳನ್ನು ಸೀಳಿ, ಜಡೆದು, ಸುತ್ತ ಗೋಡೆಯಂತೆ ನಿಲ್ಲಿಸಿ, ಮಣ್ಣು ಮೆತ್ತಿ ಹುಲ್ಲು ಹೊದಿಸಿತ್ತು. 'ಲಟಪಟಾ' ಎಂಬ ಶಬ್ದದಿಂದ ಆ ಪಾಡಿಯ ಕಂಬಗಳೇ ಕುಸಿದು ಬೀಳುವಂತೆ ಅಲುಗಾಡುತ್ತಿತ್ತು. ಪಾಡಿಯೊಳಗೆ ಯಾರೋ ನೆಡುಗಂಬವನ್ನು ಅಲುಗಾಡಿಸುತ್ತಿರಬೇಕೆಂದು ನಾನು ಪಾಡಿಯೊಳಗೆ ಬಗ್ಗಿ ನೋಡಿದೆ. ಅಲ್ಲಿ ಯಾರೂ ಇರಲಿಲ್ಲ. ಆದರೆ ಪಾಡಿಯೊಳಗೆ ಇಲ್ಲದ ರಂಪಗಳೆಯೆದ್ದಿತ್ತು. ಆ ಪಾಡಿಯು ಸುತ್ತುಮುತ್ತು

Sri Vidyabharathi Book Centre, Sringeri

CC-O. In Public Domain. Digitized by eGangotri

ಐದಾರು ಪಾಡಿಗಳಿದ್ದು, ಅವುಗಳಲ್ಲಿ ಬೇರೆ ಬೇರೆ ಕುರುಬರ ಸಂಸಾರ ಜೀವಿಸುತ್ತಿದ್ದವು. ನಾನು ಹೋದಾಗ ಅವರೆಲ್ಲರೂ ಬಂದು ನಮ್ಮ ಸುತ್ತ ನೆರೆದು, ಆ ಪಾಡಿಯಲ್ಲಿ ಎಡೆಬಿಡದೆ ನಡೆಯುತ್ತಿದ್ದ ವಿಚಾರಗಳನ್ನು ಹೇಳುತ್ತಿದ್ದರು. ಹೀಗೆ ಮಾತಾಡುತ್ತಿದ್ದಾಗಲೇ ಎಲ್ಲಿಂದಲೋ ಕಲ್ಲುಗಳು ಆ ಗುಡಿಸಿಲಿನ ಮೇಲೆ ಬೀಳುತ್ತಿದ್ದವು. ಆದರೆ, ಆ ಕಲ್ಲುಗಳು ಇತರ ಪಾಡಿಗಳ ಮೇಲೆ ಬೀಳದೆ, ಬರೇ ಆ 'ಪಾಡಿ'ಯನ್ನೇ ಕೇಂದ್ರವಾಗಿಟ್ಟುಕೊಂಡು ಹೊಡೆದಂತೆ ಬರುತ್ತಿದ್ದವು. ಹೀಗೆ ಐದಾರು ದಿವಸಗಳಿಂದ ನಡೆಯುತ್ತಿದೆ ಎಂದು ಕುರುಬರು ಹೇಳಿದರು. ಹೀಗೆ ಹೇಳತೊಡಗಿದ್ದಾಗಲೇ ಎಲ್ಲಿಂದಲೋ ಕಲ್ಲುಗಳು ಆ ಗುಡಿಸಿಲಿನ ಮೇಲೆ ಬೀಳಲುಪಕ್ರಮಿಸಿದವು. ಆದರೆ ಆ ಕಲ್ಲುಗಳು ಬೇರೆ ಮತ್ತಿತರ 'ಪಾಡಿ'ಗಳ ಮೇಲೆ ಬೀಳದೆ, ಎಲ್ಲಿಂದ ಬರುತ್ತಿವೆಯೆಂದು ತಿಳಿಯಲು ನನ್ನಿಂದ ಸಾಧ್ಯವಾಗಲಿಲ್ಲ. ನಾನು ಈ ಕಾಣದ ಶಕ್ತಿಯ ಕೈವಾಡದ ಮುಂದೆ ಹೋರಾಡಲು ಹೋಗಿರಲಿಲ್ಲ. ಬದಲು ಅದಕ್ಕೆ ಕಾರಣವೇನೆಂದು, ಹಿನ್ನೆಲೆಯನ್ನು ತಿಳಿಯಲು ಹೋಗಿದ್ದೆನು.

ಯುವತಿಯ ತಂದೆಗೆ, ಇದ್ದ ಒಬ್ಬಳೇ ಮಗಳನ್ನು ಬಿಡಲು ಮನಸ್ಸಿರಲಿಲ್ಲ. ಆದರೆ, ಆ ಗುಂಪಿನ ಬೇರೆ ಕುರುಬರು ಆವಿವಾಹಿತೆ ಗರ್ಭಧರಿಸಿದ್ದಕ್ಕೆ ತಂದೆಯಿಂದ ತಪ್ಪು ಹಣ ಪಡೆದು ತಂದೆ ಮತ್ತು ಆಕೆಯನ್ನು ಬಹಿಷ್ಕರಿಸಲು ತೀರ್ಮಾನಿಸಿದ್ದರು. ಆದರೆ ತಂದೆ ಮಗಳ ಪ್ರೇಮಕ್ಕಾಗಿ ಈ ಕುರುಬರ ಮಾತಿಗೆ ಸೊಪ್ಪು ಹಾಕಲಿಲ್ಲ ಮತ್ತು ಆಕೆಯನ್ನು ತನ್ನ 'ಪಾಡಿ'ನಲ್ಲೇ ಇಟ್ಟುಕೊಂಡಿದ್ದನು. ಮುದುಕನಾದ ತಂದೆಗೆ ಯಾರದೇ ಆಶ್ರಯವಿಲ್ಲದ್ದರಿಂದ ಮಗಳು ತಂದೆಗೆ ಬೆಂಬಲವಾಗಿಯೇ ನಿಂತಳು.

ಈ ತನ್ನ ಸಮಾಜದ ಕಣ್ಣಲ್ಲಿ ಅವಮಾನಿತನಾಗಿ, ಬಹಿಷ್ಕರಿಸಲ್ಪಟ್ಟು ದೂರವಿದ್ದ ಮುದುಕ ತಂದೆ ತನ್ನ ವಿದ್ಯೆಯನ್ನು ಪ್ರಯೋಗಿಸಿದ್ದನು. ಆತನ 'ಪಾಡಿ'ಗೆ ಕಲ್ಲುಗಳು, ಬೀಳುವಿಕೆ, ಗುಡಿಸಿಲೇ ಬೀಳುವಂತೆ ಅಲುಗಾಡುವಿಕೆಯೆಲ್ಲಾ ಈತನ ತಂತ್ರ ಮಂತ್ರಶಕ್ತಿಯದ್ದೆಂದು ನನಗೆ ಆಗ ವೇದ್ಯವಾಯಿತು. ಯಾವಾಗಲೂ ಈ ರೀತಿಯ ರಂಪ ರಗಳೆಗೆ ಹೆದರಿದ ಈ ಕುರುಬರ ಗುಂಪು ಆಲ್ಲಿಂದ ಬೇರೆಡೆ ವಸತಿ ಹೂಡುವ ಸಲಹೆಯಿತ್ತರು. ಆ ಜಾಗದಲ್ಲಿ ಯಾರಿಗೂ ಇರಲು ಧೈರ್ಯ ಬರುತ್ತಿರಲಿಲ್ಲ. ಹೇಗಾದರೂ ಮಾಡಿ ಆ ಮೋಸಮಾಡಿದ ಯುವಕನನ್ನು ಕಂಡುಹಿಡಿದು, ರಾಜಿ ಮಾಡಿ ಇಬ್ಬರು ಹೆಂಡಿರನ್ನು ಸಾಕುವಂತೆ ಮಾಡಲು, ನಾನು ಇಚ್ಛಿಸಿದ್ದೆ. ಅದಕ್ಕಾಗಿ ಆತ

Sri Vidyabharathi Book Centre, Sringeri

CC-O. In Public Domain. Digitized by eGangotri

ನೆಲ್ಲಿರುವನೆಂದು ಕಂಡುಹಿಡಿಯಲು ಕುರುಬರಿಗೆಲ್ಲಾ ಹೇಳಿದೆ. ಆದರೂ, ಆತನೆಲ್ಲಿರುವನೆಂದು ಯಾರಿಗೂ ತಿಳಿದುಬರಲಿಲ್ಲ. ಆತನು ಹೆಂಡತಿ ಮತ್ತು ಮಕ್ಕಳನ್ನು ಬಿಟ್ಟು ಐದಾರು ದಿವಸದಿಂದ ಕಾಣೆಯಾದವನ ಸುಳಿವು ದೊರಕಲಿಲ್ಲ. ಹೆಂಡತಿ ಮಕ್ಕಳು ಅವಳ ತಾಯಿಯ ಪಾಡಿಯಲ್ಲಿ ಹೋಗಿದ್ದು, ಅಲ್ಲೆ ನೆಲಸಿದ್ದರು. ಅವರ ಪಾಡಿಯಲ್ಲಿ ಆಗುತ್ತಿರುವ ರಂಪ ರಗಳೆ, ಕಲ್ಲು ತೂರಾಟದಿಂದ ಹೆದರಿದ ಕುರುಬತಿ, ತಾಯಿಯ ಆಶ್ರಯಕ್ಕೆ ಬಂದಿದ್ದಳು.

ಕೆಲವು ದಿವಸಗಳು ಕಳೆದವು. ಕುರುಬರೆಲ್ಲಾ ಹೊಳೆಯ ದಡದಲ್ಲಿ ತಮ್ಮ ಹೊಸ ವಸತಿಯನ್ನು ಹೂಡಿದರು. ಅಪ್ಪರಲ್ಲಿ ಒಂದು ದಿವಸ ಒಬ್ಬ ಕುರುಬ ನನ್ನ ಹತ್ತಿರ ಬಂದು ಒಂದು ಮರದ ಬುಡದಲ್ಲಿ, ಆ ಯುವತಿಯನ್ನು ಕೆಡಿಸಿದ ಯುವಕನ ಕಳೇಬರಹವು ಬಿದ್ದಿದೆಯೆಂದು ಹೇಳಿದ.

ನಾನು ಅಲ್ಲಿಗೆ ಹೋಗಿ ನೋಡಿದಾಗ ಆತನ ದೇಹವು ಕಾಡುಪ್ರಾಣಿಗಳಿಂದ ತಿನ್ನಲ್ಪಟ್ಟಿತ್ತು. ಆತನ ಅಸ್ತಿಪಂಜರವೂ ಕೂಡ ಚೆಲ್ಲಾಪಿಲ್ಲಿಯಾಗಿದ್ದವು. ಆತನು ಉಟ್ಟಿದ್ದ ಬಟ್ಟೆಯಿಂದ ಆತನೇ ಎಂದು ಕುರುಬರು ಹೇಳಿದರು.

ಇದೆಂತಹ ಭೀಕರ ಶಿಕ್ಷೆ ? ಆ ಯುವತಿಯ ತಂದೆಯ ಮಂತ್ರ ಆ ತಂತ್ರ ಶಕ್ತಿಯ ಆಳನೀಳವೇನು ? ಯುವಕನನ್ನು ಸಂಹರಿಸಿದ ಶಕ್ತಿಯಾವುದು ?

ಯುವಕನ ಗುಂಪಿನವರು ಹೊಳೆ ದಡಕ್ಕೆ ಬಂದು ವಸತಿ ಹೂಡಿದರೂ ಕೂಡ, ಹಳೆಯ ವಸತಿಯಲ್ಲಿ ಕೆಲವು ದಿವಸಗಳ ಮಟ್ಟಿಗೆ ಕಲ್ಲು ಬೀಳುವುದು, ಗುಡಿಸಿಲು ಅಲುಗುವುದು ನಡೆಯುತ್ತಿತ್ತಂತೆ. ಆ ಯುವಕನು ಪ್ರಾಣ ತೆತ್ತರೂ ಕೂಡ, ಶಮನವಾಗದ ಆ ಶಕ್ತಿಯ ಪ್ರಭಾವವೇಸು ?

ಹೊಳೆಯ ದಡದಲ್ಲಿ ವಸತಿ ಹೂಡಿದ ಒಂದು ಗುಂಪಿನ ಕುರುಬರಿಗೆ ಒಂದು ಬಿಡುಗಡೆ ದೊರಕಿದಂತಾಗಿತ್ತು. ಹೊಳೆ ಹತ್ತಿರವಿದ್ದುದರಿಂದ ಅವರಿಗೆ ನೀರಿನ ತೊಂದರೆಯೇ ಇಲ್ಲದಂತಾಯಿತು. ಬೇಸಿಗೆಯಾದ್ದರಿಂದ ಹೊಳೆಯಲ್ಲಿ ನೀರು ಕಡಿಮೆಯಿದ್ದುದರಿಂದ ಹೊಳೆಯ ಮರಳನ್ನು ತೋಡಿ, ಹೊಂಡ ಮಾಡಿದ್ದರು. ಬೇಸಿಗೆಯಲ್ಲಿ ಹೊಳೆಯಲ್ಲಿ ತೆಳುವಾಗಿ ಹರಿವ ನೀರು ಆನೆಗಳಿಂದ ಕಲುಷಿತವಾಗುತ್ತಿದ್ದುದರಿಂದ, ಒಂದು ಹೊಂಡ ತೋಡುವುದು ಅನಿವಾರ್ಯವಾಗಿತ್ತು.

ಒಂದು ದಿವಸವಿಡೀ ಸುಮಾರು ಇಪ್ಪತ್ತು ಜನರು ತೋಡಿದ್ದ ಹೊಂಡದಲ್ಲಿ ಕಡಿಮೆ ಪಕ್ಷ ಸಾವಿರ ಜನರಿಗೆ ದಿನವಹಿ ಬೇಕಾಗುವಷ್ಟು ನೀರಿತ್ತು.

Sri Vidyabharathi Book Centre, Sringeri

CC-O. In Public Domain. Digitized by eGangotri

ಒಂದು ರಾತ್ರಿ ಅದೆಲ್ಲಿಂದಲೋ ಒಂದು ಆನೆಯು ಹಿಂಡು, ಆ ನೀರಿನಾಸೆಗೆ ಧಾಳಿಯಿಟ್ಟು. ಒಂದು ದಿನವಿಡೀ ಇಪ್ಪತ್ತು ಜನ ಕೆಲಸ ಮಾಡಿದ್ದನ್ನು ಹಾಳು ಗೆಡವಿದ್ದವು. ಆಶ್ಚರ್ಯವೆಂದರೆ, ಆ ಹೊಂಡದಲ್ಲಿ ಸುಮಾರು ಎರಡು ತಿಂಗಳ ಒಂದು ಆನೆ ಮರಿಯು ಹೂತು ಹೋಗಿತ್ತು. ಸುತ್ತಲೂ ತೋಡಿ ಹಾಕಿದ್ದ ಮರಳು ಆನೆಯ ಮರಿಯನ್ನು ಅರ್ಧ ಹೂತು, ಅದಕ್ಕೆ ಅಲ್ಲಿಂದ ಏಳಲಾರದಂತಾಗಿತ್ತು. ಆನೆಗಳ ಕಾಲು ತುಳಿತದಿಂದ ಮರಳು ಜಾರಿ ಗುಂಡಿಯೊಳಕ್ಕೆ ಬಿದ್ದುದರಿಂದ ಅದರ ಅರ್ಧ ಶರೀರ ಮುಚ್ಚಿತ್ತು. ಆದರೂ ಅದು ಸತ್ತಿರಲಿಲ್ಲ. ರಾತ್ರಿಯಿಡೀ ಆನೆಗಳು ಘೀಳಿಡುತ್ತಿದ್ದುದನ್ನು ಕುರುಬರು ಕೇಳಿದುದಾಗಿ ಹೇಳುತ್ತಿದ್ದರು. ವನ್ಯ ಪ್ರಾಣಿಗಳಿಗೆ ಬೇಸಿಗೆಯಲ್ಲಿ ಆಹಾರಕ್ಕಿಂತ ನೀರೆ ಮುಖ್ಯ. ನೀರಿಗಾಗಿ ಪ್ರಾಣಿಗಳು ಮೈಲುಗಟ್ಟಲೆ ನಡೆದು ಹೋಗುತ್ತವೆ.

ಬೆಳಿಗ್ಗೆ ಈ ವಿಚಾರ ಗೊತ್ತಿಲ್ಲದ ಕುರುಬರ ಹೆಂಗಸರು ಈ ಹೊಂಡಕ್ಕೆ ಹೋದಾಗ ಆನೆ ಮರಿಯು ಹೂತು ಹೋದದ್ದು ತಿಳಿಯಿತು. ಕುರುಬರೆಲ್ಲ ಸೇರಿ, ಅದನ್ನು ಬಂಧನದಿಂದ ಪಾರುಮಾಡಲು ಪ್ರಯತ್ನಿಸಿದರು. ಹೇಗೊ ಆನೆ ಮರಿಯನ್ನು ಹೊರಗೆ ತೆಗದು ಬಿಟ್ಟಾಗ ಅದು ಕುಂಟುತ್ತಿತ್ತು, ಯಾವುದೋ ಬಲಿಷ್ಠ ಆನೆಯ ಕಾಲು ತುಳಿತಕ್ಕೆ ಸಿಕ್ಕಿ ಹಾಗಾಗಿರಬಹುದೆಂದು ಊಹಿಸಿ ತಮ್ಮ ಹೊಂಡವನ್ನು ದುರಸ್ತಿ ಮಾಡುವ ಕೆಲಸದಲ್ಲಿ ನಿರತರಾದರು.

ಆದರೆ, ಈ ಸಂದರ್ಭದಲ್ಲಿ ಆ ತಾಯಿ ಆನೆಯು ಅದೆಲ್ಲಿತ್ತೋ ತಿಳಿಯದು. ಕುರುಬರ ಹಿಂಡು ಮತ್ತು ಆನೆ ಮರಿಯನ್ನು ಕಂಡ ಆನೆಯು ರೋಷಗೊಂಡು ಘೀಳಿಡುತ್ತಾ ಹೊಳೆಯ ಮತ್ತೊಂದು ದಂಡೆಯಿಂದ ಮುನ್ನುಗ್ಗಿತು. ಕುರುಬರು ಅಲ್ಲಿಂದ ಕಾಲ್ತೆಗೆದು ತಮ್ಮ ಮಕ್ಕಳು ಮರಿ ಸಹಿತ ಜೆಲ್ಲಾಪಿಲ್ಲಿಯಾಗಿ ಓಡಿ ಮಾಯವಾದರು.

ಆನೆಯು ಬಂದು ಮರಿಯನ್ನು ಮೂಸಿ ಅದರ ಮೈ ದಡವಿ, ತನ್ನ ಸೊಂಡಿಲಿನ ಸಹಾಯದಿಂದ ಅದನ್ನು ಮುನ್ನೆಡೆಸುತ್ತಾ ನಡೆಯಿತು. ಹೊಳೆಯಿಂದ ದಡವೇರಲು ಸಾಧ್ಯವಾಗದ ಮರಿಯನ್ನು ತನ್ನ ಸೊಂಡಿಲಿನಿಂದ ಬಳಸಿ, ಎತ್ತಿ ಕಾಡೊಳಗೆ ಹೋದಾಗ ಕುರುಬರು ನಿಟ್ಟುಸಿರು ಬಿಟ್ಟರು.

ಆನೆಯಿಂದ ನಡೆಯಬೇಕಿದ್ದ ದುರಂತ ಅಂದೇ ಬೆಂಕಿಯಿವ ನಡೆದು ಹೋಯಿತು. ನಾನು ಆಗಲೇ ಹೇಳಿದಂತೆ,ಬೇಸಿಗೆ ಕಾಲದಲ್ಲಿ ಅರಣ್ಯದಲ್ಲಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಬೆಂಕಿ ತನ್ನಿಂದ ತಾನೆ ಉತ್ಪತ್ತಿಯಾಗುತ್ತದೆ. ನೆಲ್ಲಿಕಾಯಿಯ ಬೀಜಗಳು ಕಾದ ಬಂಡೆಯ ಮೇಲೆ ಸಿಡಿದಾಗ ಅದರಲ್ಲಿ ಬೆಂಕಿಯ ಕಿಡಿ ಉತ್ಪತ್ತಿಯಾಗಿ ಹತ್ತಿರದ ಹುಲ್ಲುಗಳಿಗೆ ಹತ್ತಿಕೊಳ್ಳುತ್ತದೆ. ಅರಣ್ಯ ಇಲಾಖೆಯವರು ಅದೆಷ್ಟೇ ಪ್ರಯತ್ನಿಸಿದರೂ, ಅರಣ್ಯವನ್ನು ಬೆಂಕಿಯಿಂದ ರಕ್ಷಿಸುವುದು ಸುಲಭ ಸಾಧ್ಯವಲ್ಲ. ಬೆಂಕಿ ದಾರಿಗಳನ್ನು ಮಾಡಿ (Fire lines) ಮತ್ತು ಜಾಗರೂಕರಾದ ಸಿಬ್ಬಂದಿಗಳನ್ನು ನೇಮ ಮಾಡಿದರೂ ಕೈಮೀರಿದ ಅವಘಡಗಳು ತಾನೇ ತಾನಾಗಿ ನಡೆದು ಹೋಗುತ್ತವೆ.

ಅರಣ್ಯಕ್ಕೆ ಬೆಂಕಿ ಬಿದ್ದಾಗ ಮೈಲುಗಟ್ಟಲೆ ಹೊಗೆಯ ವಾತಾವರಣ ಕವಿದಿರುತ್ತದೆ. ಅನೇಕ ತರಹದ ಪ್ರಾಣಿ ಪಕ್ಷಿಗಳು ಬೇಯುತ್ತಿರುವ ಕಾಡನ್ನು ಬಿಟ್ಟು ಹಾರುತ್ತವೆ. ಕಾಡಿನಲ್ಲಿ ವಾಸಿಸುವ ಎಲ್ಲಾ ಪ್ರಾಣಿಗಳು ಸುರಕ್ಷಿತ ಸ್ಥಳಕ್ಕಾಗಿ ಅಲೆದಾಡುತ್ತವೆ. ಅದರಲ್ಲೂ ಆನೆಗಳ ಹಿಂಡುಗಳು ಬೆಂಕಿಯೆಂದರೆ ಗಾವುದ ದೂರ ಸರಿದೋಡುತ್ತವೆ. ಇವುಗಳನ್ನೆಲ್ಲಾ ಸೂಕ್ಷ್ಮವಾಗಿ ಪರೀಕ್ಷಿಸಿದರೆ ಎಲ್ಲೋ ಬೆಂಕಿ ಬಿದ್ದಿದೆಯೆಂದು ತಿಳಿದು, ಬೆಂಕಿ ಮತ್ತೂ ಹರಡದಂತೆ ಮುನ್ನೆಚ್ಚರಿಕೆ ವಹಿಸುತ್ತಾರೆ.

ಆನೆಗಳು ಹೋಡ ಮುಚ್ಚಿದ ದಿನವೇ ನಾನು ಕುರುಬರ ವಸತಿಗೆ ಹೋಗಿದ್ದೆ. ಆನೆ ಮರಿಯ ಕತೆಯನ್ನು ಕುರುಬರು ಹೇಳಿದರು. ಹೊಳೆಯಲ್ಲಿ ಗುಂಪು ಆನೆಗಳ ಹೆಜ್ಜೆಗಳನ್ನು ಕಂಡ ನಾನು, ಎಲ್ಲಿಯೋ ಬೆಂಕಿ ಬಿದ್ದಿದೆಯೆಂದು ತಿಳಿದು ಅದಕ್ಕೆ ಬೇಕಾದ ನಿವಾರಣೋಪಾಯಗಳನ್ನು ಕುರುಬರಿಗೆ ಸೂಚಿಸಿದೆ.

ಅಂದು ರಾತ್ರಿ ಅದೆಲ್ಲಿಂದ ಬೆಂಕಿ ಬಂದಿತೋ ತಿಳಿಯದು. ಹೊಸದಾಗಿ ತಮ್ಮ ಪಾಡಿಗಳಿಗೆ ಹುಲ್ಲು ಹೊದೆಸಿದ್ದ ಮೂವತ್ತು ಜನರ ವಸತಿ ಭಸ್ಮವಾಗಿತ್ತು. ರಾತ್ರಿಕಾಲದಲ್ಲಿ ಕುರುಬರು ಬೆಂಕಿ ಹಾಕಿಕೊಂಡು ಹೊರ ಜಗಲಿಯಲ್ಲಿ ಮಲಗುವುದರಿಂದ ಆವರ ಜೀವಕ್ಕೇನೂ ತೊಂದರೆಯಾಗಲಿಲ್ಲ. ಆದರೆ, ಕಷ್ಟಪಟ್ಟು ಕಟ್ಟಿದ ಪಾಡಿಗಳು ನಿರ್ನಾಮವಾಗಿದ್ದವು. ಆದರೆ, ಯಾರೂ ಈ ಬೆಂಕಿಯ ದುರಂತಕ್ಕೆ ಸಿಕ್ಕಿ, ಸಾಯದಿದ್ದರಿಂದ ಸವಾಧಾನದ ಉಸಿರು ಬಿಟ್ಟೆ.

ನಾನು ಹದಿನೇಳು ವರ್ಷಗಳ ನನ್ನ ನೌಕರಿಗೆ ಹೃದಯ ಭಾರದಿಂದ ಶರಣು ಹೊಡೆದು, ಶಾಂತ ಜೀವನ ನಡೆಸಬೇಕೆಂದು ಕಾಡನ್ನು ಬಿಟ್ಟು ನಾಡಿಗೆ ಬಂದರೆ ಕಂಡದ್ದೇನು ? ರಕ್ತಪಿಪಾಸಿಗಳಾದ ಕ್ರೂರ ಹುಲಿ ಚಿರತೆಗಳು, ಸಿಕ್ಕಿ

Sri Vidyabharathi Book Centre, Sringeri

CC-O. In Public Domain. Digitized by eGangotri

ದ್ದನ್ನು ನಿಂತಲ್ಲೇ ನುಂಗುವ ಹೆಬ್ಬಾವುಗಳು, ಸಿಕ್ಕಿದ್ದನ್ನೆಲ್ಲಾ ಧ್ವಂಸ ಮಾಡಿ ತಮ್ಮ ಸ್ವಾರ್ಥ ಸಾಧಿಸುವ ವಿವಿಧ ಪ್ರಾಣಿಗಳು. ರಸ್ತೆಗಳಲ್ಲಿ ಆಧುನಿಕ ಮೆರಗಿನ ಬೂಟು, ಸೂಟುಗಳನ್ನು ಹಾಕಿ, ಮೆರೆಯುವುದನ್ನು ಕಂಡು, ಅರಣ್ಯವೇ ಈ ಆಧುನೀಕ ಪ್ರಪಂಚಕ್ಕಿಂತ ಮೇಲೆನಿಸಿತು. ಅರಣ್ಯದೊಡನೆ ಸಂಪರ್ಕ ವಿದ್ದು ಅಲ್ಲಿಯ ವನ್ಯ ಜಂತುಗಳೊಡನೆ, ಕಾಡಾಡಿಯಾಗಿದ್ದ ಕಾಡು ಕುರುಬರೊಡನೆ ನಾನು ರೂಢಿಸಿಕೊಂಡ ಪ್ರಕೃತಿದತ್ತವಾದ ಅಭ್ಯಾಸ, ಮಾತು, ಆಚಾರ, ವಿಚಾರಗಳೆಲ್ಲಾ ಇಲ್ಲಿ ಶೂನ್ಯವಾದಂತಾಗಿ, ನಾನು ಮನೆಯೊಳಗೆ ಹಗಲು ರಾತ್ರಿ ಬಂದೀಖಾನೆಯಲ್ಲಿದ್ದಂತೆ ಇರಬೇಕಾಯಿತು. ಹೊರಬಂದರೆ ನನ್ನಂತಹ ಕಾಡು ಮನುಷ್ಯನನ್ನು ಆಧರಿಸುವವರಾರು ? ಆಧುನಿಕ ಸಂಸ್ಕೃತಿಯ ಮೆರಗಿನ ಮೇರು ಪರ್ವತವನ್ನು ತುಳಿದ ಈ ಹೊಸ ಪೀಳಿಗೆಯಿಂದ ನಾನು ನಿಭಾಯಿಸಲಾರದಾದೆ.

ಅಂದು ನಾನು ಕಾಡು ಜೀವನವನ್ನು ಪ್ರೀತಿಸಿದೆ, ಕಾಡು ಪ್ರಾಣಿಗಳನ್ನು ಪ್ರೀತಿಸಿದೆ, ಕಾಡಾಡಿಯಾಗಿದ್ದ ಆ ಕಾಡುಕುರುಬರನ್ನು ಪ್ರೀತಿಸಿದೆ. ಅವರೆಲ್ಲಾ ನನ್ನ ಬಂಧುಗಳು, ನನ್ನ ಭಾಷೆ ಅವರಿಗರ್ಥವಾಗುತ್ತಿತ್ತು. ಅವರು ಏನೂ ಹೇಳಿದರೂ ಮಾಡಿದರೂ, ಅದು ನನಗರ್ಥವಾಗುತ್ತಿತ್ತು. ಆದರೆ, ಇಂದು ನೀರು ಬಿಟ್ಟ ಮೀನಿನಂತೆ ಈ ಆಧುನೀಕ ಪ್ರಪಂಚಕ್ಕೆ ಬಂದ ನನ್ನ ಭಾಷೆ, ಆಸೆ, ಅಭಿಲಾಷೆ ಯಾವುದನ್ನೂ ಅರ್ಥ ಮಾಡಿಕೊಳ್ಳದ ಪೀಳಿಗೆ ಯೊಡನೆ ಬದುಕುವುದಾದೂ ಹೇಗೆ ?

ನಾಡಿಗೆ ಬಂದ ಕೂಡಲೇ ನನ್ನ ಒಬ್ಬನೇ ಮಗ ಪರಿಸರದ ಆಧುನೀಕತೆಗೆ ಹೊಂದಿಕೊಳ್ಳದಂತಾಗಿ, ಮೂಲೆ ಹಿಡಿದು ಕೂತ. ಆತನನ್ನು ಶಾಲೆಗೆ ಸೇರಿಸುವ ಭಾರ ನನ್ನದಾಗಿತ್ತು. ಶಾಲೆಗೆ ಸೇರಿಸಿದ ಮೇಲೆ ಆತ, ಏಕೋ ದಿನ ಕಳೆದಂತೆ ಬಡಕಲಾಗುತ್ತಿದ್ದ. ಅಂದಿನ ಕಾಲದ ಶಾಲೆಯೆಂದರೆ ನಿಮಗೆ ಅರ್ಥವಾಗಲಿಕ್ಕಿಲ್ಲ. ಇಂಗ್ಲಿಷ್ ಭಾಷೆಯ ವ್ಯಾಮೋಹದಿಂದ, ಎಲ್ಲಾ ಅವರನ್ನೇ ಅನುಸರಿಸುವ ಶಾಲೆಯಾಗಿತ್ತು. ಕಾಡಿನಲ್ಲಿ ಹುಟ್ಟಿ, ಬೆಳೆದು ನಾಡಿಗೆ ಬಂದ ನನ್ನ ಮಗು, ಕಾಡುಪ್ರಾಣಿಗೆ, ಆ ಪರಿಸರವನ್ನು ಅರಗಿಸಿಕೊಳ್ಳುವಷ್ಟು ಶಕ್ತಿಯಿರಲಿಲ್ಲ. ಅಂತೆಯೇ ಮನಸ್ಸಿನಲ್ಲಿ ಆತನ ದುಗುಡ, ದುಮ್ಮಾನದ ಅರಿವೂ ನನಗೂ ಮತ್ತು ನನ್ನ ಹೆಂಡತಿಯ ಮನಸ್ಸಿಗೆ ಬಾರದಿರಲಿಲ್ಲ. ಆದರೂ, ನಾವು ಪರಿಸರಕ್ಕೆ ಒಗ್ಗುವಂತೆ ಪ್ರೇರೇಪಿಸುತ್ತಿದ್ದೆವು. ಆದರೆ, ಆತನ ಮನಸ್ಸು ಮುದುಡಿಕೊಂಡಿತ್ತು, ಯಾವುದೇ ದಿನವಹಿ ಚಟು

Sri Vidyabharathi Book Centre, Sringeri

CC-O. In Public Domain. Digitized by eGangotri

ವಟಿಕೆಯಲ್ಲಿ ಉತ್ಸಾಹಹೀನನಾಗಿ, ತನ್ನ ಗುಂಗಿನಲ್ಲಿ ತನ್ನ ಪ್ರತ್ಯೇಕ ಪ್ರಪಂಚವನ್ನು ನಿರ್ಮಿಸಿಕೊಂಡಿದ್ದನು.

ನನ್ನ ಮತ್ತು ನನ್ನ ಹೆಂಡತಿಯ ಪ್ರೀತಿಯ ಕುರುಹಾಗಿದ್ದ ಮಗನ ಚರ್ಯೆ ದಿನಗಳೆದಂತೆ ವಿಪರೀತವಾಗತೊಡಗಿತು. ಮಂಕು ಹಿಡಿದವನಂತೆ ದಿನನೂಕುತ್ತಿದ್ದ ಎಂಟು ವರ್ಷದ ಬಾಲಕನ ಸಮಸ್ಯೆಯೇನೆಂದು ನಮಗರಿವಾಗಲಿಲ್ಲ. ಆತನ ಸಮವಯಸ್ಸಿನ ಮಕ್ಕಳೊಡನೆ ಮಿಳಿತವಾಗಿ ನಕ್ಕು ನಲಿಯುವ ಶಕ್ತಿ ಆತನಲ್ಲಿರಲಿಲ್ಲ. ಯಾವಾಗಲೂ ಅಧೋಮುಖಿನಾಗಿ ಯಾರ ಗೋಜಿಗೂ ಹೋಗದೆ, ತನ್ನಷ್ಟಕ್ಕೆ ತಾನು ಕಾಲ ಕಳೆಯುತ್ತಿದ್ದ ಅವನು ನಮಗೆ ಬಿಡಿಸಲಾಗದ ಸಮಸ್ಯೆಯಾದನು.

ಕಾಡಿನ ಪರಿಸರದಲ್ಲಿ, ತನ್ನದೇ ಮನೋ ಸಾಮ್ರಾಜ್ಯ ಸೃಷ್ಟಿಸಿಕೊಂಡಿದ್ದ ಆ ಎಳೆ ವಯಸ್ಸಿಗೆ ಅನಿರಿಕ್ಷಿತ ಬದಲಾವಣೆ ಇಳಿಯಲಾರದ ತುತ್ತಾಗಿತ್ತು.

ಕಡೆಗೊಮ್ಮೆ ನನ್ನ ಮಗು ಹಾಸಿಗೆ ಹಿಡಿಯಿತು. ಅಷ್ಟು ಸಣ್ಣ ವಯಸ್ಸಿನಲ್ಲಿ ಆದೇಕೆ ಹೀಗಾಯಿತೆಂದು ನೋಡಿದಾಗ, ಆತನ ಶಾಲೆಯಲ್ಲಿ ಇಂಗ್ಲೀಷ್ ಕಲಿಯುವ ಮಕ್ಕಳೆಲ್ಲಾ ಭಾರಿ ಭಾರಿ ಕುಳದವರ ಕುಟುಂಬಕ್ಕೆ ಸೇರಿದವರೆಂದು ಗೊತ್ತಾಯಿತು. ತಂದೆ ತಾಯಿಗಳ ವರ್ಚಸ್ಸು ಆ ಮಕ್ಕಳ ಮೇಲೆ ಬಿದ್ದು, ಎಲ್ಲರೂ ನಕಲಿ ಬ್ರಿಟೀಷರಂತೆ ವರ್ತಿಸುತ್ತಿದ್ದುದು ಒಂದು ಕಾರಣವಾದರೆ. ಅಂದಿನ ಪರಿಸರದಲ್ಲಿ (Royal Family) ಎಂದು ತಮ್ಮನ್ನು ತಾವೇ ಎತ್ತರಿಸಿಕೊಂಡ, ಬ್ರಿಟಿಷ್ ಭಕ್ತರ ಉಪಟಳವೂ ಮತ್ತೊಂದು. ಎಲ್ಲರಿಗೂ ಅಂದು ಸುಲಭದಲ್ಲಿ ಆ ಇಂಗ್ಲೀಷ್ ಶಾಲೆಯಲ್ಲಿ ಕಲಿಯುವ ಅವಕಾಶವಿರಲಿಲ್ಲ. ಆ ಡಾಂಭಿಕತನದ, ಮೇರೆ ಮೀರಿದ ಅಂತಸ್ತೇ ಅಂದು ಅಳತೆಗೋಲಾದುದರಿಂದ ನನ್ನ ಮಗನು ಅವರ ದೃಷ್ಟಿಯಲ್ಲಿ ಬಹಳ ಕೀಳು ಮಟ್ಟದವನಂತೆ ಪರಿಗಣಿಸಲ್ಪಟ್ಟಿದ್ದನು. ಶಾಲಾ ಉಪಾಧ್ಯಾಯರೂ ಕೂಡ ಈತನನ್ನು ಗಣನೆಗೆ ತೆಗೆದುಕೊಳ್ಳದೆ, ಅಂದಿನ ಬ್ರಿಟಿಷ್ ಅನುಯಾಯಿಗಳೆಂದು ಅವರ ಆಚಾರ ವಿಚಾರ, ಎಲ್ಲವನ್ನು ಆರಗಿಸಿಕೊಂಡು, 'ಕಪ್ಪು ಬ್ರಿಟಿಷರಾಗಿದ್ದವರ ಮಕ್ಕಳನ್ನು ತಲೆಯ ಮೇಲೆ ಹೊತ್ತಿದ್ದರು. ಇದ್ದ ಒಂದೇ ಶಾಲೆಯಲ್ಲಿ ಹತಾಶನಾದ ನನ್ನ ಮಗ ಮನೋವ್ಯಾಧಿಯಿಂದ ಹಾಸಿಗೆ ಹಿಡಿದುದರಲ್ಲಿ ಆಶ್ಚರ್ಯವಿಲ್ಲ.

ಅಂದಿನ ಕಾಲದಲ್ಲಿ ಬ್ರಿಟಿಷ್ ಅಧಿಕಾರಿಗಳೇ ಎಲ್ಲಾ ಖಾತೆಯ ಮುಖ್ಯಾಧಿಕಾರಿಗಳಾಗಿದ್ದು, ಕೆಲವು ಸ್ಥಳೀಯರು ಅವರ ಸಹಾಯಕರಾಗಿ 'ಕಪ್ಪು ಬ್ರಿಟಿಷ್' ನಂತೆ ವರ್ತಿಸುತ್ತಿದ್ದರು. ಅವರ ಹಾವಭಾವ, ಭಾಷೆ, ಉಡುಗೆ, ರೀತಿ,

Sri Vidyabharathi Book Centre, Sringeri

CC-O. In Public Domain. Digitized by eGangotri

ನೀತಿ ಎಲ್ಲವೂ ಬ್ರಿಟಿಷರದೇ ಆಗಿದ್ದು, ಅವರನ್ನು ಅನುಸರಿಸದವನು, ಇಂಗ್ಲಿಷಿನಲ್ಲಿ ಮಾತಾಡದವನು, ಕೀಳುಮಟ್ಟದವನೆಂದು ಪರಿಗಣಿಸಲ್ಪಡುತ್ತಿದ್ದನು. ಇಂಗ್ಲಿಷ್ ಅಂದು ತಾರಕ-ಮಂತ್ರವಾಗಿತ್ತು. (ಇಂದೂ ಅದೇ ನಡೆಯುತ್ತಿದೆ) ಎಲ್ಲಾ ಈ "ಕಪ್ಪು ಬ್ರಿಟಿಷರ" ತಲೆಯಲ್ಲಿ ಹ್ಯಾಟುಗಳು, ಕುತ್ತಿಗೆಯಲ್ಲಿ ಕಂಠಲಂಗೋಟಿಗಳು, ಕಾಲಲ್ಲಿ ಬೂಟುಗಳು, ಸೂಟುಗಳಿಲ್ಲದಿದ್ದರೆ, ಅವನು ಗಣ್ಯನಲ್ಲವೆಂದು ಪರಿಗಣಿಸಲಾಗುತ್ತಿತ್ತು. ಈ ವಾತಾವರಣದಲ್ಲಿ ನಾನೇನೋ ನಿಭಾಯಿಸಬಲ್ಲವನಾಗಿದ್ದೆ. ಆದರೆ, ಕಾಡಿನಲ್ಲಿ ಕುರುಬರ ಮಕ್ಕಳೊಡನೆ ಅವರ ಭಾಷೆ, ಅವರ ಸಂಸ್ಕೃತಿಯಲ್ಲಿ ಬೆಳೆದ ನನ್ನ ಮಗು, ಒಮ್ಮೆಗೆ ಪರಿವರ್ತನೆಯಾಗಲು ಸಿದ್ಧನಿರಲಿಲ್ಲ– ಶಾಲೆಯಲ್ಲಿ ಸಹಪಾಠಿಗಳ ಕೀಳರಿಮೆ, ಮನೆಗೆ ಬಂದರೆ ಸಮವಯಸ್ಕ ಮಕ್ಕಳ ತಾತ್ಸಾರ, ಇವೆಲ್ಲಾ ಆತನ ಎಳೆ ಮನಸ್ಸಿನಲ್ಲಿ ಆಂದೋಲನವನ್ನೇ ಉಂಟುಮಾಡಿತ್ತು.

ಕಾಯಲೆಯಾಗಿ ಹಾಸಿಗೆ ಹಿಡಿದ ನನ್ನ ಒಬ್ಬನೇ ಮಗನನ್ನು ರಕ್ಷಿಸಿಕೊಳ್ಳಲು ಅದೆಷ್ಟೋ ಪ್ರಯತ್ನ ನಡೆಸಿದೆ. ಮನೋವ್ಯಾಧಿಗೆ ಔಷಧಿಯೆಲ್ಲಿ? ದಿನಗಳೆಯುತ್ತಾ ಆತನ ದೇಹ ಸ್ಥಿತಿ ಮರುಕ-ಪಡುವಂತಾಗಿ, ಕಡೆಗೊಮ್ಮೆ ಕಣ್ಮುಚ್ಚಿಕೊಂಡನು. ಅಂದಿಗೆ ನನ್ನ ಬಾಳು ಅಂತ್ಯವಾಯಿತ್ತೆಂದೇ ಹೇಳಬೇಕು. ಮಗುವಿನ ಮರಣದಿಂದ ನನ್ನ ಹೆಂಡತಿ ಮೂಲೆ ಹಿಡಿದಳು. ನನಗೆ ಬೇರೇನೂ ಮಾಡಲಾಗದೆ, ಮಂಕು ಹಿಡಿದವನಾದೆ. ಕಾಡಿನಲ್ಲಿ ಅಕ್ಕನನ್ನು ಮಣ್ಣು ಮಾಡಿ, ನಾಡಿನಲ್ಲಿ ನನ್ನ ಜೀವನದ ಕುಡಿ, ಮಗನನ್ನು ಮಣ್ಣು ಮಾಡಿದಾಗಲೇ ನಾನು ಜೀವಂತ ಹೆಣವಾಗಿದ್ದೆ. ನನಗೆ ಇನ್ಯಾವ ಮಹತ್ಕಾರ್ಯ ಮಾಡಲು ಇಲ್ಲವಾದರೂ, ಕೈ ಹಿಡಿದ, ಏನೂ ಪಾಪವರಿಯದ ಹೆಂಡತಿಗಾಗಿ ಕುಟುಕು ಜೀವ ಹಿಡಿದಿದ್ದೆ. ಆಯುಷ್ಯವಿರುವವರೆಗೆ ಬದುಕಲೇಬೇಕು. ಅದು ಭಗವಂತನ ಆಜ್ಞೆಯೆಂದು ನನ್ನ ದಿನಚರಿಯನ್ನು ಮುಕ್ತಾಯ ಮಾಡಿ ವಿರಮಿಸುತ್ತೇನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ನಮ್ಮ ಇತ್ತೀಚಿನ ಪ್ರಕಟಣೆಗಳು

ಮರುಳ ಮುನಿಯನ ಕಗ್ಗ	ಡಿ. ವಿ. ಜಿ.	12–50
ಪರದೇಶಿಯಾದಾಗ (ಪ್ರವಾಸ ಅನುಭವ)	ಡಾ. ಎಚ್. ಕೆ. ರಂಗನಾಥ್	12–00
ಕಥಾ ಪ್ರವಾಹ	ಎನ್. ಕೆ. ನರಸಿಂಹಮೂರ್ತಿ	8–00
ಧರ್ಮಸ್ಥಳ ಮಂಜುನಾಥ	ರಸಿಕಪ್ರತ್ತಿಗೆ	12–00
ಪೊನೇಷನ್–ಧರ್ಮ (ಜೋಡಿ ಕಾದಂಬರಿ)	ವಸಂತೀ ಚಂದ್ರ	12–00
ಮನೆಯಲ್ಲಿಯೇ ದೃಷ್ಟಿದೋಷಗಳ ಪ್ರತಿಬಂಧನೆ ಮತ್ತು ನಿವಾರಣೆ	ಎಚ್. ಎನ್. ಎಮ್. ಪ್ರಸನ್ನ	8–00
ಬೇಟೆ ನೆನಪು (ಅನುಭವ)	'ಕಾಕೆಮಾನಿ'	8–00
ಹ್ಯಾಮ್ಲೆಟ್ (ನಾಟಕ)	ಪರ್ವತವಾಣಿ	10–00
ಹೊನ್ನಳ್ಳಿಯಲ್ಲೊಮ್ಮೆ (ಕಾದಂಬರಿ)	'ಗಂಗಾ' ಪಾದೇಕಲ್	6–00
ಅಪರಂಜಿ (ಕಾದಂಬರಿ)	ವಿಜಯ ಸಾಸನೂರ	6–00
ಸೇಸೆ (ವಿಚಾರ)	ಹಮೀದ್ ಅಲ್ಮಾಸ್	4–00
ಬಹಳ ತಡವಾಡಿದಿ (ಕಾದಂಬರಿ)	ಅಲಿಮ್ ಮಸರೂರ ಅನು : ಎಂ. ದಸ್ತಗೀರ್	18–00
ತಾಳ ತಪ್ಪಿದ ಮೇಳ	ವೈ. ಕೆ. ಸಂಧ್ಯಾ ಶರ್ಮಾ	10–00

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಬ್ರಿಟಿಷರ ಆಡಳಿತದ ಕಾಲದಲ್ಲಿ ಸೇವೆ ಸಲ್ಲಿಸಿದ ಅರಣ್ಯಾಧಿಕಾರಿಯೊಬ್ಬರು ಬರೆದ ದಿನಚರಿಯ ಸಂಕ್ಷೇಪ ರೂಪ — ಅರಣ್ಯಾಧಿಕಾರಿಯ ದಿನಚರಿ.

ನೌಕರಿಯ ವೈಖರಿ, ಕಾಡಿನ ಅನುಭವ, ಕಾಡಾಡಿಗಳ ಮಂತ್ರ ತಂತ್ರ ವಿದ್ಯೆ, ಕಾಡುಪ್ರಾಣಿಗಳ ವಿಚಿತ್ರ ವರ್ತನೆ ಇವೇ ಮುಂತಾದುವುಗಳು ದಿನಚರಿಯಲ್ಲಿ ತುಂಬಾ ಸ್ವಾರಸ್ಯವಾಗಿ ಚಿತ್ರಿತವಾಗಿವೆ.

ಖ್ಯಾತ ಲೇಖಕ 'ಕಾಕೆಮಾನಿ'ಯವರು ಅರಣ್ಯಾಧಿಕಾರಿಯ ದಿನಚರಿಯಲ್ಲಿನ ಘಟನೆಗಳನ್ನು ತಮ್ಮ ಸರಳ ಸುಂದರ ಆಕರ್ಷಕ ಶೈಲಿಯಲ್ಲಿ ಒಪ್ಪವಾಗಿ ಜೋಡಿಸಿ, ಸಾಹಿತ್ಯದ ಚೌಕಟ್ಟಿನಲ್ಲಿ ಕೂರಿಸಿದ್ದಾರೆ.

ಕಾಡೆಲ್ಲಾ ನಾಡಾಗಿರುವ ಈ ಕಾಲದಲ್ಲಿ, ಕಾಡಿನ ಭೀಕರ ಗತ ವೈಭವವನ್ನು ಕಣ್ಮುಂದೆ ತಂದು ನಿಲ್ಲಿಸುವ ಕೃತಿ — 'ಅರಣ್ಯಾಧಿಕಾರಿಯ ದಿನಚರಿ'.

ಐಬಿಎಚ್ ಪ್ರಕಾಶನ
ಗಾಂಧಿನಗರ ಬೆಂಗಳೂರು 560 009

Sri Vidyabharathi Book Centre, Sringeri